ಕ್ಷೇತ್ರದಲ್ಲಿಯೂ ಕೂಡ ಇದೇ ತೊಂದರೆ ಆಗಿದೆ. 15 ದಿವಸಕ್ಕೊಂದು ಸಾರಿ ಅಥವಾ ಪ್ರತಿ ತಿಂಗಳಿಗೊಂದು ಸಾರಿ ಕಾಡಾನೆ ತುಳಿತದಲ್ಲಿ ಸಾಯುವವರ ಸಂಖ್ಯೆ ಹೆಚ್ಚಾಗಿದ್ದು, ಜನರ ಜೀವಕ್ಕೆ ಬೆಲೆ ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ, ಕಾಡಾನೆ ಹಾವಳಿಯನ್ನು ತಡೆಯುವುದರ ಜೊತೆಗೆ ಜನರ ಜೀವವನ್ನು ಉಳಿಸುವಂಥ ಕೆಲಸ ಆಗಬೇಕು. ಅದರ ಜೊತೆಗೆ ಕಾಡಾನೆ ತುಳಿತದಿಂದ ಸತ್ತ ಕುಟುಂಬದವರಿಗೆ 3 ಲಕ್ಷ ರೂಪಾಯಿ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಕಾಡಾನೆ ಮತ್ತು ಕಾಡು ಪ್ರಾಣಿಗಳಿಂದ ಒಂದು ಕಡೆ ರೈತ ಬೆಳೆದಂಥ ಬೆಳೆ ನಾಶವಾಗುತ್ತಿದೆ ಮತ್ತೊಂದು ಕಡೆ ಕಾಡಾನೆ ಹಾವಳಿಯಿಂದ ಸಾವನ್ನಪ್ಪುವಂಥದು ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಮೊನ್ನೆ ದಿವಸ ಅರಣ್ಯ ಇಲಾಖೆ ಬಗ್ಗೆ ರಿವ್ಯೂ ಮಾಡುವಂಥ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚಿಸುವಾಗ ಕಾಡಾನೆಗಳು ಕಾಡು ಬಿಟ್ಟು ಊರುಗಳಿಗೆ ಬಂದು ಊರಿನಲ್ಲಿಯೇ ಓಡಾಡುವಂಥ ದುಸ್ಥಿತಿ ಬಂದಿದ್ದು, ಇದನ್ನು ತಡೆಯುವುದಕ್ಕೆ ಏನೇನು ವಿಶೇಷವಾದಂಥ ಕ್ರಮಗಳನ್ನು ಕೈಗೊಳ್ಳಬೇಕಾಗಿದೆಯೋ ಅವೆಲ್ಲವನ್ನು ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದೇನೆ. ಮತ್ತೆ ಅದಕ್ಕೆ ಅಗತ್ಯವಿರುವ ಮೇವು ಕಾಡಿನಲ್ಲಿಯೇ ಸಿಗುವುದಕ್ಕೆ ಬೇಕಾಗಿರುವಂಥ ವ್ಯವಸ್ಥೆಯ ಬಗ್ಗೆ ನಾವು ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ. ಒಟ್ಟಾರೆ ರೈತನ ಬೆಳೆ ಉಳಿಸುವುದರ ಜೊತೆಗೆ ರೈತನ ಪ್ರಾಣ ಕೂಡ ಉಳಿಸಬೇಕಾಗಿದೆ. ಕಾಡಾನೆ ತುಳಿತದಿಂದ ಮೃತಪಟ್ಟವರ ಕುಟುಂಬಕ್ಕೆ ತತ್‌ಕ್ಷಣ ಎರಡು ಲಕ್ಷ ರೂಪಾಯಿ ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಈ ಬಗ್ಗೆ ಇನ್ನು ಒಂದು ವಾರದಲ್ಲಿ ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತೇನೆಂಬ ಭರವಸೆಯನ್ನು ಈ ಸದನದಲ್ಲಿ ನಾನು ಕೊಡುತ್ತೇನೆ.

ಶ್ರೀ ಅಪ್ಪಚ್ಚುರಂಜನ್:– ಕಾಡಾನೆ ತುಳಿತದಿಂದ ಮೃತಪಟ್ಟ ಕುಟುಂಬಕ್ಕೆ ನೀಡುವ ಪರಿಹಾರವನ್ನು 2 ಲಕ್ಷ ರೂಪಾಯಿಗೆ ಏರಿಸುವುದಕ್ಕಾಗಿ ತೀರ್ಮಾನ ತೆಗೆದುಕೊಂಡ ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ನಿಯಮ 69ರ ಮೇಲೆ ಚರ್ಚೆ

ವಿಷಯ: ಸನ್ಮಾನ್ಯ ಲೋಕಾಯುಕ್ತರಾದ ಶ್ರೀ ಸಂತೋಷ್ ಹೆಗಡೆಯವರ ರಾಜೀನಾಮೆ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ರೂಲಿಂಗ್

ಪಾರ್ಟಿಯಾದ ಬಿಜೆಪಿ ಪಕ್ಷದವರು ಅಂದರೆ ಸರ್ಕಾರದ ಕಡೆಯವರು ನಿನ್ನೆ ದಿವಸ ನಡೆಯಬೇಕಾಗಿದ್ದ ಇಡೀ ದಿವಸದ ಅಸೆಂಬ್ಲಿಯನ್ನು ಹಾಳು ಮಾಡಿದರು. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಪೆಟ್ರೋಲಿಯಂ ಪ್ರಾಡಕ್ಟ್ಸ್ ಬೆಲೆ ಏರಿಸಿದ್ದಾರೆಂದು ನಿನ್ನೆ ಮಾಡಿದ ಬಂದ್‌ನಿಂದ ರಾಜ್ಯ ಸರ್ಕಾರಕ್ಕೆ ಸುಮಾರು 725 ಕೋಟಿ ನಷ್ಟವಾಗುವುದಕ್ಕೆ ಕಾರಣವಾಗಿದೆ. ನಿನ್ನೆ ಮಾಡಿದ ಬಂದ್‌ನಿಂದ ಇಡೀ ದೇಶದಲ್ಲಿ 13 ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ ಎಂದು Industries bodies and association ರವರು ಅಂದಾಜು ಮಾಡಿದ್ದಾರೆ. That mean to say, it is very big loss to the Country and to the State. ರಾಜ್ಯದ GPD ಗೆ 725 ಕೋಟಿ ರೂಪಾಯಿ ನಷ್ಟವಾಗಿದೆ. ಮಹಾರಾಷ್ಟ್ರ ರಾಜ್ಯಕ್ಕೆ ಸುಮಾರು 1 ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವಾಗಿರುವುದರಿಂದ ಇದು ಇಡೀ ದೇಶದಲ್ಲಿಯೇ No.1 State ಆಗಿದೆ ಎಂದು ಹೇಳುತ್ತಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ 725 ಕೋಟಿ ನಷ್ಟವಾಗಿದೆ. ಕೊಲ್ಕತ್ತಾ comes in 3rd position. ಮತ್ತೆ ಬೇರೆ ಬೇರೆ ರಾಜ್ಯಗಳಲ್ಲಿ ಸುಮರು 150, 100 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಅಂದಾಜು ಮಾಡಿದ್ದಾರೆ. ಅಸೆಂಬ್ಲಿಗೆ ಬಂದು ಗಲಾಟೆ ಮಾಡಿ ನಡೆಯಬಾರದ ರೀತಿ ಮಾಡಿದ್ದಾರೆ. ಕರ್ನಾಟಕದ ರಾಜ್ಯದ ವಿಧಾನಸಭೆ ಇತಿಹಾಸದಲ್ಲಿ ಯಾವತ್ತೂ ಕೂಡ ಪೋಸ್ಟರ್‌ಗಳನ್ನು ಹಿಡಿದುಕೊಂಡು ಪ್ರದರ್ಶನ ಮತ್ತು ಗಲಾಟೆ ಮಾಡಿ ರೂಲಿಂಗ್ ಪಾರ್ಟಿಯವರು ಅಸೆಂಬ್ಲಿಯನ್ನು ನಡೆಯದ ರೀತಿಯಲ್ಲಿ ಮಾಡಿರತಕ್ಕಂಥದ್ದು ಇತಿಹಾಸದಲ್ಲಿ ಇದೇ ಮೊದಲು. ಮಾನ್ಯ ಅಧ್ಯಕ್ಷರಿಗೂ ಕೂಡ ಇದರ ಬಗ್ಗೆ ಬೇಸರವಾಯಿತು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ನಾಯಕತ್ವ ವಹಿಸಿದ್ದರು. ಅದು ಏನೇ ಇರಲಿ, ಇದಕ್ಕೆ ಅವರೇ ಜವಾಬ್ದಾರರಾಗುತ್ತಾರೆ. ಕೇರಳ ಕೋರ್ಟ್‌ನಲ್ಲಿ 1977 ಅಥವಾ 1978ರಲ್ಲಿ ಇದರ ಬಗ್ಗೆ ಒಂದು ತೀರ್ಮಾನವಾಗಿದೆ. ಅದೇನೆಂದರೆ, Why this Bundh is illegal ಎಂದು ಒಂದು news item ಬಂದಿದೆ. ಮತ್ತೆ ಇದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ 1998 ರಲ್ಲಿ ಮತ್ತು 1997ರಲ್ಲಿ ಕೇರಳ ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಯಾರು ಬಂದ್ ಮಾಡಿರುತ್ತಾರೆ ಅಂದರೆ, ಬಂದ್ ಕಾಲ್ ಮಾಡಿರುವಂಥಹ political party ಅಥವಾ ಸರ್ಕಾರ ಏನಾದರೂ ಬಂದ್ ಕಾಲ್ ಮಾಡಿದರೆ ಅದರಿಂದ ಆಗತಕ್ಕಂಥ ನಷ್ಟಕ್ಕೆ ಹೆಚ್ಚು ಜವಾಬ್ದಾರಿಯನ್ನು ಹೊರಬೇಕಾಗುತ್ತದೆಂದು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಈ ರೀತಿಯಾದ ತೀರ್ಪುಗಳನ್ನು ಕೊಟ್ಟಿವೆ. ಇವತ್ತಿನ ದಿವಸ ಅಧಿಕಾರ ನಡೆಸತಕ್ಕಂಥ ಪಕ್ಷವೇ ಈ ಬಂದ್ ಅನ್ನು ಹರತಾಳ ಮಾಡಿದ್ದಾರೆ. ಕೇರಳದ ಕಮ್ಯೂನಿಸ್ಟ್ ಪಾರ್ಟಿಯವರು ಇದು ಬಂದ್ ಅಲ್ಲ, ಇದೊಂದು ಹರತಾಳ ಎಂದು ಬೇರೆ ಹೆಸರನ್ನು ಇಟ್ಟಿದ್ದಾರೆ. Whether it is Bundh or Harthal, whatever is the loss caused to the Country

or to the State, the ruling party will be held responsible, the Government will be held responsible. ಇಂಥ ಸಂಧರ್ಭದಲ್ಲಿ ಸರ್ಕಾರ ಇನ್ನು ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂಬುದು ತೀರ್ಮಾನವಾಗಿದೆ. ನಿನ್ನೆಯ ಬಂದ್‌ನಿಂದ ಸರ್ಕಾರದ GDP ಗೆ 725 ಕೋಟಿ ರೂಪಾಯಿ ನಷ್ಟವಾಗಿದೆ ಮತ್ತೆ ಜನರಿಗೆ ಆಗಿರುವ ತೊಂದರೆಗೆ ನೀವೇ ಜವಾಬ್ದಾರರು. ಮಾನ್ಯ ಮುಖ್ಯ ಮಂತ್ರಿಗಳ ಸರ್ಕಾರ, ಅಂದರೆ ಮಾನ್ಯ ಗೃಹ ಮಂತ್ರಿಗಳು ಮತ್ತು ಮಾನ್ಯ ಕಾನೂನು ಮಂತ್ರಿಗಳು ಅಂದರೇ ಇಡೀ ಸರ್ಕಾರ ಇದಕ್ಕೆ ಜವಾಬ್ದಾರಿಯಾಗಿದೆ.

ಶ್ರೀ ಸಿ.ಟಿ. ರವಿ:–ಹಾಗಾದರೆ, ಬೆಲೆ ಏರಿಕೆಗೆ ನಿಮ್ಮ ಸಮರ್ಥನೆ ಇದೆ ಎಂದಾಯಿತು. ಜನ ಸಾಮಾನ್ಯರ ಅಗತ್ಯವಾದ ವಸ್ತುಗಳಿಗೆ ಬೆಲೆ ಏರಿಕೆ ಮಾಡಿರುವುದನ್ನು ನೀವು ಸಮರ್ಥಿಸುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ:– ಅದರ ಬಗ್ಗೆ ಚರ್ಚೆ ಮಾಡೋಣವೇ ?

ಶ್ರೀ ಸಿ.ಟಿ. ರವಿ:– ಖಂಡಿತವಾಗಿ ಚರ್ಚೆ ಮಾಡೋಣ.

ಶ್ರೀ ಸಿದ್ಧರಾಮಯ್ಯ:– ಹಾಗಾದರೆ, ಚರ್ಚೆಗೆ ತೆಗೆದುಕೊಂಡು ಬನ್ನಿ, If you want to bring for discussion, I am ready for discussion.

ಡಾ: ಹೆಚ್.ಸಿ ಮಹಾದೇವಪ್ಪ:– ನಿನ್ನೆ ದಿವಸ ಇಲ್ಲಿ ತಾವುಗಳು ಗಲಾಟೆ ಮಾಡುವುದರ ಬದಲು ಚರ್ಚೆ ಮಾಡಬಹುದಾಗಿತ್ತಲ್ಲವೆ ?

ಶ್ರೀ ಸಿ.ಟಿ. ರವಿ:– ಚರ್ಚೆಗೆ ನಾವು ತಯಾರಿದ್ದೆವು. ಈಗಲೂ ಸಹ ಚರ್ಚೆಗೆ ತಯಾರಿದ್ದೇವೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:– ಚರ್ಚೆ ಮಾಡುವುದಕ್ಕೆ ತಯಾರಿದ್ದೀರಾ? ಈ ರೀತಿಯಾದ political gimmicks ಅನ್ನು ಜನ ಅರ್ಥ ಮಾಡಿಕೊಳ್ಳುತ್ತಾರೆ. ನಿಮ್ಮ political gimmicks ಅನ್ನು the people of Karnataka can understand ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ:– ನಿನ್ನೆ ದಿವಸ ದೇಶವ್ಯಾಪ್ತಿ ನಡೆದಿರುವಂಥ ಬಂದ್ ಜನರ ಭಾವನೆ ಏನೆಂಬುದಕ್ಕೆ ಒಂದು ಮೆಸೇಜ್ ಆಗಿದೆ.

ಶ್ರೀ ಸಿದ್ಧರಾಮಯ್ಯ:– ಈ ರೀತಿಯಾಗಿ ಇಲ್ಲಿ ನಡೆಯಬಾರದೆಂದು ನಾನು ಪ್ರಾಸ್ತಾವಿಕವಾಗಿ ಪ್ರಸ್ತಾಪ ಮಾಡಿದ್ದೇನೆ. It is a Government Sponsored bundh.

The chief Minister made a call, ಅರಮನೆ ಮೈದಾನದಲ್ಲಿ ನಾಳೆ ದಿವಸ ಬಂದ್‌ಗೆ ಸಹಕರಿಸಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡಿದ್ದಾರೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನದಲ್ಲಿ ಅಭೂತಪೂರ್ವವಾಗಿ ಬಂದ್ ಯಶಸ್ವಿಯಾಗಿರುವುದು ಕೂಡ ಕರ್ನಾಟಕಕ್ಕೆ ಗೊತ್ತಿದೆ. ಜನರ ಭಾವನೆ ಅರ್ಥವಾಗದಿದ್ದರೆ ನಾವೇನು ಹೇಳುವುದು ?

ಶ್ರೀ ಸಿದ್ದರಾಮಯ್ಯ:– ಎಲ್ಲಾ ಕೂಡ ಅಭೂತಪೂರ್ವವೇ. ನಿಮ್ಮ ಭಾಷೆಗಳೆಲ್ಲಾ ಅಭೂತ ಪೂರ್ವವೇ ಆಗಿದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ತಮಿಳುನಾಡಿನಲ್ಲಿ ಮಾಡಿದ್ದು ಅಭೂತಪೂರ್ವ, ಆಯಿತು ಕುಳಿತುಕೊಳ್ಳಿ. ಸರ್ಕಾರವೇ ನಿಂತುಕೊಂಡು ಬಂದ್ ಮಾಡಿಕೊಂಡು ಕುಳಿತುಕೊಂಡರೆ ಏನಾಗುತ್ತದೆ ? ಅಯಿತು ಪೆಟ್ರೋಲ್, ಡೀಸೆಲ್ ಬೆಲೆಯನ್ನು ಕಡಿಮೆ ಮಾಡಿಸಿ ನಿಮ್ಮ ರಾಜ್ಯಕ್ಕೆ ಆದಾಯ ಹೆಚ್ಚಿಗೆ ಆಗಿರುವುದರಿಂದ 20% ಕಡಿಮೆ ಮಾಡಿಸಿ. ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿಯಾಗಿರುವುದರಿಂದ ಈ ಸರ್ಕಾರಕ್ಕೆ ಆದಾಯ ಜಾಸ್ತಿಯಾಗಿರುತ್ತದೆ. ಆ proportionate ಗೆ rate of sale tax ಏನಿದೆ ಅದನ್ನು ಕಡಿಮೆ ಮಾಡಿಸಿ. ಆಗ ನಿಮ್ಮ ಕಾಳಜಿ ಅರ್ಥವಾಗುತ್ತದೆ.

(ಗೊಂದಲ)

ಶ್ರೀಮತಿ ಶೋಭಾ ಕರಂದ್ಲಾಜೆ: ಪೆಟ್ರೋಲ್, ಡೀಸೆಲ್ ದರದಲ್ಲಿ...

ಶ್ರೀ ಸಿದ್ದರಾಮಯ್ಯ: ನೀವು ಬಸ್ಸಿನಲ್ಲಿ ಕುಳಿತು ಕೂಗಾಡುತ್ತಿರುವುದನ್ನು ನಾನು ನೋಡಿದೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: 24% tax ಇದೆ ಅದನ್ನು ಕಡಿಮೆ ಮಾಡಿಸಿ. ಆದಾಯ ನಿಮಗೆ ಜಾಸ್ತಿಯಾಗುತ್ತದೆ ಅದಕ್ಕಾಗಿ ಕಡಿಮೆ ಮಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ಕೇರಳ ರಾಜ್ಯಸರ್ಕಾರ ಹಿಂದಿನಿಂದ ಹೇಳಿರುತ್ತದೆ...

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಕೇಂದ್ರ ಸರ್ಕಾರದವರು ಬೆಲೆ ಹೆಚ್ಚಿಸಿರುವುದರಿಂದ ನಿಮಗೆ ನಾಚಿಕೆಯಾಗಬೇಕು.

ಶ್ರೀ ಬಿ.ರಮಾನಾಥ್ ರೈ: ನಮಗೆ ಏಕೆ, ನಿಮಗೆ ನಾಚಿಕೆಯಾಗಬೇಕು? ನಿಮ್ಮಂತೆ ಟೋಪಿ ಹಾಕಿ ನಾನು ಕುಳಿತುಕೊಳ್ಳಲಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಿಮಗೆ ಟೋಪಿ ಹಾಕುವುದಕ್ಕೆ ಬರಲಿಲ್ಲ. ನಿಮಗೆ ನಾಚಿಕೆಯಾಗಬೇಕು. ಮಾನ, ಮರ್ಯಾದೆ ಇದೆಯೇ?

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ರಮಾನಾಥ್ ರೈರವರೆ, ಆ ತರಹ ಮಾತನಾಡಿದರೆ ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿದ್ದಾರಲ್ಲವೆ ಅವರಿಗೆ ನಾಚಿಕೆಯಾಗುತ್ತದೆ. ದಯವಿಟ್ಟು ಆ ರೀತಿ ಮಾತನಾಡುವುದು ಬೇಡ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಕೆಲಸಕ್ಕೆ ಬಾರದ ಮಾತನಾಡುವುದಕ್ಕೆ ನಿಮಗೆ ನಾಚಿಕೆ ಇರಬೇಕಲ್ಲವೆ?

ಶ್ರೀ ಬಿ. ರಮಾನಾಥ್ ರೈ: ನಿಮಗೆ ನಾಚಿಕೆ ಆಗಬೇಕು.

ಶ್ರೀ ಸಿದ್ದರಾಮಯ್ಯ: ನಾಚಿಕೆ ಬಗ್ಗೆ ಪಾಠ ಹೇಳಿಕೊಡಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಇಬ್ಬರು ಏಕೆ ಮಾತನಾಡಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಬೇಲೆಕೇರಿ ಬಂದರಿನಲ್ಲಿ ಕದ್ದು ಕಬ್ಬಿಣ ಅದಿರು ಸಾಗಣಿಕೆ ಆಗಿದ್ದು ಸುಮಾರು 5 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಅಲ್ಲಿರುವ Port Conservator ಆದ ಮಹೇಶ್ ಬಿಳಿಯಾ ಅವರ ಸ್ವಾಧೀನಕ್ಕೆ Investigation ಆಗುವವರೆಗೆ ನೋಡಿಕೊಳ್ಳಿ ಎಂದು ಕೊಟ್ಟಿರುವುದು. ಇದನ್ನು export ಮಾಡುವುದಕ್ಕೆ ಅವಕಾಶವನ್ನು ಕೊಡಕೂಡದು ಎಂದು ಮಹಜರು ಮಾಡಿ port ಗೆ ಕೊಟ್ಟಿರುವಂಥದ್ದು. ಅವರ ಸ್ವಾಧೀನಕ್ಕೆ ಕೊಟ್ಟ ಮೇಲೆ ಅಷ್ಟು ಅದಿರು 5 ಲಕ್ಷ ಮೆಟ್ರಿಕ್ ಟನ್ ಅದಿರು ಜೂನ್ 2ನೇ ತಾರೀಖು ಹೋಗಿ ನೋಡಿದರೆ Investigation ಇನ್ನು ನಡೆಯುತ್ತಿತ್ತು. ಏಕೆಂದರೆ, 40 ಮೂಟೆ ದಾಖಲಾತಿಗಳಿಂದ ಸಿಕ್ಕಿರುತ್ತದೆ. ಕೂಲಂಕಷವಾಗಿ Investigation ಮಾಡಬೇಕಾಗಿರುವುದರಿಂದ ಇದು ನಿಮ್ಮ ಕಬ್ಜಾದಲ್ಲಿ ಇರಲಿ ಎಂದು ಹೇಳಿ ಅದನ್ನು ಅವರ ಸ್ವಾಧೀನಕ್ಕೆ ಬಿಟ್ಟಿರುತ್ತಾರೆ. ಅದು ಆದ ಮೇಲೆ" "ಕರಾವಳಿ ಮುಂಜಾವು" ಎನ್ನುವ ಒಂದು ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಗುತ್ತದೆ. ಅದು ಆದ ಮೇಲೆ ಅರಣ್ಯ ಅಧಿಕಾರಿಗಳು ಮಹೇಶ್ ಇಲಿಯಾ ಎನ್ನುವ ಅಧಿಕಾರಿಯನ್ನು ಅಲ್ಲಿಗೆ ಕರೆದುಕೊಂಡು

ಹೋಗಿ ನೋಡುತ್ತಾರೆ. ಅಲ್ಲಿಗೆ ಹೋಗಿ ಅದನ್ನು ನೋಡಿದರೆ 8,05,991ಟನ್ ಅದಿರನ್ನು ಏನು ಸೀಜ್ ಮಾಡಿದ್ದರು ಅದನ್ನು ಮಹಜರು ಮಾಡಿದ್ದರು ಏನು ಕೋರ್ಟಿಗೆ ಮಹಜರು ಸಬ್‌ಮಿಟ್ ಮಾಡಿದ್ದರು ಅಲ್ಲಿ ಅದು ಇಲ್ಲ. ಅದರಲ್ಲಿ ಸುಮರು 2 ಲಕ್ಷ ಟನ್ ಕಬ್ಬಿಣ ಅದಿರು ಮಾತ್ರ ಇರುತ್ತದೆ. ಇನ್ನು 6 ಲಕ್ಷ ಟನ್ ಅದಿರು ಎಲ್ಲಿ ಹೋಯಿತು ಎನ್ನುವಂಥದ್ದು ಇವತ್ತಿನವರೆಗೆ ಪತ್ತೆ ಇಲ್ಲ ಅದರ ಬಗ್ಗೆ ಏನು ಎಂದು ಹೇಳುತ್ತಿಲ್ಲ. ಲೋಕಾಯುಕ್ತ report ಪ್ರಕಾರ ನವೆಂಬರ್ ದಿಂದ ಫೆಬ್ರವರಿಯವರೆಗೆ ಈ ಮೂರು ತಿಂಗಳಲ್ಲಿ ಬೇಲಿಕೇರಿ ಮತ್ತು ಕಾರವಾರ ಈ ಎರಡು ಬಂದರಿನಿಂದ 57 ಲಕ್ಷ ಹೆಚ್ಚು ಮೆಟ್ರಿಕ್ ಟನ್.....

ಶ್ರೀ ಬಿ.ಎಸ್. ಯಡಿಯೂರಪ್ಪ: ಮೂರು ದಿವಸಗಳಿಂದ ಅದನ್ನೆ ಹೇಳುತ್ತಿದ್ದೀರಿ. ಹೊಸದು ಏನಾದರೂ ಇದ್ದರೆ ಹೇಳಿ.

ಶ್ರೀ ಸಿದ್ದರಾಮಯ್ಯ: ನೀವು ಇರಲಿಲ್ಲ ಅದಕ್ಕೆ ಹೇಳುತ್ತಿದ್ದೇನೆ. ಹೊಸದನ್ನು ಹೇಳುತ್ತೇನೆ. ನೀವು ಬೇಡವೆಂದರೆ ನಿಲ್ಲಿಸಿ ಬಿಡುತ್ತೇನೆ, ನನಗೇನು ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇನ್ನು ಎರಡು ದಿವಸ ಇದೆ ಚರ್ಚೆ ನಡೆಸುವುದೇ?

ಶ್ರೀ ಸಿದ್ದರಾಮಯ್ಯ: ಚರ್ಚೆ ಮಾಡೋಣವೆಂದು ನೀವೇ ಹೇಳಿರುತ್ತೀರಿ? 57 ಲಕ್ಷ ಮೆಟ್ರಿಕ್ ಟನ್ ಆ ಬಂದರಿಗೆ ಬಂದಿರುತ್ತದೆ. ಆದರೆ ದಾಖಲಾತಿಗಳು ಇದ್ದದ್ದು 21 ಲಕ್ಷ ಮೆಟ್ರಿಕ್ ಟನ್ ಮಾತ್ರ ಇರುವಂಥದ್ದು that means to say ಸುಮಾರು 35 ಲಕ್ಷ ಮೆಟ್ರಿಕ್ ಟನ್ ಅದಿರು ಅದು ಎಲ್ಲಿ extract ಆಗಿ ಹೋಯಿತು? ಅಲ್ಲಿ ಇರುವವರ ಹತ್ತಿರದಿಂದ ಹೇಗೆ transport ಆಯಿತು, ಅದು ಹೇಗೆ ಬಂದರಿಗೆ ಬಂದಿರುತ್ತದೆ ಏನು ದಾಖಲಾತಿಗಳು ಇಲ್ಲ. ಇದು ಬರೀ ಬೇಲಿಕೇರಿ ಮತ್ತು ಕಾರವಾರ ಬಂದರಿಗೆ ಸೀಮಿತವಾಗಿ ಮಾತ್ರ. ಮಂಗಳೂರಿನಿಂದ ಎಷ್ಟು ಹೋಯಿತು ಎನ್ನುವುದು ಇಲ್ಲ. ರೈಲಿನಲ್ಲಿ ಎಷ್ಟು ಹೋಯಿತು ಎಂಬುದರ ಬಗ್ಗೆ ಲೆಕ್ಕ ಇಲ್ಲ. ವಿಶಾಖಪಟ್ಟಣ ಬಂದರಿನಿಂದ ಎಷ್ಟು ಹೋಯಿತು ಎಂಬುದರ ಬಗ್ಗೆ ಲೆಕ್ಕ ಇಲ್ಲ. ಕೃಷ್ಣಪಟ್ಟಣಂನಿಂದ ಅಲ್ಲಿಂದ ಎಷ್ಟು ಹೋಯಿತು ಎಂಬುದರ ಬಗ್ಗೆ ದಾಖಲಾತಿ ಇಲ್ಲ. ಇವುಗಳೆಲ್ಲವನ್ನು ಲೆಕ್ಕ ಹಾಕಿದರೆ ಯಾರು ಕೂಡ ಊಹಿಸುವುದಕ್ಕೆ ಸಾಧ್ಯವಾಗಲ್ಲ ಅಷ್ಟರಮಟ್ಟಿಗೆ ಕದ್ದು ಹೊರ ದೇಶಗಳಿಗೆ ಹೋಗಿದೆ. ನಾವು ಇವುಗಳೆಲ್ಲವನ್ನು ಲೆಕ್ಕಹಾಕಿದರೆ ಇದು ಸುಮಾರು 50–60 ಸಾವಿರ ಕೋಟಿ ರೂಪಾಯಿಗಳು ಆಗಬಹುದು. ಮಾನ್ಯ ಮುಖ್ಯಮಂತ್ರಿಗಳೇ, ಇದು ಹೊಸದರ ಬಗ್ಗೆ ನಾನು ಹೇಳುತ್ತಿದ್ದೇನೆ. ಬೇರೆ ಬೇರೆ ಬಂದರುಗಳಿಂದ ಕದ್ದು ಹೋಗಿದೆಯಲ್ಲಾ ಅದು ಹೊಸದು. ಇದನ್ನು ಅವತ್ತು ಹೇಳಿರಲಿಲ್ಲ. ಇವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುತ್ತಾರೆ. ಕಳ್ಳತನ ಆಗಿ ಹೋಗಿರುವುದು, ಕಳ್ಳತನ ಆಗಿರುವುದು, ನಿಮ್ಮ ಕಾಲದಿಂದಲೂ ಆಗಿದೆ, ಎಲ್ಲಾ ಕಾಲದಿಂದಲೂ ಆಗಿದೆ,

ನಮ್ಮ ಕಾಲದಲ್ಲೂ ಕೂಡ ಆಗಿದೆ ಎಂದು ಹೇಳಿದ್ದಾರೆ. ಅಕ್ರಮವಾಗಿರುವ ಬಗ್ಗೆ ಬೆಳಕಿಗೆ ಬಂದಿರುವುದು ಯಾವಾಗ ಅಂದರೆ, ಅಕ್ರಮ ಗಣಿಗಾರಿಕೆ ನಡೆಯುತ್ತಿದೆ, ಕೋಟ್ಯಾಂತರ ರೂಪಾಯಿಗಳೂ ಸರ್ಕಾರದ ಸಂಪತ್ತು, ಜನರ ಸಂಪತ್ತು, ಖನಿಜ ಸಂಪತ್ತು, ಸರ್ಕಾರಕ್ಕೆ ನಷ್ಟವಾಗುತ್ತಿದೆ ಎಂಬುದು ಬೆಳಕಿಗೆ ಬಂದಿರುವುದು ಯಾವಾಗ ಅಂದರೆ ಇದನ್ನು ಲೋಕಾಯುಕ್ತರಿಗೆ ವಹಿಸಿದ ಮೇಲೆ ಬೆಳಕಿಗೆ ಬಂದಿದೆ, ಲೋಕಾಯುಕ್ತರು report ಕೊಟ್ಟ ಮೇಲೆ ಬೆಳಕಿಗೆ ಬಂದಿದೆ, ಯಾವ ರೀತಿಯಾಗಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂಬುದರ ಬಗ್ಗೆ ಅವರು ವರದಿಯಲ್ಲಿ ಸಂಪೂರ್ಣವಾಗಿ ಬೆಳಕನ್ನು ಚೆಲ್ಲಿದ್ದಾರೆ. ಅಕ್ರಮ ಗಣಿಗಾರಿಕೆಯ ಬಗ್ಗೆ ಮಾನ್ಯ ಲೋಕಾಯುಕ್ತರಿಗೆ ತನಿಖೆ ಮಾಡುವ ಬಗ್ಗೆ ವಹಿಸಿದ್ದು ಸರ್ಕಾರಿ ಆಜ್ಞೆ ದಿ.12.03.2007. ಮೊದಲು ಇದರ Scope Investigation ನ ದಿನಾಂಕ: 1.1.2000 ದಿಂದ 22.07.2000ರದವರೆಗೆ ಕೊಟ್ಟಿದ್ದರು ಆಮೇಲೆ Subsequently ಇನ್ನೊಂದು G.O. ಮಾಡಿ ಇದು 9.9.2008 ರವರೆಗೆ Extend ಮಾಡಲಾಯಿತು. ಇಲ್ಲಿಯವರೆಗೆ ಏನೇನು ಅಕ್ರಮ ಗಣಿಗಾರಿಕೆ ನಡೆದಿದೆ, ಅದರ ಬಗ್ಗೆ ವರದಿಯನ್ನು ಕೊಡುವುದಕ್ಕೆ time ನ್ನು 2004 ಮತ್ತು ಆಮೇಲೆ 2008ರವರೆಗೆ Extend ಮಾಡಿದರು. ಈಗ 24ನೇ ಡಿಸೆಂಬರ್ 2008ರಂದು ಮೊದಲನೆಯ ವರದಿಯನ್ನು ಕೊಟ್ಟಿದ್ದಾರೆ. ಇದು ಲೋಕಾಯುಕ್ತರು ವರದಿಯನ್ನು ಕೊಟ್ಟಿರುವಂತಹ ದಿನಾಂಕ, ವರದಿಯನ್ನು ಕೊಟ್ಟು ಸುಮಾರು ಒಂದು ವರ್ಷದ ಮೇಲೆ 7 ತಿಂಗಳುಗಳಾಗುತ್ತಾ ಬಂದಿದೆ. ಒಂದು ವರ್ಷ ಆರು ತಿಂಗಳು ಮುಗಿದಿದೆ. ಈಗ ಏಳನೆಯ ತಿಂಗಳು ನಡೆಯುತ್ತಿದೆ. ಅದು ಬಳ್ಳಾರಿ ಇರಬಹುದು, ಸಂಡೂರು ಇರಬಹುದು, ಹೊಸಪೇಟೆ ಇರಬಹುದು, ಚಿತ್ರದುರ್ಗ ಇರಬಹುದು, ತುಮಕೂರು ಇರಬಹುದು. ಯವ ಭಾಗದಿಂದಲೂ ಅದಿರು ಹೊರಟರೆ from Bellary to Karwar or Belikere Post ಅದು 7 ಚೆಕ್ ಪೋಸ್ಟ್‌ಗಳನ್ನು ಹಾದು ಹೋಗುತ್ತದೆ. ಫಾರೆಸ್ಟ್‌ನವರ ಚೆಕ್ ಪೋಸ್ಟ್ ಇರುತ್ತದೆ, Mines & Geology department ದು ಇರುತ್ತದೆ. Tansport Department ನ RTO ಇರುತ್ತದೆ. ಆಮೇಲೆ Commercial Tax Department ರವರ checkpost ಇರುತ್ತದೆ. ಇದು ಆದ ಮೇಲೆ ಬಂದರನವರದು ಇರುತ್ತದೆ. ಇವೆಲ್ಲವೂ ಯಾರ ಕೈಗೆ ಸಿಗದೆ ಹೇಗೆ ಹೋಗುತ್ತಿದೆ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ. Deputy Commissioner, Superintendent of Police Department, Deputy Director of Mines & Geology Department, Deputy Conservator of Forest, ಈ ಎಲ್ಲಾ ಅಧಿಕಾರಿಗಳು ಮತ್ತು ಅಲ್ಲಿಂದ ಕಾರವಾರದಲ್ಲಿರುವಂತಹ ಅಧಿಕಾರಿಗಳು ಇಲ್ಲಿಂದ ಅಲ್ಲಿಗೆ ಹೋಗುವುದರಲ್ಲಿ ಸುಮಾರು ಐದು ಜಿಲ್ಲೆಗಳು ಬರುತ್ತವೆ. ಎಲ್ಲಾ

ಅಧಿಕಾರಿಗಳು ಕೂಡ ಎಲ್ಲರ ಕಣ್ಣು ತಪ್ಪಿಸಿ ಹೋಗುವುದಕ್ಕೆ ಆಗುತ್ತದೆಯೇ? ಅದು ಸಾಧ್ಯವೇ ಇಲ್ಲ. ಸರ್ಕಾರಕ್ಕೆ ಗೊತ್ತಿಲ್ಲದೇ ಮಾಡುತ್ತಾರೆಯೇ? ಸಾಧ್ಯವೇ ಇಲ್ಲ. ಅಧಿಕಾರಿಗಳು ಗೊತ್ತಿಲ್ಲದೇ ಮಾಡುತ್ತಾರೆಯೇ? ಅದು ಸಾಧ್ಯವೇ ಇಲ್ಲ. ಒಂದು ದೊಡ್ಡ ಅಕ್ರಮಗಣಿಗಾರಿಕೆಯನ್ನು ಮಾಡುವವರು, ಅಧಿಕಾರಿಗಳು ಎಲ್ಲರ ಒಂದು ಕಳ್ಳರ ಕೂಟ ಇದೆ, ದುಷ್ಟರಕೂಟ ಇದೆ. ಇವರೆಲ್ಲರೂ ಸೇರಿರುವುದರಿಂದಲೇ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. Most importantly Home Minister ರವರು ಇಲ್ಲಿಯೇ ಇದ್ದಾರೆ. ನಿಮ್ಮ ಇಲಾಖೆಯದು ಕೂಡ ಇಲ್ಲಿ ಇದೆ. Forest Department & Mines & Geology Department both are coming under Chief Minister directly. ಮಾನ್ಯ ಮಂತ್ರಿಗಳಾದ ಅಶೋಕ್‌ರವರೆ ನಿಮ್ಮ transport Department ಇದೆ. ಬಸ್‌ಗಳಲ್ಲ, RTO ಗಳು ಇದೆ. ಕಳ್ಳರ ಕೂಟದಲ್ಲಿ RTO ಗಳು ಇದ್ದಾರೆ. Forest ನವರು, Mines & Geologyಯವರು, ಪೊಲೀಸ್ ಇಲಾಖೆಯವರು, ರೆವಿನ್ಯೂ ಇಲಾಖೆಯವರು ಮತ್ತೇ ಅಕ್ರಮಗಣಿಗಾರಿಕೆಯನ್ನು ಮಾಡುತ್ತಾರಲ್ಲಾ ಆ ಕಳ್ಳರ ಕೂಟ ಇದೆ.

ಶ್ರೀ ಎಂ. ಶ್ರೀನಿವಾಸ (ರಾಜರಾಜೇಶ್ವರಿ ನಗರ): ಇದು ಶುರು ಆಗಿದ್ದು ಯಾವಾಗ?

ಶ್ರೀ ಸಿದ್ದರಾಮಯ್ಯ: ಇದು ಯಾವಾಗಲಾದರೂ ಆಗಲಿ, ಆ ಕಾಲದಲ್ಲಿ ಇದ್ದವರು ಈ ಕಾಲದಲ್ಲಿಯೂ ಇದ್ದಾರಲ್ಲಾ?

ಶ್ರೀ ಬಿ. ರಮಾನಾಥ ರೈ: ಇವರೆಲ್ಲರೂ ಎಲ್ಲೆಲ್ಲಿ ಇದ್ದರು ಎಂದು ಅವರ ಇತಿಹಾಸವನ್ನು ನೋಡಬಹುದು.

ಶ್ರೀ ಸಿದ್ದರಾಮಯ್ಯ: ಮಾನ್ಯ ಶ್ರೀನಿವಾಸ್‌ರವರೆ, ನಾವು ಮತ್ತು ನೀವು ಒಳ್ಳೆಯ ಸ್ನೇಹಿತರಾಗಿದ್ದೇವೆ, ನಿಮ್ಮ ಇತಿಹಾಸವನ್ನು ಹೇಳುವುದು ಬೇಡ ತಾವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಸಿ.ಸಿ. ಪಾಟೀಲ್: ನೀವು ಒಳ್ಳೆಯ ಸ್ನೇಹಿತರು, ನಡುವೆ ಏನೋ ಸ್ವಲ್ಪ .. ನೀವು ಏಕೆ ಬಿ.ಪಿ.ರೈಸ್ ಮಾಡಿಕೊಂಡು ಬಂದಿದ್ದೀರಿ.

ಶ್ರೀ ಸಿದ್ದರಾಮಯ್ಯ: ನೀನು ನನ್ನ ಆತ್ಮೀಯ ಸ್ನೇಹಿತ ಅಲ್ಲವಾ?

ಶ್ರಿ ಸಿ.ಸಿ ಪಾಟೀಲ್: ನಾನು ಖಂಡಿತ ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ: 2004ರ ಚುನಾವಣೆಯಲ್ಲಿ ತಾವು ನಿಂತಿದ್ದಾಗ ಓಟನ್ನು ಕೇಳುವುದಕ್ಕೆ ಬಂದಿರಲಿಲ್ಲವೆ. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಇವತ್ತು ಲೋಕಾಯುಕ್ತರು

ಬಹಳ ನೊಂದು ರಾಜೀನಾಮೆಯನ್ನು ಕೊಟ್ಟಿದ್ದರು. ಅವರು ವಾಪಸ್ಸು ತೆಗೆದುಕೊಳ್ಳುತ್ತೇನೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ರಾಜೀನಾಮೆಯನ್ನು ವಾಪಸ್ಸು ತೆಗದುಕೊಳ್ಳುತ್ತಿರುವುದು ನಮಗೂ ಸಂತೋಷ. ಅದು ನಮ್ಮ ಅಭಿಪ್ರಾಯವು ಆಗಿತ್ತು ಮತ್ತು ನಮ್ಮ ಒತ್ತಾಯವು ಸಹ ಇತ್ತು. ಅವರು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅವರು ಭ್ರಷ್ಟಾಚಾರದ ವಿರುದ್ಧ ಯುದ್ಧವನ್ನು ಸಾರಿದ್ದಾರೆ ಅದು ಮುಂದುವರಿಯಬೇಕು. ಅವರ ರಾಜೀನಾಮೆಯಿಂದ ಇಡೀ ರಾಜ್ಯದ ಜನರ ಗಮನಸೆಳೆಯುವಂತಹದ್ದು, ಇಡೀ ರಾಜ್ಯದ ಜನರ ಪ್ರತಿಕ್ರಿಯೆ ಅವರು ಮುಂದುವರಿಯಬೇಕೆಂದು ಇತ್ತು. ಗಣ್ಯರು, ಪತ್ರಿಕೆಯವರು, Editorial ಲೇಖನಗಳು ಎಲ್ಲವೂ ಲೋಕಾಯುಕ್ತರು ಮುಂದುವರಿಯಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಇವತ್ತು ನನ್ನ ಭಾಷಣವನ್ನು ಮುಗಿಸುವಾಗ ಕೊನೆಯಲ್ಲಿ ನಾವು ಒಂದು resolution move ಮಾಡಬೇಕೆಂದು ಇದ್ದೆವು. resolution ಏಕೆಂದರೆ ಇಡೀ ಸದನ ಒಕ್ಕೊರಲಿನಿಂದ ಒಂದು unanimous resolution pass ಮಾಡಬೇಕು. ಲೋಕಾಯುಕ್ತರು ರಾಜೀನಾಮೆ ವಾಪಸ್ಸು ತೆಗೆದುಕೊಳ್ಳಲಿಕ್ಕೆ ಒತ್ತಾಯ ಮಾಡಬೇಕು. ನಾವು ಅದನ್ನು ನಿನ್ನೆಯೇ move ಮಾಡಬೇಕೆಂದು ಇದ್ದೆವು, move ಮಾಡಿ ಇಡೀ ಸದನ ಒಕ್ಕೊರಲಿನಿಂದ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುವುದು ಹಾಗು ಅವರು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳುವಂಥ ವಾತಾವರಣವನ್ನು ಸರ್ಕಾರ ನಿರ್ಮಾಣ ಮಾಡಬೇಕು. It is our demand. ನಾವು ಅದನ್ನು ಮಾಡಬೇಕು ಎಂದು ಇದ್ದೆವು. ಈಗ ಅವರು ವಾಪಸ್ಸು ತೆಗೆದುಕೊಂಡಿದ್ದೇನೆಂದು ಹೇಳಿದ್ದಾರೆ. ಅವರು ರಾಜೀನಾಮೆಯನ್ನು ಕೊಟ್ಟಾಗ ನಿಮ್ಮ ಪ್ರತಿಕ್ರಿಯೆ ಹೇಗಿತ್ತು? ನಿಮ್ಮ ಈ ಪ್ರತಿಕ್ರಿಯೆ ಅವರು ಹೋದರೆ ಸಾಕು ಎನ್ನುವ ರೀತಿ ಇತ್ತು. ಮಾನ್ಯ ಯಡಿಯೂರಪ್ಪನವರು ನಮಗೆ ಮುಜುಗರವಾಗುತ್ತದೆ ಅವರಿಗೆ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುವುದಿಲ್ಲ... Chief Minister ಹೋಗಿ ಬಂದ ಮೇಲೆ ಅಶೋಕ್ ರವರು ಈ ರೀತಿ ಹೇಳುತ್ತಿರುವುದು. ಅಂದಿನಿಂದ ನೀವೇನು ಹೇಳಲೇ ಇಲ್ಲ. ಶ್ರೀ ಸುರೇಶ್ ಕುಮಾರ್ ಹೇಳಿದ್ದರು, ಶ್ರೀ ಆಚಾರ್ಯರವರು ಹೇಳಿದ್ದರು, ಶ್ರೀ ಈಶ್ವರಪ್ಪನವರು ಹೇಳಿದ್ದರು. ಜನಾರ್ಧನರೆಡ್ಡಿಯವರು ಒಂದು ರೀತಿಯಲ್ಲಿ ವ್ಯಂಗ್ಯವಾಗಿ ಹೇಳಿದ್ದರು. ನಿಮ್ಮ Statement ತೆಗೆದುಕೊಂಡು ಬಂದು ಓದಿ ನೋಡಿ, ಹೇಗಿದೆ ಎಂದು ಗೊತ್ತಾಗುತ್ತದೆ. ಅವರಿಗೆ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತಾ, ನಾವು ಕೂಡ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವೆಂದು ಅದನ್ನು ಸೇರಿಸಿಬಿಟ್ಟಿದ್ದೀರಿ. ಅವರೊಬ್ಬರೇ ಅಲ್ಲ ಹೋರಾಟ ಮಾಡುವವರು, ನಾವು ಮಾಡುತ್ತಿದ್ದೇವೆಂದು ಹೇಳಿಬಿಟ್ಟಿದ್ದೀರಿ ಅಲ್ಲವೇ, ಮತ್ತೆ? ಹಾಗಾಗಿ ನಿಮ್ಮ ಮನಸ್ಸಿನಲ್ಲಿ

ಸಂಪೂರ್ಣವಾಗಿ ಅವರು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ, ಅದೇನೇ ಇರಲಿ, ನಾನು ನಿಮ್ಮ Statement ಓದಿದೆ, ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ, ಮಾನ್ಯ ಅಧ್ಯಕ್ಷರೇ, ಈಶ್ವರಪ್ಪನವರು ವ್ಯಂಗ್ಯವಾಗಿ ಮಾತನಾಡಿದ್ದರು, ಎಲ್ಲರಿಗಿಂತ ಹೆಚ್ಚಾಗಿ ನಮ್ಮ ಮುಖ್ಯಮಂತ್ರಿಗಳು ವ್ಯಂಗ್ಯವಾಗಿ ಮಾತನಾಡಿದರು. ನನಗೇನಪ್ಪ ಅಂದರೆ ನಿಮಗೆ ಆ ಕೇಂದ್ರದವರು ಮಾನ್ಯ ಅದ್ವಾನಿಯವರು, ಮಾನ್ಯ ನಿತಿನ್ ಗಡ್ಕರಿಯವರು ಬುದ್ದಿ ಹೇಳುವವರೆಗೆ ನಿಮಗೆ ಬುದ್ದಿ ಬರದೇ ಹೋಯಿತಲ್ರೀ. ಅವರು ಬಂದು ಹೇಳುವವರೆಗೆ ನಿಮ್ಮ ನಾಯಕರಿಗೆ ಬುದ್ದಿ ಬರಲಿಲ್ಲವೇ? ಅವರು ಬಂದು ಕಿವಿ ಹಿಂಡಿ ಈ ರೀತಿ ಪೆದ್ದು ಪೆದ್ದಾಗಿ ಮಾಡಬಾರದು, ಈ ರೀತಿ ಮೂರ್ಖತನದಿಂದ ನಡೆದುಕೊಳ್ಳಬಾರದೆಂದು ಹೇಳಿ ಅವರು ಬಂದು ಹೇಳುವವರೆಗೆ ಗೊತ್ತಾಗಲಿಲ್ಲವಲ್ಲ. ಈಗ ಅವರು ಬಂದ ಮೇಲೆ ಯಡಿಯೂರಪ್ಪನವರು ತಮ್ಮ ನಿಲುವನ್ನು ಬದಲಾವಣೆ ಮಾಡಿಕೊಂಡು ನಿಮ್ಮ ರಾಷ್ಟ್ರೀಯ ಪಕ್ಷದ ಅಧ್ಯಕ್ಷರಾದ ಶ್ರೀ ಗಡ್ಕರಿಯವರ ಜೊತೆ ಮಾತನಾಡಿದ ಮೇಲೆ ಅವರು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡರು. ಆಚಾರ್ಯರವರೇ ನಿಮ್ಮ ಮಾತಿಗೆ ಎಲ್ಲಿ ಕಿಮ್ಮತ್ತಿತ್ತು? ನಿಮ್ಮ ಊರಿನವರಾದರೂ ಅವರು ನಿಮ್ಮ ಮಾತು ಒಪ್ಪಿರಲಿಲ್ಲ. ಈಶ್ವರಪ್ಪನವರು ಮಾತನಾಡಿದರು, ಮಾನ್ಯ ಅದ್ವಾನಿಯವರು ಮಾತನಾಡಿದ ಮೇಲೆ, ಗಡ್ಕರಿಯವರು ಸ್ವತ: ಹೋಗಿ ಮಾತನಾಡಿದರು, ಅವರೇ ಸ್ವತ: ಬಂದು ಬಿಟ್ಟರು. ಏಕೋ ಯಡಿಯೂರಪ್ಪನವರು ಹಾಳು ಮಾಡುತ್ತಿದ್ದಾರೆ. ಅವರ ರಾಜೀನಾಮೆ ಕಾರಣವಾಗಿಬಿಟ್ಟಿದೆ, ಇನ್ನು ಈ ದೇಶದಲ್ಲಿ ಮುಖ ತೋರಿಸಕ್ಕಾಗುವುದಿಲ್ಲವೆಂದು ಅವರೇ ಓಡಿಬಂದುಬಿಟ್ಟರು. ಈಗ ನಾನು ಅದರ ಬಗ್ಗೆ ಹೆಚ್ಚು ಗಮನಿಸಲಿಕ್ಕೆ ಹೋಗುವುದಿಲ್ಲ. ಅವರು ಮುಂದುವರಿಯಬೇಕು ಎಂಬುದು ನಮ್ಮ ವಾದವಿತ್ತು. ಆದರೆ ನಾನು demand ಮಾಡುವುದೇನೆಂದರೆ ಅವರು ಅಷ್ಟೊಂದು ಕಠಿಣವಾಗಿದ್ದದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕಾದರೆ ನಿಮ್ಮ ಮಧ್ಯೆ ಸಂತೋಷ್ ಹೆಗ್ಡೆಯವರ ಬಗ್ಗೆ ಏನೇನು ಮಾತು ನಡೆದಿದೆ, ನೀವೇನು ಆಶ್ವಾಸನೆಯನ್ನು ಕೊಟ್ಟಿದ್ದಿರಿ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕು. You cannot Keep it secret. ನಿಮ್ಮಿಬ್ಬರ ಮಧ್ಯೆ ಏನು ವಾದ ನಡೆಯಿತು? ಅವರಿಗೆ ನೀವೇನು ಆಶ್ವಾಸನೆಯನ್ನು ಕೊಟ್ಟಿದ್ದೀರಿ? ಅದರ ಬಗ್ಗೆ ಎಲ್ಲಿಯೂ ನೀವು ಹೇಳಿಲ್ಲ. ಸದನ ನಡೆಯುತ್ತಿರುವುದರಿಂದ ಅದನ್ನು ಈ ಸದನಕ್ಕೆ ತಿಳಿಸಬೇಕು. This House is expected to Know What traspired between you and Hon'ble Lokayukta and what are the promises, assurances you have made. ಇದನ್ನು ಸದನಕ್ಕೆ ತಿಳಿಸಬೇಕು. ಆಮೇಲೆ ನೀವು ಉತ್ತರ

ಕೊಡುವಾಗ ತಿಳಿಸಿ. ನಾನೇನೋ ಆಲೋಚನೆ ಮಾಡಿಕೊಂಡು ಹೇಳಬೇಕೆಂದಿದ್ದೆ, ನೀವು ನನಗೆ ದಾರಿ ತಪ್ಪಿಸುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸಿದ್ದರಾಮಯ್ಯನವರೇ, ಒಂದು ನಿಮಿಷ, ಲೋಕಾಯುಕ್ತರು ಆಗಸ್ಟ್ ಕೊನೆಯವರೆಗೆ ಇರುವುದಿಲ್ಲವೆಂದು ಹೇಳಿ ಮಾನ್ಯ ರಾಜ್ಯಪಾಲರಿಗೆ ರಾಜೀನಾಮೆಯನ್ನು ಕೊಟ್ಟರು. ಅದೊಂದು ಚರ್ಚೆಯ ವಿಷಯವಾಗಿ ನಾಲ್ಕೈದು ದಿವಸಗಳಿಂದ ಕಾರ್ಯಕಲಾಪ ನಡೆಯುತ್ತಿದೆ. ನಿಮಗೂ ಒಂದು ವಿಷಯ ಚರ್ಚೆ ಮಾಡಲಿಕ್ಕೆ ಸಿಕ್ಕಂತಾಯಿತು. ಆಗ ಈ ಪರಿಸ್ಥಿತಿ ಬಂತಲ್ಲ, ಇವರು ಇಕ್ಕಟ್ಟಿಗೆ ಸಿಲುಕಿದರಲ್ಲ ಎಂದು ಸಂತೋಷಪಟ್ಟಿರಿ. ಸಮಸ್ಯೆ ಬಗೆಹರಿಯಬೇಕೆಂದಲ್ಲ. ಈಗ ಲೋಕಾಯುಕ್ತರು ತಮ್ಮ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡರು, ಸಹಕರಿಸಲಿಕ್ಕೆ ಸಿದ್ಧರಾದರು, ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟರು. ಈಗಲೂ ಎಲ್ಲೋ ಒಂದು ಕಡೆ ನೋವು ಪಡುತ್ತಿದ್ದಾರೇನೋ ಎಂಬ ಅನುಮಾನ ಜನರಿಗೆ ಬರುತ್ತದೆ. ನಿಮಗೆ ನಾನೇನು ಸಲಹೆ ಕೊಡುತ್ತೇನೆಂದರೆ, ಲೋಕಾಯುಕ್ತರೊಂದಿಗೆ ನಾನು ಮಾತನಾಡಿದೆ. ಮಾನ್ಯ ಲಾಲ್ ಕೃಷ್ಣ ಅದ್ವಾನಿಯವರು ಏನು ಹೇಳಿದರು, ನಿತಿನ್ ಗಡ್ಕರಿಯವರು ಏನು ಹೇಳಿದರು, ಇವೆಲ್ಲದರ ಆಧಾರದ ಮೇಲೆ ಅವರು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡು, ನಾನು ಈ ಲೋಕಾಯುಕ್ತ ಸ್ಥಾನದಲ್ಲಿ ಮುಂದುವರಿಯುತ್ತೇನೆಂದು ಹೇಳಿದ್ದಾರೆ. ಚರ್ಚೆಯಾಗುತ್ತಿರುವುದು ಏನು ಸ್ವಾಮಿ? ಅವರಿಗೇನು ಅಧಿಕಾರವನ್ನು ಕೊಡಬೇಕು ಎಂಬ ಬಗ್ಗೆ. ಈ ದೇಶದಲ್ಲಿ ಅನೇಕ ಕಡೆ ಲೋಕಾಯುಕ್ತ ವ್ಯವಸ್ಥೆ ಜಾರಿಗೆ ಬಂದಿದೆ. ನಾನು ಲೋಕಾಯುಕ್ತ ವ್ಯವಸ್ಥೆ ಬಂದ ಮೇಲೆ ಇನ್ನು ಹೆಚ್ಚಿನ ಶಕ್ತಿ ಕೊಟ್ಟಿದ್ದೇನೆ ಹೊರತು ಆ ಶಕ್ತಿಯನ್ನು ಕುಂದಿಸುವಂಥ ಕೆಲಸವನ್ನು ನಾನು ನನ್ನ ಜೀವಮಾನದಲ್ಲಿ ಮುಖ್ಯಮಂತ್ರಿಯಾಗಿ ಮಾಡಿಲ್ಲ. ಈಗ ಲೋಕಾಯುಕ್ತರಿಗೆ ಏನು ಅಧಿಕಾರ ಕೊಡಬೇಕೆಂಬುದರ ಬಗ್ಗೆ ಪ್ರತಿಪಕ್ಷ ನಾಯಕರ ಸಭೆಯನ್ನು ನಾನು ಕರೆಯುತ್ತೇನೆ, ಬನ್ನಿ ಚರ್ಚೆ ಮಾಡೋಣ. ನಿಮ್ಮ ಸಲಹೆ ಕೊಡಿ, ನಾನು ಬಂದು ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ನಿಮ್ಮೆಲ್ಲರನ್ನು ನಾನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಆ ಮನೆ ಈ ಮನೆ ಪ್ರತಿಪಕ್ಷದ ನಾಯಕರೊಡನೆ ಮಾತನಾಡಿ ನಾನು ನಿಮ್ಮ ಸಲಹೆಗಳಿಗೆ ಸರಿಯಾದಂಥ ಉತ್ತರವನ್ನು ಕೊಡುತ್ತೇನೆ. ಆ ರೀತಿ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಒಂದು ಹೊಸ ತಿರುವು ಆಗಬೇಕು ಎನ್ನುವುದು ನನ್ನ ಉದ್ದೇಶ. ಭ್ರಷ್ಟಾಚಾರ, ಅವ್ಯವಹಾರ ನಿಲ್ಲಬೇಕು, ಎರಡನೆಯದು ಇಡೀ ದೇಶದಲ್ಲಿ ಚರ್ಚೆಯಾಗುತ್ತಿರುವುದು export ಬಗ್ಗೆ. ನಾನು Value Added

Industries ಗೆ ಮಾತ್ರ ಕೊಡುತ್ತೇನೆ ಎಂದು ಹೇಳಿದ ಮೊದಲನೇ ಮುಖ್ಯಮಂತ್ರಿ. ಎರಡನೆಯದು ದಯಮಾಡಿ export ಗೆ permission ಕೊಡಬೇಡಿ, ನಮ್ಮ ಸಂಪತ್ತು ಹಾಳಾಗುತ್ತಿದೆ, ಈ ದೇಶದ ಸಂಪತ್ತು ಉಳಿಸಿಕೊಳ್ಳೋಣ, ಜಗತ್ತಿನಲ್ಲಿ ಯಾರೂ ಇಂಥ ತಪ್ಪು ಮಾಡಿಲ್ಲ, ನಾವು ಆ ತಪ್ಪನ್ನು ಮಾಡುವುದು ಬೇಡ ಎಂದು ನಾನು ಪ್ರಧಾನಿಯವರಿಗೆ ನಾನು ಪತ್ರ ಬರೆದಿದ್ದೇನೆ. ಅದಕ್ಕೆ ನಾನು ನಿಮ್ಮ ಹತ್ತಿರ ಒಂದು ನಿಯೋಗ ಹೋಗೋಣ ಎಂದು request ಮಾಡಿಕೊಂಡೆನು. ಅದು ಬೇಡ. ನಾನೇ ಇಲ್ಲಿ ಒಂದು ನಿರ್ಣಯವನ್ನು ಮಾಡುತ್ತೇನೆ ಅಥವಾ ನೀವೇ ಒಂದು ನಿರ್ಣಯವನ್ನು ಮಾಡಿ. ನಮ್ಮ ರಾಜ್ಯ ಈ ದೇಶದಲ್ಲಿ ಮೊದಲನೇ ರಾಜ್ಯವಾಗಲಿ, ಯಾವುದೇ ಕಾರಣಕ್ಕೂ ಈ ದೇಶದಲ್ಲಿ ಗಣಿ ಸಂಪತ್ತನ್ನು export ಮಾಡಲಿಕ್ಕೆ ಬಿಡುವುದಿಲ್ಲ ಎಂಬ ನಿರ್ಣಯವನ್ನು ನೀವೇ ಮಂಡನೆ ಮಾಡಿ. ಸರ್ವಾನುಮತದಿಂದ ತೀರ್ಮಾನ ಮಾಡಿ, ಇಡೀ ದೇಶಕ್ಕೆ ಈ ಒಂದು ವಿಚಾರದಲ್ಲಿ ಒಂದು ಹೊಸ ತಿರುವನ್ನು ಕೊಟ್ಟಂತಾಗುತ್ತದೆ. ಆ ಗೌರವಕ್ಕೆ ನೀವೇ ಪಾತ್ರರಾಗಿ. ನೀವೇ move ಮಾಡಿ. ನಾವು ಸರ್ವಾನುಮತದಿಂದ ಅದಕ್ಕೆ ಅನುಮತಿ ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಭ್ರಷ್ಟಾಚಾರ ನಿಲ್ಲಬೇಕು, ಅಕ್ರಮ ಗಣಿಗಾರಿಕೆ ನಿಲ್ಲಬೇಕು. ಅಕ್ರಮವಾಗಿ ಲೂಟಿ ಹೊಡೆಯುವಂಥ ಕಳ್ಳರಿಗೆ ಶಿಕ್ಷೆಯಾಗಬೇಕು ಎನ್ನುವುದಕ್ಕೆ ನಮ್ಮಲ್ಲಿ ಎರಡನೇ ಅಭಿಪ್ರಾಯವಿಲ್ಲ. ಪ್ರಧಾನಮಂತ್ರಿಗಳನ್ನು ಭೇಟಿ ಮಾಡುವುದು, ರಫ್ತು ನಿಲ್ಲಿಸಿ ಎಂದು ಹೇಳುವುದು. ನಿಯೋಗ ಹೋಗುವುದು. ವಿರೋಧ ಪಕ್ಷದವರನ್ನು ಕರೆದು ಚರ್ಚೆ ಮಾಡುವುದು ಇದಕ್ಕೆಲ್ಲಾ ನಾವು ಎಂದಿಗೂ non-co-operate ಮಾಡುವುದಿಲ್ಲ. ನಾವು co-operate ಮಾಡುತ್ತೇವೆ. ಲೋಕಾಯುಕ್ತರು ರಾಜೀನಾಮೆಯನ್ನು ರಾಜ್ಯಪಾಲರಿಗೆ ಕೊಟ್ಟಿದ್ದಾರೆ. ಅಲ್ಲದೆ ಅವರೇನೇನು ಹೇಳಿದ್ದಾರೆ ಅವೆಲ್ಲಾ ಜೀವಂತವಾಗಿವೆ. ಐದು ಲಕ್ಷ ಟನ್ disappear ಆಗಿಬಿಟ್ಟಿದೆ. ಅದಕ್ಕೇನು ಮಾಡಬೇಕು? ನಾವು ಅವೆಲ್ಲವನ್ನು ಪ್ರಧಾನಮಂತ್ರಿಗಳ ಹತ್ತಿರ ಹೋಗಿ ಹೇಳಿಕೊಳ್ಳುವುದಕ್ಕಾಗುತ್ತದೆಯೇ? it is not Five lakh tones. It is more than that, nearly 50 lakh tones. ಅದನ್ನು ಅವರು ಹೇಳಿದ್ದಾರಲ್ಲಾ. ಅದಕ್ಕೇನು ಮಾಡಬೇಕು? ಬಳ್ಳಾರಿಯಲ್ಲಿ, ಸಂಡೂರಿನಲ್ಲಿ, ಹೊಸಪೇಟೆಯಲ್ಲಿ, ಆ ಭಾಗಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಅದರ ಬಗ್ಗೆ ಲೋಕಾಯಕ್ತರು ರಿಪೋರ್ಟ್ ಕೊಟ್ಟಿದ್ದಾರೆ, ಅದಕ್ಕೇನು ಮಾಡಬೇಕು. ಅದಕ್ಕೆ ನೀವೇನು ಮಾಡಿದ್ದೀರಿ? ಇದನ್ನು ನಿನ್ನೆ ಕೊಟ್ಟಿಲ್ಲ. ಆ

ಭಾಗದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಲೋಕಾಯುಕ್ತರು ಅದಕ್ಕೆ ರಿಪೋರ್ಟ್ ಕೊಟ್ಟಿದ್ದಾರೆ. ಇದಕ್ಕೆ ಏನು ಮಾಡಬೇಕು? ಇದಕ್ಕೆ ನೀವು ಏನು ಮಾಡಿದ್ದೀರಿ?ಇದನ್ನು ನಿನ್ನೆ ಕೊಟ್ಟಿಲ್ಲ. ಒಂದೂವರೆ ವರ್ಷದ ಹಿಂದೆ ಕೊಟ್ಟಿದ್ದಾರೆ. 24.12.2008ರಿಂದ ನೀವು ಏನು ಮಾಡಿದ್ದೀರಿ? ಬೇಲೇಕೇರಿ ಬಂದರಿಗೆ ಸಂಬಂಧಪಟ್ಟಂತೆ ಇವತ್ತು 11 ಕಂಪನಿಗಳು ಕೋರ್ಟಿಗೆ ಹೋಗಿವೆ. ಅವರ ಮೇಲೆ ಕೇಸ್ ಹಾಕಿದ್ದಾರೆ. ಅವರೂ ಕೂಡ they are co-accused in the FIR, in the criminal case. 5 ಲಕ್ಷ ಟನ್ ಕದ್ದು ಹೋಗಿದ್ದಾರಲ್ಲಾ, thses 11 exporters are the claimants. 5 ಲಕ್ಷ ಟನ್ ಕದ್ದ ಕಳ್ಳರು ಯಾರು ಎಂಬುದು ನಿಮಗೆ ಗೊತ್ತಿರಬೇಕಲ್ಲ? ನೀವು ಅವರ ಹೆಸರನ್ನು ಹೇಳಬೇಕಲ್ಲ? 5ಲಕ್ಷ ಟನ್ ಕಬ್ಬಿಣದ ಅದಿರನ್ನು ಕದ್ದು ಹೊಡೆದಿದ್ದಾರಲ್ಲಾ? who are those exporters? who are those thieves? ಅದು ನಿಮ್ಮ ಸರ್ಕಾರಕ್ಕೆ ಗೊತ್ತಿರಬೇಕಲ್ಲಾ? ನಿಮಗೆ ಗೊತ್ತಿಲ್ಲದೇ ನಡೆಯುವುದಕ್ಕೆ ಸಾಧ್ಯವೇ ಇಲ್ಲ. ಸರ್ಕಾರದ ಗಮನಕ್ಕೆ ಬರದೇ ನಿಮಗೆ ಗೊತ್ತಿಲ್ಲದೇ ಇದು ನಡೆಯುವುದಕ್ಕೆ ಸಾಧ್ಯವೇ ಇಲ್ಲ. ಇದರ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚೆಯಾಗಲಿ, ಈ ಸದನದಲ್ಲಿ ಇದಕ್ಕೆ ಒಂದು ತೀರ್ಮಾನವಾಗಬೇಕು. ಆಮೇಲೆ ಮುಂದೆ ಇದನ್ನು ನಿಲ್ಲಿಸಲು ಪ್ರಧಾನಮಂತ್ರಿಗಳ ಬಳಿ ಹೋಗುವುದು, ವಿರೋಧ ಪಕ್ಷದವರ ಜೊತೆ ಚರ್ಚೆ ಮಾಡುವಂತಹದ್ದು ಇದ್ದರೆ ಚರ್ಚೆ ಮಾಡುವುದು ಹಾಗೂ ಮುಂದೆ ಏನೇನು ಮಾಡಬೇಕು ಎಂದು ಮಾಡುವುದು. ಬಹುಶಃ ಸರ್ಕಾರ ಇದನ್ನೆಲ್ಲಾ ಓದಿದೆ. ಲೋಕಾಯುಕ್ತರಿಗೆ ಉತ್ತರವನ್ನೂ ಕೊಟ್ಟಿದ್ದಾರೆ. ಲೋಕಾಯುಕ್ತ ರಿಪೋರ್ಟ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದರೆ, How this Government was callous towards the report of the Lokayuktha ಎಂದರೆ, Lokayuktha Act says 90 ದಿನಗಳಲ್ಲಿ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ತಿಳಿಸಬೇಕು ಎಂದು ಹೇಳುತ್ತದೆ. 90 ದಿನಗಳೊಳಗೆ ನೀವು ಕ್ರಮ ತೆಗೆದುಕೊಂಡಿಲ್ಲ. ಅವರು ಡಿಸೆಂಬರ್‌ನಲ್ಲಿ ಕೊಟ್ಟರೆ ನೀವು ಜುಲೈನಲ್ಲಿ ಅವರಿಗೆ ಒಂದು ರಿಪೋರ್ಟ್ ಕಳುಹಿಸುತ್ತೀರಿ. After seven months ನೀವು report ಕಳುಹಿಸುತ್ತೀರಿ. ಇದಕ್ಕೆ ನಿಮ್ಮ ಸರ್ಕಾರವೇ ಜವಾಬ್ದಾರಿಯಲ್ಲವೇ? ನೀವು ಜವಾಬ್ದಾರರಲ್ಲವೇ? ಅದರ ಮೇಲೆ ಲೋಕಾಯಕ್ತರು ಹೇಳುತ್ತಾರೆ. "This Action taken report is not an Action taken report, in reality it is Action to be taken report" ಎಂದು ಹೇಳುತ್ತಾರೆ. ಅವರ ರಿಪೋರ್ಟ್‌ನಲ್ಲಿ Part-I, Chapter- 5ರಲ್ಲಿ irregularities ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹೇಗೆ ಹೇಗೆ iregularities ನಡೆಯುತ್ತಿದೆ, ಎಲ್ಲೆಲ್ಲಿ ನಡೆಯುತ್ತಿದೆ, encroachment ಗಳು ಹೇಗೆ ಆಗಿವೆ, ಯಾರ್‍ಯಾರು

ಮಾಡಿದ್ದಾರೆ, ಯಾವ್ಯಾವ ಕಂಪನಿಗಳು ಮಾಡಿವೆ ಲೋಕಾಯುಕ್ತರು ಇದರಲ್ಲಿ ಹೇಳಿದ್ದಾರೆ. ನೀವು ಅದರ ಮೇಲೆ ಕ್ರಮಗಳನ್ನು ತೆಗೆದುಕೊಂಡಿಲ್ಲ. Chapter-5 of the Lokayuktha, report Part-I ಇದರಲ್ಲಿ ಹೇಳುತ್ತಾರೆ. ಈ ರಿಪೋರ್ಟ್ ಸಬ್‌ಮಿಟ್ ಮಾಡುವುದಕ್ಕಿಂತ ಮುಂಚಿತವಾಗಿ ಮಾನ್ಯ ಯು.ವಿ.ಸಿಂಗ್‌ರವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಮಾನ್ಯ ಗಾಯಕ್‌ವಾಡ್‌ರವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅವರು separate team ಗಳನ್ನು ಮಾಡಿ, inspection ಮಾಡಿ, ಸರ್ವೆ ಮಾಡಿ ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಈ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆ ಎಂದರೆ, "During the survey various instances of gross irregularities in mining like mining beyond the leased area, trespassing into the forest area for mining, illegal dumping and mining contrary to the parameters laid down by Indian Bureau of Mines have been noticed in Bellary, Hospet, Sandur regions. Such irregularities in the mining sector are rampant and such instances are increasing day by day unhindered resulting in considerable loss to the State Exchequer. Different types of encroachments that are commonly prevalent to the mining sector and commonly resorted to the mining lease holders to make unlawful gain a state cost are mentioned by Dr. U.V. Singh in his report Annexure-A. Different types of encroachments noticed during the present investigation are as follows: "ಎಂದು ಹೇಳಿ ಇವೆಲ್ಲಾ ವರದಿ ಮಾಡಿದ್ದಾರೆ." Encroachment due to shifting of location of the notified leased area, Encroachment due to different lease, sketch under two different Acts, Extraction of Iron-ore in the adjoining areas and refilling the pits. ಪಕ್ಕದ ಲೀಸ್ ಜಾಗದಲ್ಲಿ Iron Ore extract ಮಾಡಿ, ಅದು ಗೊತ್ತಾಗಬಾರದು ಎಂದು ಆ pit ಗಳನ್ನು ಮುಚ್ಚಿಬಿಡುವುದು, encroachment by extending the lease boundaries and extraction of iron ore, encroachments in the form of formation of road to mining leased area, encroachment due to dumping of waste minerals, encroachment due to occupa-

tion of more land enjoyed by fixing the wrong boundaries, encroachment by leases in the adjoining leased areas, enroachment due to cascading effects. ಈ ತರಹ irregularities ಇದೆ ಎಂದು detailed report ಅನ್ನು ನಿಮಗೆ ಕೊಟ್ಟು ಒಂದೂವರೆ ವರ್ಷವಾಯಿತು. ಅವರು ಏನು ಹೇಳುತ್ತಾರೆ ಎಂದರೆ, encroachment ಎಷ್ಟು ತರಹ ಆಗಿದೆ ಎಂದರೆ, Total encroachments ಆಗಿರುವುದು ಎಂದರೆ 1,081.40 ಹೆಕ್ಟೇರ್‌ಗಳು. That means to say more than 2,600 acres. ಇಷ್ಟು area ವನ್ನು mining ಗೆ encroachment ಮಾಡಿದ್ದಾರೆ. ಸರ್ಕಾರ ಒಂದೂವರೆ ವರ್ಷದಿಂದ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಈ ರಿಪೋರ್ಟ್ ಕೊಟ್ಟು ಒಂದೂವರೆ ವರ್ಷವಾಗಿದೆ. ಅದಕ್ಕೆ ಬೇಸರವಾಗಿ ಅವರು ರಾಜೀನಾಮೆ ಕೊಟ್ಟಿರುವುದು. ರೋಡ್‌ಗೆ ಸಂಬಂಧಿಸಿದಂತೆ ಅರಣ್ಯದಲ್ಲಿ ರಸ್ತೆಗಳನ್ನು ಮಾಡಿದ್ದಾರೆ. ಅದು ಸುಮಾರು 124 ಹೆಕ್ಟೇರ್ ಗಳಲ್ಲಿ ರಸ್ತೆ ಮಾಡಿದ್ದಾರೆ. ಇವರು ತೆಗೆಯುವಂತಹ ಕಬ್ಬಿಣದ ಅದಿರನ್ನು ಸಾಗಿಸುವುದಕ್ಕೋಸ್ಕರ ರಸ್ತೆ ಮಾಡಿದ್ದಾರೆ. ಅದಿರನ್ನು ಸಾಗಿಸುವುದಕ್ಕೋಸ್ಕರ 180 ಕಿ.ಮೀ. ಅನ್ನು ಅಕ್ರಮವಾಗಿ without the permission of the Forest Department, without the permission of the any competent authority, road ಗಳನ್ನು ಮಾಡಿದ್ದಾರೆ. 180 ಹೆಕ್ಟೇರ್ಸ್ ಅಂದರೆ ಸುಮಾರು 400 ಎಕರೆಯನ್ನು ಮಾಡಿದ್ದಾರೆ. ಈ ಅಧಿಕಾರಿಗಳ ಮೇಲೆ, ಯಾರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇಷ್ಟೆಲ್ಲಾ collude ಆಗಿ ಮಾಡಿದ್ದಾರೆ. ಯಾರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಏನು ಮಾಡಿದ್ದೀರಿ, ಆ ಕಾಲದಲ್ಲಿ ಯಾವ್ಯಾವ ಅಧಿಕಾರಿಗಳು ಇದ್ದರು, ಇದರಲ್ಲಿ ಯಾರ್‍ಯಾರು collude ಆಗಿದ್ದಾರೆ, ಅವರು ಯಾವ್ಯಾವ ಇಲಾಖೆಗೆ ಸೇರಿದವರು ಹಾಗೂ ನೀವು ಏನು ಮಾಡುತ್ತಿದ್ದೀರಿ? ಅವರನ್ನು ಮನೆಗೆ ಕಳುಹಿಸಿದ್ದೀರಾ? ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? No ತೆಗೆದುಕೊಂಡಿಲ್ಲ. ನೀವು ಇಷ್ಟೆಲ್ಲಾ ಆದರೂ ಕೂಡ illegal mining ಮಾಡುವುದು. ಪೊಲೀಸ್‌ನವರು, ರೆವಿನ್ಯೂನವರು, Forest department ನವರು, Mines and Geology ಯವರು, Transport ನವರು, Port ನವರು ಇವರೆಲ್ಲಾ ಶಾಮೀಲಾಗಿ, ಕಳ್ಳರ ಜೊತೆ ಸೇರಿಕೊಂಡು ರಾಜ್ಯದ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದರೂ ಕೂಡ, ಮಾನ್ಯ ಮುಖ್ಯಮಂತ್ರಿಗಳು ಅವರ ಇಲಾಖೆಯಲ್ಲಿ ಇವೆಲ್ಲಾ ನಡೆಯುತ್ತಿದ್ದರೂ ಕೂಡ ನಾವು ಭ್ರಷ್ಟಾಚಾರ ನಿಲ್ಲಿಸುತ್ತೇವೆ, ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವೆ ಎಂದರೆ ಈ ರಾಜ್ಯದ ಜನ ನಂಬುತ್ತಾರಾ? ಈ ಸರ್ಕಾರ ನಂಬಿಕೆಗೆ ಅರ್ಹವೇ? ಇವರ ಸರ್ಕಾರಕ್ಕೆ ನಿಜವಾಗಿಯೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವಂತಹ ರಾಜಕೀಯ ಇಚ್ಛಾಶಕ್ತಿ

ಇದೆಯೇ? No, ಯಾವ ರಾಜಕೀಯ ಇಚ್ಛಾಶಕ್ತಿಯು ಕೂಡ ಇಲ್ಲ. ಇವರು ಪ್ರಾಮಾಣಿಕವಾಗಿ ಯಾವತ್ತು ಕೂಡ ಯೋಚನೆಯನ್ನೇ ಮಾಡಿಲ್ಲ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನವೂ ಮಾಡಿಲ್ಲ. ಅದನ್ನು ಲೆಕ್ಕ ಹಾಕಿದರೆ ಈ ಎಲ್ಲಾ ಅಧಿಕಾರಿಗಳನ್ನು hang ಮಾಡಬೇಕಾಗುತ್ತದೆ. ಲೋಕಾಯುಕ್ತರು, ಕೇವಲ ಆ ಎರಡು ಬಂದರುಗಳಲ್ಲಿ ಕೇವಲ ಎರಡು ಸಾವಿರ ಕೋಟಿ ರೂಪಾಯಿಗಳು ನಷ್ಟವಾಗಿರಬಹುದು ಎಂದು ಹೇಳಿದರು. ಬೇರೆ ಬೇರೆ ಬಂದರುಗಳನ್ನು ಲೆಕ್ಕ ಹಾಕಿದರೆ, 50–60 ಸಾವಿರ ಕೋಟಿ ರೂಪಾಯಿಗಳು ನಷ್ಟವಾಗಿದೆ. ಅದಕ್ಕೆ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ವೀರಾವೇಶದಿಂದ ಮಾನ್ಯ ಸಿದ್ದರಾಮಯ್ಯನವರೆ, ಅದರಲ್ಲಿ ನೀವೂ ಇದ್ದೀರಿ, ನೀವೂ ಆ ಕಾಲದಲ್ಲಿ ಅಂದರೆ 2004–05ರಲ್ಲಿ ಮಂತ್ರಿಗಳಾಗಿದ್ದೀರಿ ಎಂದು ಒಂದು ಮಾತನ್ನು ಹೇಳಿದರು. ನಿಜ ನಾನೂ ಮಂತ್ರಿಯಾಗಿದ್ದೆ, ಮಾನ್ಯ ಧರ್ಮಸಿಂಗ್ ರವರು ಮುಖ್ಯಮಂತ್ರಿಗಳಾಗಿದ್ದರು, ಆನಂತರ ಮಾನ್ಯ ಕುಮಾರ ಸ್ವಾಮಿಯವರು ಬಂದರು, ಇವರು ಹಣಕಾಸಿನ ಮಂತ್ರಿಯಾಗಿದ್ದರು. ಮಾನ್ಯ ಕುಮಾರ ಸ್ವಾಮಿಯವರು ಇದ್ದಾಗಲೇ ಲೋಕಾಯುಕ್ತಕ್ಕೆ refer ಆಗಿದ್ದು. ಅವರು ಇರುವಾಗಲೇ ರಿಪೋರ್ಟ್ ಬಂದಿದ್ದು, ಮತ್ತೆ ಇವರೇ continue ಆಗಿದ್ದಾರೆ. ನಾನು ಯಾರನ್ನೂ defend ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. I am not going to defend anybody, including me, If there is any iota of evidence against me for my involvement in this illegal mining, I am ready to face any consequences. ಆದರೆ ಯಾರ್ಯಾರು ಇದರಲ್ಲಿ ಶಾಮೀಲಾಗಿದ್ದಾರೆ ಅವರೆಲ್ಲರೂ ತಯಾರಾಗಬೇಕು, whoever they may be. ಯಾರ್ಯಾದರೂ ಆಗಲಿ ಅವರು ಒಪ್ಪಿಕೊಳ್ಳಬೇಕು. they must come out. ನಾವು CBI enquiry ಬೇಕು ಎಂದು ಹೇಳುತ್ತಿದ್ದೇವೆ. CBI enquiry ಆಗಬೇಕು. ಏಕೆಂದರೆ, ಇದು ಅಂತರರಾಜ್ಯಗಳ ನಡುವೆ ನಡೆದಿರತಕ್ಕಂಥ ವ್ಯವಹಾರ, ಅಂತರರಾಷ್ಟ್ರಗಳ ನಡುವೆ ನಡೆದಿರತಕ್ಕಂಥ ವ್ಯವಹಾರ. ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ನಡುವೆ ನಡೆದಿರತಕ್ಕಂಥ ವ್ಯವಹಾರ, ಇಲ್ಲಿ complaints ನಲ್ಲಿ ಇರತಕ್ಕಂಥದ್ದು ಏನೆಂದರೆ, ಕರ್ನಾಟಕದಲ್ಲಿ ತೆಗೆದಂಥ ಕಬ್ಬಿಣದ ಅದಿರು, ಮಾನ್ಯ ಜನಾರ್ಧನ ರೆಡ್ಡಿಯವರ ಒಡೆತನದಲ್ಲಿರುವ ಆಂಧ್ರಪ್ರದೇಶದ ಓಬಳಾಪುರಂ ಮೈನಿಂಗ್ ಕಂಪನಿಗೆ ಶ್ರೀ ವಿಶ್ವಾಸ್, DCF ರವರು ಬೇಕಾದಷ್ಟು ನೋಟೀಸ್ ಕೊಟ್ಟಿದ್ದಾರೆ. ಐದು ನೋಟೀಸ್‌ಗಳನ್ನು ಕೊಟ್ಟಿದ್ದಾರೆ ಮತ್ತು ಆಂಧ್ರದ permit ಗಳು, ಕರ್ನಾಟಕದ ಅದಿರು ಕರ್ನಾಟಕದ boundary ಎಲ್ಲಾ ನಾಶವಾಗಿದೆ. ಎಂದು ಯು.ವಿ.ಸಿಂಗ್‌ರವರು ಹಾಗೂ ಲೋಕಾಯುಕ್ತದವರು ರಿಪೋರ್ಟ್ ಕೊಟ್ಟಿದ್ದಾರೆ. Pillars ಎಲ್ಲಾ demolish ಆಗಿದೆ, ಸುಗ್ಗಲಮ್ಮ ಗುಡ್ಡ ದೇವಸ್ಥಾನ demolish ಆಗಿದೆ, ಆಂಧ್ರ ಮತ್ತು

ಕರ್ನಾಟಕ ರಾಜ್ಯಗಳ ಮಧ್ಯೆ ಇರುವ ಗಡಿರೇಖೆ ನಾಶವಾಗಿದೆ ಎಂದು ಲೋಕಾಯುಕ್ತರ ರಿಪೋರ್ಟ್‌ನಲ್ಲೂ ಕೂಡ ಹೇಳಿದ್ದಾರೆ. ಅದನ್ನು ನಾನು ಹೇಳಿಲ್ಲ. ಇದು ಲೋಕಾಯುಕ್ತರ ರಿಪೋರ್ಟ್‌ನಲ್ಲಿರತಕ್ಕಂಥಹ ಉಲ್ಲೇಖ. ವಿಶ್ವಾಸ್ ಎನ್ನುವವರು ಅನಂತಪುರ ಜಿಲ್ಲೆಯ DCF, ಇವರು ಕರ್ನಾಟಕ ಪ್ರದೇಶಕ್ಕೆ ಸೇರಿದ ಅರಣ್ಯ ಪ್ರದೇಶದಲ್ಲಿ inspection ಮಾಡಿ, ಐದು ನೋಟೀಸ್ ಕೊಟ್ಟಿದ್ದಾರೆ. ಓಬಳಾಪುರಂ ಮೈನಿಂಗ್ ಏರಿಯಾದಲ್ಲಿ ಇರತಕ್ಕಂಥಹ ಅದಿರು ರಾಶಿಗಳು, ಅದನ್ನು ಓಬಳಾಪುರಂ ಮೈನಿಂಗ್ ಏರಿಯಾದಲ್ಲಿ ತೆಗೆದಿಲ್ಲ ಕರ್ನಾಟಕ ಪ್ರದೇಶದಲ್ಲಿ ತೆಗೆಯಲಾಗಿದೆ ಎಂದು ಇಲ್ಲಿ ರಿಪೋರ್ಟ್‌ಗಳು ಇವೆ. ಆದ್ದರಿಂದ ಇದರ ಬಗ್ಗೆ ಸತ್ಯಾಸತ್ಯತೆಗಳು ಗೊತ್ತಾಗಬೇಕು. Because, ಮಾನ್ಯ ಜನಾರ್ಧನರೆಡ್ಡಿಯವರು ಸಹಾ ಇದರ ಬಗ್ಗೆ ಸತ್ಯಾಸತ್ಯತೆಗಳು ಗೊತ್ತಾಗಬೇಕೆಂದು ಪದೇ ಪದೇ ಹೇಳುತ್ತಿರುತ್ತಾರೆ. what is the truth of this ಎನ್ನುವುದು shoud come out. what is the truth ಎಂದು ಇಡೀ ದೇಶಕ್ಕೆ ಗೊತ್ತಾಗಬೇಕು. ಇದರ ಬಗ್ಗೆ ತನಿಖೆಯಾಗಬೇಕು. Without valid permit, without any permit, ಅದಿರು ಬೇರೆ ಬೇರೆ ದೇಶಗಳಿಗೆ ಬೇರೆ ಬೇರೆ ಬಂದರುಗಳ ಮೂಲಕ ರಫ್ತಾಗಿದೆ. ಬೇರೆ ರಾಷ್ಟ್ರಗಳಿಗೆ ರಫ್ತಾಗಿರುವುದು, ಅಂತರರಾಷ್ಟ್ರೀಯಕ್ಕೆ ಸಂಬಂಧಪಟ್ಟಿದ್ದಾಗಿದೆ. The officers of Forest, Mines and Geology, Revenue, Transport, Police, all have colluded. ಇದು ಈ ಶತಮಾನದ ಅತ್ಯಂತ ದೊಡ್ಡ ಹಗರಣವಾಗಿದೆ. ಇಂತಹ ಹಗರಣವನ್ನು ಸಿ.ಬಿ.ಐ.ಗೆ ವಹಿಸಬೇಕೆಂದು ಮಾನ್ಯ ಜನಾರ್ಧನರೆಡ್ಡಿಯವರೂ ಹೇಳುತ್ತಾರೆ. ಸಿ.ಬಿ.ಐ ಗೆ ಕೊಡಿ. ಏಕೆ ಹಿಂದೇಟು ಹಾಕುತ್ತೀರಿ? ಕೇಂದ್ರ ಮಾನ್ಯಮಂತ್ರಿಗಳಾದ ಶ್ರೀ ಹಂಡಿಕ್ ರವರು ನವೆಂಬರ್ 16, 2009 ರಂದು ಒಂದು ಪತ್ರವನ್ನು ಬರೆದಿದ್ದಾರೆ, ಏನೆಂದರೆ, illegal mining ನಡೆಯುತ್ತಿರುವುದನ್ನು ಸಿ.ಬಿ.ಐ ನವರಿಂದ ತನಿಖೆ ಮಾಡಿಸಲು ನಾವು ತಯಾರಿದ್ದೇವೆ. we are ready to co-operate. ನೆನ್ನೆ ಮಾನ್ಯ ಯಡಿಯೂರಪ್ಪನವರು ಒಪ್ಪಿಕೊಂಡಿದ್ದಾರೆ. ಇನ್ನೊಂದು ಪತ್ರವನ್ನು ಮಾನ್ಯ ಹಂಡಿಕ್‌ರವರು ಬರೆದಿದ್ದಾರೆ, ಆ ಪತ್ರವನ್ನು ಸದನದ ಮುಂದೆ ಮಂಡಿಸುತ್ತೇವೆಂದು ಹೇಳಿದ್ದಾರೆ. Central Government is ready to extend co- operation. ಇದರಲ್ಲಿ ಲೂಟಿ ಹೊಡೆದಿರತಕ್ಕಂಥವರು ಯಾರೇ ಆಗಲಿ ಅವರನ್ನು ಪತ್ತೆ ಹಚ್ಚಿ ಶಿಕ್ಷೆ ಕೊಡಬೇಕು. ನಿಷ್ಪಕ್ಷಪಾತವಾದ independent agency ಯಿಂದ ತನಿಖೆಯಾಗಬೇಕು. ಅದು ಆಗಬೇಕಾದರೆ, under the circumstances, taking the nature of the case and the nature of the incident into consideration ಸಿ.ಬಿ.ಐ ತನಿಖೆ ಅಲ್ಲದೇ ಬೇರೆ ಯಾವ ತನಿಖೆಯಿಂದಲೂ ಸತ್ಯಾ

ಅಸತ್ಯತೆಯನ್ನು ಹೊರಗಡೆ ತರಲಿಕ್ಕೆ ಸಾಧ್ಯವಿಲ್ಲ.

2001ರಿಂದ ಇವತ್ತಿನವರೆಗೆ ಅಂದರೆ 2010 ಜುಲೈವರೆಗೆ ಯಾರಾದರೂ ಇರಲಿ, ಎಷ್ಟೇ ದೊಡ್ಡವರಿರಲಿ, they should be booked, they should be prosecuted, they should be hanged. To unearth this, it is possible only by CBI. ಮಾನ್ಯ ಅಧ್ಯಕ್ಷರೆ, ನಾನು ಏಕೆ ಮಾನ್ಯ ಯಡಿಯೂರಪ್ಪನವರ ಸರ್ಕಾರದ ಮೇಲೆ ವಿಶ್ವಾಸವಿಲ್ಲವೆಂದು ಹೇಳುತ್ತಿದ್ದೇನೆ ಎಂದರೆ, ಇವತ್ತು ಏಕೆ ಗುಮಾನಿಗಳೆಲ್ಲಾ ಹುಟ್ಟಿಕೊಂಡಿವೆ ಎಂದರೆ, ಜನರು ಏಕೆ ಮಾನ್ಯ ಯಡಿಯೂರಪ್ಪನವರ ಕಡೆಗೆ ಬೆರಳು ತೋರಿಸಿ ಬೊಟ್ಟು ಮಾಡುತ್ತಿದ್ದಾರೆ ಎಂದರೆ, ಬೇಲೇಕೇರಿ ಬಂದರಿನಲ್ಲಿ ಲೋಕಾಯುಕ್ತರು investigate ಮಾಡುತ್ತಿದ್ದರು. ಲೋಕಾಯುಕ್ತರು investigate ಮಾಡುವಾಗ ಆ Investigating officer, Gokul ಅವರನ್ನು ನೀವು ಸಸ್ಪೆಂಡ್ ಮಾಡಲಿಕ್ಕೆ ಹೊರಡುತ್ತೀರಿ. ಮಾನ್ಯ ಪಾಲೇಮಾರ್ ಮಿನಿಸ್ಟರ್ 'ಅವರು ನನ್ನ ಮೀಟಿಂಗ್‌ಗೆ ಬರಲಿಲ್ಲ, ಅವನನ್ನು ಸಸ್ಪೆಂಡ್ ಮಾಡಿ' ಎಂದು ಪತ್ರ ಬರೆಯುತ್ತಾರೆ. That is No.1. ಆ ಹಿತ್ತಲಮಕ್ಕಿ, Assistant Conservator of Forest ಎಂಬ investigating officer ಅನ್ನು ಬೀದರ್‌ಗೆ Transfer ಮಾಡುತ್ತಾರೆ. ಇದು No.2 No.3 ಏನೆಂದರೆ, ಇದು ಸಾಲದು ಎಂದು CoD enquiry ಗೆ Order ಮಾಡುತ್ತಾರೆ. Mr. Bheemaiah is heading this COD enquiry. When the Lokayuktha is Investigating, investigation is not completed, pending enquiry of investigation by Lokayuktha, you are ordering enquiry by COD and COD officers are going there. ಭೀಮಯ್ಯ ಹೋಗಿರುವುದು, ಅಲ್ಲೆಲ್ಲಾ ಪರಿಶೀಲನೆ ಮಾಡುತ್ತಿರುವುದು ಪತ್ರಿಕೆಗಳಲ್ಲೆಲ್ಲಾ ವರದಿಯಾಗಿದೆ. Government is also admitting it. Under the law, ನನಗೆ ಇರತಕ್ಕಂಥ ಜ್ಞಾನದ ಪ್ರಕಾರ, Lokayuktha is an independent autonomous body. when the matter is being investigated by Lokayuktha, what made the Chief Minister to refer the same matter to CoD? I attribute, it is with mala- fideintention, to hush-up the case, to give protection to the people who are involved in the illegal mining, the people who are involved in illegal exporting. That is my allegation. That is the inference any layman could draw. Not necessarily a legal man. Any Layman, a common man under these circum-

stances, can draw this references. When the autonomous independent body created by our own legislature, is doing investigation and they have booked, the cases are registered in the criminal court Ankola, JMFC Court, What made the Chief Minister to order for COD enquiry? What is the intention behind it? What inference one could draw? The inference is very common, very simple. It is to hush-up the entire scam. So, this is my serious allegation against this Government. That's why the people have no confidence. ಅವರಿಗೂ ಇವರ ಮೇಲೆ ವಿಶ್ವಾಸವಿಲ್ಲ, ನಮಗೂ ಇವರ ಮೇಲೆ ವಿಶ್ವಾಸವಿಲ್ಲ. ಏಕೆಂದರೆ, ಒಂದೂವರೆ ವರ್ಷಗಳಿಂದ ನಿದ್ದೆ ಮಾಡಿದ್ದೀರಿ. ಅವ್ಯಾಹತವಾಗಿ ಕಳೆದ 5–6 ವರ್ಷಗಳಿಂದ ನಡೆಯುತ್ತಲೇ ಇದೆ. ನಿಮ್ಮ ಪ್ರಕಾರ ಇದು 10 ವರ್ಷಗಳಿಂದ ನಡೆಯುತ್ತಿದೆ. ನೀವೇ ಕಳ್ಳತನ ಆಗಿರುವುದನ್ನು admit ಮಾಡಿಕೊಳ್ಳುತ್ತೀರಿ. when you are making an admission that theft is going on, illegal mining is going on, illegal export is going on, who else would be held resposible for this? Since two years, you are the Chief Minister.

ಅಧ್ಯಕ್ಷರು:– ಇನ್ನೂ ಎಷ್ಟು ಟೈಮ್ ತೆಗೆದುಕೊಳ್ಳುತ್ತೀರಿ?

ಶ್ರೀ ಸಿದ್ದರಾಮಯ್ಯ:– 2 ಗಂಟೆಯೊಳಗೆ ಮುಗಿಸುತ್ತೇನೆ, ಕೊನೆಯ ಹಂತಕ್ಕೆ ಬಂದಿದ್ದೇನೆ. ಉಳಿದಿದ್ದನ್ನು ನಮ್ಮ Deputy Leader ರವರು ಮಾತನಾಡುತ್ತಾರೆ. ಬೇರೆಯವರು ಮಾತನಾಡಲಿ ಎಂದು ಎಲ್ಲಾ ವಿಷಯಗಳನ್ನೂ ಹೇಳುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಇದರಲ್ಲಿ ಯಾರ್ಯಾರ ಕೈವಾಡಗಳಿವೆ? ಲೋಕಾಯುಕ್ತರು ಹೇಳುತ್ತಾರೆ, It is not Mr. Palemar.. ಪಾಪ! ಇದರಲ್ಲಿ ಪಾಲೇಮರ್ ಒಬ್ಬರೇ ಅಲ್ಲ, ಇದರಲ್ಲಿ ದೊಡ್ಡ ದೊಡ್ಡ ಕುಳಗಳೇ ಇವೆ ಎಂದು ಅವರು ಹೇಳುತ್ತಾರೆ. ಅವರು ರಾಜೀನಾಮೆ ಕೊಟ್ಟ ತಕ್ಷಣವೇ ಇವೆಲ್ಲವೂ ಜೊತೆಗೆ ಹೊರಟು ಹೋಗುವುದಿಲ್ಲ. ರಾಜೀನಾಮೆ ವಾಪಸ್ ತೆಗೆದುಕೊಂಡ ತಕ್ಷಣವೇ these will not go along it. But, the facts remain ದೊಡ್ಡ ದೊಡ್ಡ ಕುಳಗಳೆಲ್ಲಾ ಅಲ್ಲಿಯೇ ಇದ್ದಾರೆ, ಕಳ್ಳರುಗಳೆಲ್ಲಾ ಅಲ್ಲಿಯೇ ಇದ್ದಾರೆ. ಆ ಕಳ್ಳರು ಯಾರ್ಯಾರು ಎಂಬುದು ನಮಗೆ ಗೊತ್ತಾಗಬೇಕಲ್ಲವೇ? ರಾಜ್ಯಕ್ಕೆ ಗೊತ್ತಾಗಬೇಕಲ್ಲವೇ? ದೇಶಕ್ಕೆ ಗೊತ್ತಾಗಬೇಕಲ್ಲವೇ? ಈ ರಾಜ್ಯದ ಸಂಪತ್ತು ಎಷ್ಟು

ಲೂಟಿಯಾಗಿದೆ, ಹೇಗೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ತಡೆಯಲಿಕ್ಕೆ ಸಂಪೂರ್ಣ ವಿಫಲರಾಗಿದ್ದಾರೆ ಎಂಬುದು ಗೊತ್ತಾಗಬೇಕಲ್ಲವೇ? ಇದನ್ನು ನಾನು ಹೇಳುವುದಲ್ಲ, ಅದನ್ನು ಅವರೇ ಒಂದು ಸಲ ಹೇಳಿಕೊಂಡಿದ್ದಾರೆ. 'ನಾನು ಅಸಹಾಯಕ, I am helpless, ನಾನೇನೂ ಮಾಡಲಿಕ್ಕಾಗುತ್ತಿಲ್ಲ, ಲೂಟಿ ನಡೆಯುತ್ತಿದೆ' ಎಂದು ಹೇಳಿದ್ದಾರೆ. ಹಾಗಾದರೆ ಈ ಲೂಟಿ ತಪ್ಪಿಸುವವರು ಯಾರು? You are in power. ನಿಮ್ಮ ಕೈಯಲ್ಲಿ ಆಗುವುದಿಲ್ಲ ಎನ್ನುವುದಾದರೆ, ಕುರ್ಚಿ ಖಾಲಿ ಮಾಡಿ ಹೋಗಬೇಕು. ರಾಜೀನಾಮೆ ಕೊಟ್ಟು ಹೋಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾನು ಅಧಿಕಾರಕ್ಕೆ ಬಂದ ದಿವಸದಿಂದ ನೀವು ಕೇಳಿದಾಗಲೆಲ್ಲಾ ರಾಜೀನಾಮೆ ಕೊಟ್ಟಿದ್ದರೆ, ಇಷ್ಟೊತ್ತಿಗೆ ಸುಮಾರು 50 ಬಾರಿಯಾದರೂ ನಾನು ರಾಜೀನಾಮೆ ಕೊಡಬೇಕಾಗುತ್ತಿತ್ತು.

ಶ್ರೀ ಸಿದ್ದರಾಮಯ್ಯ :– ನಿಮ್ಮ ಅನಂತ್‌ಕುಮಾರ್‌ರವರು ನಿನ್ನೆ UPA Government ರಾಜೀನಾಮೆ ಕೊಡಬೇಕೆಂದು ಕೇಳಲಿಲ್ಲವೇ?

ಶ್ರೀ ಎಸ್. ಸುರೇಶ್‌ಕುಮಾರ್ :– ಅದಕ್ಕಾಗಿಯೇ ನೀವೂ ಇಲ್ಲಿ ಕೇಳುತ್ತಿದ್ದೀರಾ?

ಶ್ರೀ ಸಿದ್ದರಾಮಯ್ಯ :– ಅದಕ್ಕಾಗಿ ಕೇಳುತ್ತಿಲ್ಲ. I am fixing the responsibility on Chief Minister. My Charge is, it is Chief Minister alone who is responsible.

ಡಾ: ವಿ.ಎಸ್. ಆಚಾರ್ಯ :– ಕಳೆದ ಹತ್ತಾರು ವರ್ಷಗಳಿಂದ ಇದು ನಡೆಯುತ್ತಿದೆ.

ಶ್ರೀ ಸಿದ್ದರಾಮಯ್ಯ :– ಅದಕ್ಕೂ responsibility fix ಮಾಡಿ. ಮಾನ್ಯ ಆಚಾರ್ಯರವರೆ, ಅದಕ್ಕಾಗಿಯೇ ನಾನು ಇದನ್ನು CBI ಗೆ ಕೊಡಿ ಎಂದು ಕೇಳುತ್ತಿದ್ದೇನೆ. ಯಾರ್‍ಯಾರ responsibility ಎಷ್ಟೆಷ್ಟು ಎನ್ನುವುದು fix ಆಗಲಿ. Let all of them be hanged. Why Chief MInister alone? ಎಲ್ಲರನ್ನೂ hang ಮಾಡೋಣ. ಅವರಿದ್ದರೆ ಅವರು, ನಮ್ಮ ಸರ್ಕಾರದವರು ಇದ್ದರೆ ನಾವು, ನಾನು ಇದ್ದರೆ ನಾನು, ಯಾರ್‍ಯಾರು ಇರುತ್ತಾರೋ ಅವರೆಲ್ಲರನ್ನೂ hang ಮಾಡೋಣ.

ಶ್ರೀ ಎಸ್. ಸುರೇಶ್‌ಕುಮರ್ :– ಇದರಲ್ಲಿ ಎರಡು ಅಂಶಗಳಿವೆ. ಯಾರನ್ನು hang ಮಾಡಬೇಕೆಂದು Supreme Court ಹೇಳಿದೆಯೋ, ಅವರನ್ನೇ ನೀವು hang ಮಾಡುತ್ತಿಲ್ಲ, ಸುಮ್ಮ ಸುಮ್ಮನೆ ಯಾರ್‍ಯಾರನ್ನೋ hang ಮಾಡಬೇಕೆಂದು ಏಕೆ ಹೇಳುತ್ತೀರಿ?

ಶ್ರೀ ಸಿದ್ದರಾಮಯ್ಯ : ನೀವು ಈ ತರಹ ಲಘುವಾಗಿ ತೆಗೆದುಕೊಂಡರೆ, ನಾನೇನೂ ಮಾಡಲಿಕ್ಕಾಗುವುದಿಲ್ಲ?

ಡಾ: ಹೆಚ್.ಸಿ. ಮಹಾದೇವಪ್ಪ :– Law Minister ರವರೇ ಈ ತರಹ ವ್ಯಾಖ್ಯಾನ ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ :– ಒಂದೊಂದು offence ಗೂ Indian Penal Code ನಲ್ಲಿ ಒಂದೊಂದು ರೀತಿ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಡಾ: ಹೆಚ್.ಸಿ. ಮಹಾದೇವಪ್ಪ:– ಅವರನ್ನು exonerate ಏನೂ ಮಾಡಿಲ್ಲವಲ್ಲ. It is on the file.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಾನೇನು ಹೇಳುತ್ತೇನೆ ಎಂದರೆ, they can't take protection. ಆವತ್ತಿನಿಂದ ಅದು ಇದೆ. ಆದ್ದರಿಂದ ನಮಗೂ exemption ಸಿಗಬೇಕು ಎಂದು ಹೇಳಲಿಕ್ಕೆ ಬರುವುದಿಲ್ಲ. ಆವತ್ತಿನಿಂದಲೂ ಅದು ಇದೆ. ಅವರನ್ನೂ ಸಹ ಶಿಕ್ಷಿಸಿ. 1.1.2001ರಿಂದ ಅನ್ವಯಿಸುವಂತೆ ಮಾನ್ಯ ಲೋಕಾಯುಕ್ತರು report ಕೊಟ್ಟಿದ್ದಾರೆ. ಅದನ್ನೂ ಮಾಡಿ. ಇನ್ನೂ final report ಅನ್ನು ಅವರಿನ್ನೂ ಕೊಡಬೇಕಾಗಿದೆ. ಅದನ್ನೂ refer ಮಾಡಿ, ಎಲ್ಲವನ್ನೂ refer ಮಾಡಿ. ಈ ದೇಶದಲ್ಲಿ, ರಾಜ್ಯದಲ್ಲಿ ಯಾರ್ಯಾರು ಬೇರೆ ಬೇರೆ ಕಡೆ ಮಾಡುತ್ತಿದ್ದಾರೆ, ಕರ್ನಾಟಕದ ಫಾರೆಸ್ಟ್‌ಗಳಲ್ಲಿ ಯಾರು ಅಕ್ರಮವಾಗಿ ಮಾಡುತ್ತಿದ್ದಾರೆ ಅವರೆಲ್ಲಾ ಹೋಗಬೇಕಲ್ಲಾ? ನಾನು hang ಮಾಡಿಬಿಡಿ ಎಂದು ಹೇಳಿದರೆ, that is the maximum punishment prescribed under the Indian Penal Code. 50-60 ಸಾವಿರ ಕೋಟಿ ರೂಪಾಯಿಗಳ ರಾಜ್ಯದ ಸಂಪತ್ತನ್ನು ಲೂಟಿ ಮಾಡಿರುವುದಕ್ಕೆ ಒಂದು ವರ್ಷ imprisonment ಕೊಡುವುದಕ್ಕಾಗುತ್ತದೆಯೇ? One year imprisonment with Rs. 10,000 fine ಎಂದು ಹೇಳುವುದಕ್ಕಾಗುತ್ತದೆಯೇ? ಮುಖ್ಯಮಂತ್ರಿಗಳು ಇದರ ಜವಾಬ್ದಾರಿಯನ್ನು ಹೊರಬೇಕು. ಅದಕ್ಕೆ ನಾನು ಹೇಳುತ್ತಿದ್ದೇನೆ, Forest Department, Mines Department, ಒಬ್ಬರ ಮೇಲೆ ಒಬ್ಬರು ಎಲ್ಲಾ ಕಳ್ಳರನ್ನು ಇವರು ಇಟ್ಟುಕೊಂಡು, ಅವರಿಗೆ ರಕ್ಷಣೆ ಕೊಟ್ಟುಕೊಂಡು ಪ್ರಾಮಾಣಿಕರಿಗೆ ಶಿಕ್ಷೆ ಕೊಟ್ಟುಕೊಂಡು ಮಾಡುತ್ತಿರುವುದರಿಂದ, ಮುಖ್ಯಮಂತ್ರಿಗಳು ಇದರ ಜವಾಬ್ದಾರಿಯನ್ನು ಹೊರಬೇಕು, ಅವರು ಮುಖ್ಯಮಂತ್ರಿಗಳಾಗಿ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಯಾವುದೇ ನೈತಿಕ ಹಕ್ಕಿಲ್ಲ ಎನ್ನುವುದನ್ನು ನಾನು ಇವತ್ತು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಕೊಡುವುದು ಬಿಡುವುದು ನಿಮಗೆ ಬಿಟ್ಟದ್ದು, ನಾವು ಕೊಡುವುದಿಲ್ಲವೆಂದು ಬಂಡತನ ಬಿದ್ದರೆ ನಾವೇನು

ಮಾಡುವುದಕ್ಕಾಗುತ್ತದೆ. ಮಾನ್ಯ ಆಚಾರ್ಯರೆ, ಇಷ್ಟೆ ಅಲ್ಲ, ಆರ್.ಡಿ. ಕಿತ್ತೂರ್ ಎಂಬ ಒಬ್ಬ ಗೃಹಸಚಿವರಿದ್ದರು, ಅವರು ಏತಕ್ಕೆ ರಾಜೀನಾಮೆ ಕೊಟ್ಟರು, ಸಣ್ಣ ವಿಚಾರ, ಅದ್ಯಾರೋ ಹೆಣ್ಣುಮಗಳು ಅವರ ಮನೆಯಿಂದ ಹೊರಗೆ ಬಂದಳೆಂಬುದು, ಯಾರು ಎಂಬುದು ಗೊತ್ತಾಗಲಿಲ್ಲ. ಆಮೇಲೆ ದೇವೇಂದ್ರಪ್ಪ ಗಾಳಪ್ಪ ರಾಜೀನಾಮೆ ಕೊಟ್ಟರು, ನಾನು ರಾಜೀನಾಮೆ ಕೊಟ್ಟದ್ದು ಸರಿಯಲ್ಲವೆಂದು ಹೇಳುವುದಿಲ್ಲ, ಅವರು ಕೊಟ್ಟರು. ಕನ್ನಡ ಸಾಹಿತ್ಯದಲ್ಲಿ ದಲಿತರಿಗೆ ಸಹಾಯವಾಗುವುದಿಲ್ಲವೆಂದು ಹೇಳಿದ್ದಕ್ಕೆ ಬಸವಲಿಂಗಪ್ಪನವರಿಂದ ಅವತ್ತು ರಾಜೀನಾಮೆ ಕೊಡಿಸಿಬಿಟ್ಟರು. ಸಿದ್ದಲಿಂಗಯ್ಯನವರು ಕೊಟ್ಟರು, ಸಿ.ಎಂ. ಇಬ್ರಾಹಿಂ ರೋಲೆಕ್ಸ್ ವಾಚ್ ತಂದು ಕೈಗೆ ಕಟ್ಟಿಕೊಂಡಿದ್ದರು ಎಂದು ಆರೋಪಿಸಲಾಗಿ ಅವರು ರಾಜೀನಾಮೆ ಕೊಟ್ಟರು. ರೇಣುಕಾ ರಾಜೇಂದ್ರನ್, ಯಾವುದೋ ಸಬ್ ಇನ್‌ಸ್ಪೆಕ್ಟರ್ ಕೇಸ್‌ನಲ್ಲಿ ರೂ. 25,000 ಲಂಚ ತೆಗೆದುಕೊಂಡರೆಂಬ ಅಲಿಗೇಷನ್ ಮೇಲೆ ರಾಜೀನಾಮೆ ಕೊಟ್ಟರು. ಜಾಲಪ್ಪನವರು, ತಮ್ಮ ಮೇಲೆ ಯಾವುದೋ ಕ್ರಿಮಿನಲ್ ಕೇಸ್ FIR ರಿಜಿಸ್ಟರ್ ಆಯಿತೆನ್ನುವ ಕಾರಣಕ್ಕೋಸ್ಕರ ರಾಜೀನಾಮೆ ಕೊಟ್ಟರು. There are so many instances. ಸಿಬಿಐ ನವರು ಮಾಡಿದ್ದರು, ಈಗ ನಿಮ್ಮ ಮೇಲೆ ಮಾಡಿಲ್ಲವೇ, ನೀವು ಮಾಡಬೇಕಲ್ಲ, ನೀವು ಒಪ್ಪಿಕೊಳ್ಳಬೇಕಲ್ಲ, ಬೇರೆ ದಾರಿ ಇಲ್ಲವಲ್ಲಾ? ಬೇರೆ ದಾರಿ ಇಲ್ಲದೆ ಯಡಿಯೂರಪ್ಪನವರು ರಾಜೀನಾಮೆಯನ್ನು ಕೊಡಲೇ ಬೇಕಲ್ಲ. ಇದೆಲ್ಲಾ ಇರುವುದರಿಂದ ಅಲ್ಲಿ ಮೊನ್ನೆ ಅದಕ್ಕೇನಾ ಅಳುತ್ತಿದ್ದದ್ದು? ಅಳುವುದಿಲ್ಲವೆಂದು ಹೇಳಿದ್ದಾರೆಯೇ? ಈಗ ಪುನಃ ಅಳಬೇಕಾಗುತ್ತದೆ. ಇವರು ಇದನ್ನು ಸಿಬಿಐಗೆ ವಹಿಸದೆ ಹೋದರೆ ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಜನತೆಯ ಮುಂದೆ ಅಪರಾಧಿ ಸ್ಥಾನದಲ್ಲಿರಬೇಕಾಗುತ್ತದೆ, ಅವರೇ accused ಆಗಿ ಉಳಿದುಬಿಡುತ್ತಾರೆ. ಆದುದರಿಂದ ನಾನು ಅವರಿಗೆ ಏನು ಸಲಹೆ ಕೊಡುತ್ತೇನೆಂದರೆ, ರಾಜೀನಾಮೆ ಕೊಟ್ಟುಬಿಡುವುದು ಒಳ್ಳೆಯದು, ಕೊಟ್ಟುಬಿಡಲಿ, ಅವರು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅವರಿಗೆ ಈಗ ಅಧಿಕಾರ ಉಳಿದಿಲ್ಲ, ಹೋಯಿತು, CBI enquiry ಗೆ Order ಮಾಡಿ ಬರೆದುಬಿಟ್ಟು, ಕೇಂದ್ರಕ್ಕೆ ವಹಿಸಿಬಿಟ್ಟು ರಾಜೀನಾಮೆ ಕೊಟ್ಟುಬಿಡಲಿ, ಹೇಗೂ ಕೇಂದ್ರ ಸರ್ಕಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆಮೇಲೆ ಕೇಂದ್ರ ಸರ್ಕಾರಕ್ಕೆ ಹೋಗುವುದು ಬಿಡುವುದನ್ನು ಯೋಚನೆ ಮಾಡೋಣ. ಆದುದರಿಂದ ಇನ್ನು ಹೇಳುವುದಕ್ಕೆ ಬಹಳಷ್ಟು ವಿಚಾರಗಳಿವೆ, ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಬೇರೆಯವರು ಸ್ವಲ್ಪ ಹೇಳಲಿ. ಇನ್ನು ಸ್ವಲ್ಪ ಹೇಳಲೇ, ಯಡಿಯೂರಪ್ಪ ಬೇಗ ಹೋದರೆ ಸಾಕು ಎಂದು ಕಾಯುತ್ತಿದ್ದಾರೆ, they are all interested. They are very much interested. ಜನಾರ್ಧನ ರೆಡ್ಡಿ ಜೊತೆ ಸೇರಿ ಒಂದು ಸಾರಿ ಗುಂಪು ಮಾಡಿದ್ದೀರಿ, ನೀವು ತೀರ್ಮಾನ ಮಾಡಿ. ಜನಾರ್ಧನ ರೆಡ್ಡಿಯವರೆ, ಆಮೇಲೆ ಹೇಳಿ,

ಹೇಗೂ ನೀವು ಉತ್ತರವನ್ನು ಕೊಟ್ಟೇ ಕೊಡುತ್ತೀರಿ, ಈಗ ನಿಮ್ಮ ಹೇಳಿಕೆ ಇದ್ದೇ ಇರುತ್ತದೆ, ಓಬಳಾಪುರಂ ಬಗ್ಗೆ ನೀವು ಮಾತನಾಡಬೇಕಲ್ಲಾ? ಲೋಕಾಯುಕ್ತರವರು ಓಬಳಾಪುರಂ ಬಗ್ಗೆ ಏನೇನು ಹೇಳಿದ್ದಾರೆ, ಅದನ್ನೆಲ್ಲಾ ನೀವು ಹೇಳಬೇಕಲ್ಲಾ? ಆಗ ನೀವು ಹೇಳಿ.

*** *** ***

ಶ್ರೀ ಬಿ.ಎಸ್. ಯಡಿಯೂರಪ್ಪ [ಮುಖ್ಯಮಂತ್ರಿಗಳು]: ನೋಡಿ, ನೀವು ಗೌರವಾನ್ವಿತ ವಿರೋಧಪಕ್ಷದ ನಾಯಕರು, ಒಬ್ಬ ಮುಖ್ಯಮಂತ್ರಿ ಕುರಿತು ಮಾತನಾಡುತ್ತೀರಿ, ಇದನ್ನು 6 ಕೋಟಿ ಜನರು ಕೇಳುತ್ತಿದ್ದಾರೆ, ನೀವು ಅಧಿಕಾರದಲ್ಲಿದ್ದಾಗ ಆ ಕಳ್ಳರೆಲ್ಲಾ ನಿಮ್ಮ ಜೊತೆಯಲ್ಲಿರಲಿಲ್ಲವೇ? ಅವರು ಲೂಟಿ ಮಾಡುವಾಗ ಅವರು ನಿಮ್ಮ ಜೊತೆಯಲ್ಲಿರಲಿಲ್ಲವೇ?

ಶ್ರೀ ಸಿದ್ದರಾಮಯ್ಯ: ಅವರಿಗೂ ಶಿಕ್ಷೆ ಕೊಡಿ, punish them. ನಾವು ಬೇಡವೆಂದು ಹೇಳಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ರಾಜ್ಯದಲ್ಲಿ ವಿಷಬೀಜವನ್ನು ಬಿತ್ತಿದವರೇ ನೀವು ಭ್ರಷ್ಟಾಚಾರ ತಂದವರೇ ನೀವು, ಲೂಟಿ ಮಾಡುವುದಕ್ಕೆ ಪ್ರಾರಂಭ ಮಾಡಿದವರೇ ನೀವು, ನಿಮಗೆ ಮಾತನಾಡುವ ನೈತಿಕ ಹಕ್ಕಿಲ್ಲ, ನಿಮ್ಮ ಗೌರವಕ್ಕೆ ನೀವೇ ಚ್ಯುತಿ ತಂದುಕೊಳ್ಳುತ್ತಿದ್ದೀರಿ, ಮಾನ ಮರ್ಯಾದೆ, ಜವಾಬ್ದಾರಿ ಇರುವ ಒಬ್ಬ ವಿರೋಧಪಕ್ಷದ ನಾಯಕರ ಬಾಯಲ್ಲಿ ಬರುತ್ತಿರುವ ಮಾತುಗಳು ಇವು, ನಿಮಗೆ ಶೋಭೆ ತರುವುದಿಲ್ಲ. ಅದನ್ನು ತಿದ್ದಿಕೊಳ್ಳಬೇಕು, ಈ ರಾಜ್ಯವನ್ನು ಈ ದುಸ್ಥಿತಿಗೆ ತಂದಿರೆಂದು ಜನರು ನಿಮ್ಮನ್ನು ಮನೆಗೆ ಕಳುಹಿಸಿದರು, ಈ ನಾಡಿನ ಜನರಿಗೆ ಲೂಟಿ, ದರೋಡೆಯನ್ನು ಕಲಿಸಿದವರು ನೀವು. Value Added Industry ತರಬೇಕೆಂದು ಹೇಳಿದವನು ಯಡಿಯೂರಪ್ಪ, ನೀವೇನು ಮಾಡಿದಿರಿ? ಶಾಮೀಲಾಗಿ ಲೂಟಿ ಮಾಡುವುದಕ್ಕೆ ಅವಕಾಶ ಕೊಟ್ಟಿರಿ, ನಾಚಿಕೆಯಾಗಬೇಕಾಗಿರುವುದು ನಿಮಗೆ, ನನಗಲ್ಲ...

*** ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ನಮ್ಮ ಬಗ್ಗೆ ಮಾತನಾಡುವುದಕ್ಕೆ ನಿಮಗೆ ನೈತಿಕ ಹಕ್ಕಿಲ್ಲ.

[ಗೊಂದಲ]

ಶ್ರೀ ಬಿ.ಎಸ್. ಯಡಿಯೂರಪ್ಪ :- ಅವರು ಆ ರೀತಿ ಹೇಳಿರುವುದಕ್ಕೆ ಕ್ಷಮೆ ಕೇಳಬೇಕು, ಈ ನಾಡಿನ ಜನತೆಯ ಕ್ಷಮೆ ಕೇಳಬೇಕು, ಮರ್ಯಾದೆಯಿಂದ ವಿರೋಧಪಕ್ಷದ ~~ನಾಯಕರಾಗಿ ನಡೆದುಕೊಳ್ಳುವ ರೀತಿನಾ ಇದು?~~

[ಗೊಂದಲ]

ಶ್ರೀ ಸಿದ್ದರಾಮಯ್ಯ :- ನಾನು ಯಾವತ್ತು un-parliamentary word ಬಳಸುವುದಿಲ್ಲ, ನಾನು ಏತಕ್ಕೆ ಕ್ಷಮೆ ಕೇಳಲಿ?

[ಗೊಂದಲ]

ಶ್ರೀ ಬಿ.ಎಸ್. ಯಡಿಯೂರಪ್ಪ :- ಪ್ರತಿಪಕ್ಷದ ನಾಯಕರ ಸ್ಥಾನಕ್ಕೆ ಅಗೌರವ ತರುವಂಥ ರೀತಿಯಲ್ಲಿ ನಡೆದುಕೊಂಡ ನೀವು, ಮಾನ ಮರ್ಯಾದೆ ಇದ್ದರೆ ಆ ಸ್ಥಾನದಲ್ಲಿ ಒಂದು ಕ್ಷಣ ಮುಂದುವರೆಯಬಾರದು.

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಆಧಾರರಹಿತವಾದ ಆರೋಪ, ಯಾವ ಆರೋಪವನ್ನು ಸಾಬೀತು ಮಾಡಿದ್ದೀರಿ ಹೇಳಿ, ಆಧಾರರಹಿತವಾದ ಆರೋಪ ಮಾಡುತ್ತಿದ್ದೀರಿ.

[ಗೊಂದಲ]

ಶ್ರೀ ಸಿದ್ದರಾಮಯ್ಯ :- ನಾನು ಕಂಪ್ಲೀಟ್ ಮಾಡುತ್ತೇನೆ, ಅವರು ಮುಖ್ಯಮಂತ್ರಿಗಳಾಗಿ ಮುಂದುವರೆಯುವುದಕ್ಕೆ ಒಂದು ಕ್ಷಣವು ಅವರಿಗೆ ನೈತಿಕ ಹಕ್ಕಿಲ್ಲ. My demand is, ಸಿಬಿಐಗೆ ವಹಿಸಬೇಕು, ಈ ಸರ್ಕಾರ ರಾಜಿನಾಮೆ ಕೊಡಬೇಕು.

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಮೊದಲು ನಿಮ್ಮ ಕಾಂಗ್ರೆಸ್ ಪಕ್ಷದ ಗಣಿ ಧಣಿಗಳದ್ದು ಹೊರಗೆ ಬರಲಿ, ಸೆಂಟ್ರಲ್ ಗೌರ್ನಮೆಂಟ್ ಪ್ರೊಟೆಕ್ಷನ್ ಕೊಡುತ್ತಿದೆ.

[ಗೊಂದಲ]

ಶ್ರೀ ಸಿದ್ದರಾಮಯ್ಯ :- ನಾನು ಹೇಳುವುದಲ್ಲ, ಲೋಕಾಯುಕ್ತ ವರದಿಯಲ್ಲಿ ಹೇಳಲಾಗಿದೆ, ಓದಿ ಹೇಳಲೇ..

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಲೋಕಾಯುಕ್ತರು ನಿಮ್ಮ ಮುಖ್ಯಮಂತ್ರಿಗಳ ಮೇಲೆ ವರದಿ ಕೊಟ್ಟಿದ್ದಾರೆ, ರುಜುವಾತ್ ಆಗಿದೆ, ನಮ್ಮ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಹಕ್ಕೇ ಇಲ್ಲ. It has been proved by the Lokayukta. The Ex-Chief Minister of the Congress party is involved in the scam. It has been proved by the Lokayukta. ನೀವು ಕ್ಷಮೆ ಕೇಳಬೇಕು, ಆ ಸ್ಥಾನಕ್ಕೆ ಗೌರವ ಬರುವ ರೀತಿಯಲ್ಲಿ ನಡೆದುಕೊಳ್ಳಬೇಕು, ನೀವು ಬಾಯಿಗೆ ಬಂದಂತೆ ಮಾತನಾಡುವುದಕ್ಕಾಗುವುದಿಲ್ಲ. It has been proved by the Lokayukta, none other than the same Lokayukta. It has been proved that

the Congress Chief Minister is involved in the scam. ನೀವು ಈಗ ಕ್ಷಮೆ ಕೇಳಬೇಕು, ಕಾಂಗ್ರೆಸ್ ಪಕ್ಷಕ್ಕೆ ನೈತಿಕ ಹಕ್ಕಿಲ್ಲ.

[ಗೊಂದಲ]

Sri Siddaramaiah:- That is why we are demanding CBI enquiry.

[ಗೊಂದಲ]

Sri Siddaramaiah:- I demand CBI enquiry. ಈ ಕಾರಣಕ್ಕೋಸ್ಕರ CBI enquiry demand ಮಾಡುತ್ತಿದ್ದೇವೆ.

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಲೋಕಾಯುಕ್ತದವರು ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಜನಾರ್ದನ ರೆಡ್ಡಿ :- ನಾನು ಎಮೋಷನಲ್ ಆಗಿ ಮಾತನಾಡುವುದಿಲ್ಲವೆಂದು ತೀರ್ಮಾನ ಮಾಡಿಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಪೇಶೆನ್ಸ್ ಆಗಿದ್ದಾರೆ. ನೀವು ಅವರಿಗೆ ಕಿಚಾಯಿಸುವ ರೀತಿಯಲ್ಲಿ ಮಾಡನಾಡುತ್ತಿದ್ದೀರಿ. ತಾವು ಬೇಲಿಕೇರಿ ಎಂದು ಹೇಳುತ್ತಿದ್ದೀರಿ...

ಶ್ರೀ ಸಿದ್ದರಾಮಯ್ಯ :- ನಾನು ಯಾರನ್ನೂ ಕಳ್ಳರು ಎಂದು specific ಆಗಿ ಹೇಳಲಿಲ್ಲ. ಲೋಕಾಯುಕ್ತ ರಿಪೋರ್ಟ್‌ನಲ್ಲಿ ಇದೆ, ಕಳ್ಳತನದಿಂದ ಅದಿರನ್ನು ರಫ್ತು ಮಾಡಿರುವವರು, ನಾನು ಯಾರನ್ನೂ ಕೂಡ XYZ ಎಂದು ಹೇಳಲಿಲ್ಲ.

ಶ್ರೀ ಜನಾರ್ದನ ರೆಡ್ಡಿ :- ಮಾನ್ಯ ಸಿದ್ದರಾಮಯ್ಯನವರೇ ತಾವು ಮಾತನಾಡುವ ಸಂದರ್ಭದಲ್ಲಿ ಬಹಳ ವಿವರವಾಗಿ ಮಾತನಾಡುತ್ತಿದ್ದೀರಿ. ಬಹಳಷ್ಟು ಅಂಶಗಳನ್ನು ನೀವು ಟಚ್ ಮಾಡುತ್ತಿದ್ದೀರಿ. ಅದರಲ್ಲಿ ಯಾವುದೇ ರೀತಿ ಸಂಶಯ ಇಲ್ಲ. ಸತ್ಯವೂ ಇದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಮೊನ್ನೆ ಒಪ್ಪಿಕೊಂಡಿದ್ದಾರೆ. ಇದು ಮೊದಲಿನಿಂದಲೂ ಆಗುತ್ತಿದೆ ಇದಕ್ಕೆ ಕಡಿವಾಣ ಹಾಕುವ ಹಾಗೆ ಮಾಡೋಣವೆಂದು ಬಹಳ ಭಾವೋದ್ವೇಗದಲ್ಲಿ ಹೇಳಿದ್ದಾರೆ. confidence ಕೊಟ್ಟಿದ್ದಾರೆ. ಅವರು ಏನೆಂದು confidence ಕೊಟ್ಟಿದ್ದಾರೆ, ಇಡೀ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಆಗುತ್ತಿರುವುದನ್ನು ಮಟ್ಟ ಹಾಕುವುದಕ್ಕೆ ನೀವೂ ನಾವೂ ಎಲ್ಲರೂ ಸೇರಿ ಏನು ಮಾಡಬೇಕು ಅದೆಲ್ಲವನ್ನೂ ಮಾಡೋಣ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ತಾವು ಮಾತನಾಡಿ ಇಲ್ಲವೆಂದಲ್ಲ. ಪದೇ ಪದೇ ನಿಮ್ಮ ಜೊತೆಯಲ್ಲಿ ಕಳ್ಳರಿದ್ದಾರೆ, ಹ್ಯಾಂಗ್ ಮಾಡೋಣ, ನಾನಿದ್ದರೆ ನನ್ನನ್ನು ಹ್ಯಾಂಗ್ ಮಾಡಿ, ನೀವಿದ್ದರೆ ನಿಮ್ಮನ್ನು ಹ್ಯಾಂಗ್ ಮಾಡಿ ಎಂದು ಹೇಳುವುದು ಸರಿಯಲ್ಲ

ಮಾತು ಮಾತಿಗೆ ನೀವು ಮಾನ್ಯ ಮುಖ್ಯಮಂತ್ರಿಗಳನ್ನು ನೀವು ನಾಲಾಯಕ್, ನೀವು ರಾಜೀನಾಮೆ ಕೊಡಬೇಕು. you are unfit, ಪದೇ ಪದೇ ನೀವು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಈ ರೀತಿ ಮಾತನಾಡುತ್ತಿದ್ದೀರಿ. ತಾವು ರೆಕಾರ್ಡ್ ತೆಗೆದು ನೋಡಿ you are unfit, ಎಂದು ಹೇಳಿದ್ದೀರಿ. ನಿಮ್ಮ ಶಾಸಕರಿಗೆ ಇಷ್ಟವಿಲ್ಲ ನೀವು ಹೋಗಿ ಬಿಡಿ ಎಂದು ಹೇಳುತ್ತಿದ್ದೀರಿ. ಈ ಶಬ್ದಗಳನ್ನು ಬಳಸುವುದು ಬೇಡ. Subject ನಿಂದ deviation ಆಗುವುದು ಬೇಡ. ತಾವು ಮೈನಿಂಗ್ ಬಗ್ಗೆ ಮಾತನಾಡಿ, ಓಬಳಾಪುರಂ ಬಗ್ಗೆ ಮಾತನಾಡಿದ್ದೀರಿ, ಆಂದ್ರದ ಬಗ್ಗೆ ಮಾತನಾಡಿದ್ದೀರಿ, ಕರ್ನಾಟಕ ರಾಜ್ಯದ ಬಗ್ಗೆ ಮಾತನಾಡಿದ್ದೀರಿ, ಇಲ್ಲಾ ಪೋರ್ಟ್‌ಗಳ ಬಗ್ಗೆ ಮಾತನಾಡುತ್ತಿದ್ದೀರಿ, illegal mining ಬಗ್ಗೆ ಹೇಳುತ್ತಿದ್ದೀರಿ, 5,000 ಕೋಟಿ ಎಂದು ಹೇಳಿದಿರಿ, 50,000 ಕೋಟಿ ಎಂದು ಹೇಳಿದಿರಿ, ಏನೆಲ್ಲಾ ಮಾತನಾಡಬೇಕು ಮಾತನಾಡಿ. ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ಹಗುರವಾಗಿ ಮಾತನಾಡುವುದಾಗಲಿ, ಚುಚ್ಚು ಮಾತುಗಳನ್ನು ಮಾತನಾಡುವುದಾಗಲಿ ಬೇಡ. ತಾವು ವಿಷಯದ ಬಗ್ಗೆ ಮಾತನಾಡಿ. ತಾವು ಎರಡು ದಿನ ಮಾತನಾಡಿ, ಮೂರು ದಿನ ಮಾತನಾಡಿ ಒಂದು ವಾರ ಕಾಲ ಮಾತನಾಡಿ ತೊಂದರೆ ಇಲ್ಲ. ತಾವು ವಿಷಯದ ಬಗ್ಗೆ ಮಾತನಾಡುತ್ತಾ ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ಇನ್ನೊಬ್ಬರ ಬಗ್ಗೆ ಮಾತನಾಡುವುದು ಬೇಡ. ಮಾನ್ಯ ಅಧ್ಯಕ್ಷರೆ ದಯವಿಟ್ಟು ಆ ಪದಗಳನ್ನು ಕಡತದಿಂದ ತೆಗೆದು ಹಾಕಿ.

ಅಧ್ಯಕ್ಷರು :– ಯಾವ್ಯಾವುದು ಇದೆ ಅದೆಲ್ಲವನ್ನೂ ನಾನು ಕಡತದಿಂದ ತೆಗೆದು ಹಾಕುತ್ತೇನೆ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡಿ. ನಾನು ಹೇಳಿರುವ ಪದ ಪಾರ್ಲಿಮೆಂಟರಿನೋ ಅನ್ ಪಾರ್ಲಿಮೆಂಟರಿನೋ ಎಂದು ತಾವು ರೂಲಿಂಗ್ ಕೊಡಿ. ಅನ್ ಪಾರ್ಲಿಮೆಂಟರಿ ಎಂದು ತಾವು ರೂಲಿಂಗ್ ಕೊಡಿ ನಾನು ವಾಪಸ್ ತೆಗೆದುಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ಅನ್ ಪಾರ್ಲಿಮೆಂಟರಿ ಪದಗಳನ್ನು ನಾವೂ ಉಪಯೋಗಿಸುತ್ತೇವೆ. ಇದೇ ವಿರೋಧ ಪಕ್ಷದ ನಾಯಕರಿಗೆ ಇದೇ ಮಾತನ್ನು ಹೇಳುತ್ತೇವೆ ನಾವು. ಅದಕ್ಕೆ ಏನು ಉತ್ತರ ಕೊಡುತ್ತೀರಿ ಹೇಳಿ ನೋಡೋಣ. ನೀವು ನಾಲಾಯಕ್ ಎಂದು ಹೇಳಲಾ? ನೀವು unfit ಎಂದು ಹೇಳಲಾ?

ಅಧ್ಯಕ್ಷರು :– ಕಡತ ತರಿಸಿ ಪರಿಶೀಲನೆ ಮಾಡಿ ಕಡತದಿಂದ ತೆಗೆಸುತ್ತೇನೆ. ನಾನು ಪರಿಶೀಲನೆ ಮಾಡುತ್ತೇನೆ. We will examine this.

Sri Siddaramaiah:- Without my knowledge. .... I am ready to withdraw.

ಶ್ರೀ ಎಸ್. ಸುರೇಶ್ ಕುಮಾರ್ :- Unparliamentary ಎನ್ನುವುದಕ್ಕೆ ಸೀಮಿತವಾಗಬೇಡಿ. ಕಳ್ಳರು ಕಾಕರು ನಿಮ್ಮ ಜೊತೆಯಲ್ಲಿದ್ದಾರೆ ಎನ್ನುವುದು is it a decent statemet? CBI ಯಲ್ಲಿ 'C' ಯಾವುದಕ್ಕೆ ರೆಫರ್ ಆಗುತ್ತದೆ ಗೊತ್ತಾ ನಿಮಗೆ? 'C' ಎನ್ನುವುದು, it is a Congress Bureau of Investigation. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಮಾನ್ಯ ಸಿದ್ದರಾಮಯ್ಯನವರು ಏನೇನು ಪದ ಉಪಯೋಗಿಸಿದ್ದಾರೆ ವಿಶೇಷವಾಗಿ ಕಳ್ಳರು ಕಾಕರು ಎಂಬ ಪದಗಳನ್ನು ವಾಪಸ್ ತೆಗೆದುಕೊಳ್ಳಬೇಕು. ದಯವಿಟ್ಟು ಮಾಧ್ಯಮದವರಿಗೂ ಕೂಡ ಮನವಿ ಮಾಡಬೇಕು. ಅವರಿಗೆ ತಾವು ಏನು ಮಾತನಾಡುತ್ತಿದ್ದಾರೆಂದು ಮೈ ಮೇಲೆ ಪರಿವೆಯೇ ಇಲ್ಲದೆ ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಇವರ ಸರ್ಕಾರಕ್ಕೆ ಪ್ರಜ್ಞೆಯೇ ಇಲ್ಲ.

ಅಧ್ಯಕ್ಷರು :- ಎಲ್ಲರೂ ಹೀಗೆ ಎದ್ದು ನಿಂತರೆ ನಾನು ಯಾರಿಗೆ ಅವಕಾಶ ಕೊಡಲಿ.

Sri Katta Subramanya Naidu :- Can we use the same words at them? Sir, you permit us we can also use the same words. We will also use the same words. Let them permit.

Sri Siddaramaiah :- I did not say to any individual.

ಶ್ರೀ ಸುರೇಶ್ ಕುಮಾರ್ ಎಸ್. :- ನೀವು individual ಆಗಿ ಹೇಳಲಿಲ್ಲವೆಂದರೆ ನಾವೆಲ್ಲರೂ ಕಳ್ಳರಾಗುತ್ತೇವೆ. ಕಳ್ಳರು ಕಾಕರು ನಿಮ್ಮ ಜೊತೆಯಲ್ಲಿದ್ದಾರೆಂದು ಹೇಳಿದರೆ ಏನರ್ಥ?

[ಗೊಂದಲ]

ಶ್ರೀ ವಿ. ಶ್ರೀನಿವಾಸಪ್ರಸಾದ್ :- ಮಾನ್ಯ ಅಧ್ಯಕ್ಷರೆ, you just listen. ನನಗೂ ಕೂಡ ಅನುಭವ ಇದೆ, ನೀವು ಸ್ವಲ್ಪ ಕೇಳಿ. ಸಂಸದೀಯ ಕಲಾಪಗಳಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಬಹಳ ತೀಕ್ಷ್ಣವಾದ ಪದಗಳನ್ನು ಬಳಸಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :- ಬರೀ ತೀಕ್ಷ್ಣ ಅಲ್ಲ, It should be a res ponsible opposition party. ಜವಾಬ್ದಾರಿಯುತ ಪದಗಳು ಬರಬೇಕು.

ಶ್ರೀ ವಿ. ಶ್ರೀನಿವಾಸಪ್ರಸಾದ್ :- I don't deny it. ನಾನು ಅದನ್ನು ಅಲ್ಲಗಳೆಯಲಿಲ್ಲ. ಸಂಸದೀಯ ನಡವಳಿಕೆಗಳಲ್ಲಿ ಪ್ರತಿ ಪಕ್ಷದ ಕಡೆಯಿಂದ ಅಥವಾ ವಿರೋಧ ಪಕ್ಷದ ಕಡೆಯಿಂದ ತೀಕ್ಷ್ಣವಾದ ಮಾತುಗಳನ್ನು ಆಡಿದಂತಹ ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ಕೂಡ ಇದು ಬರುತ್ತದೆ. ಆಗ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು

ಮಾತನಾಡುತ್ತಾ ಹೇಳಬೇಕು, ನೀವು ಯಾವ ರೀತಿಯಾದ ತೀಕ್ಷಣವಾದ ಪದಗಳನ್ನು ಉಪಯೋಗಿಸುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ. ಗಮನ ಕೊಟ್ಟಿದ್ದೇನೆ, ಆದರೆ ನಾನು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ನಾನೂ ಕೂಡ ತೀಕ್ಷ್ಣವಾದ ಉತ್ತರ ಕೊಡುತ್ತೇನೆ, ನೀವು ಸಹಿಸಿಕೊಳ್ಳಬೇಕು ಎನ್ನತಕ್ಕಂತಹ ಮಾತನ್ನು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ :– ನೀವು ಹೇಳುವ ರೀತಿಯಲ್ಲಿ ಇಲ್ಲ ಅದು. ನಿಮ್ಮ ಜೊತೆ ಕಳ್ಳರು ಇದ್ದಾರೆಂದರೆ ಅವರ ಬಳಿ ಆಧಾರ ಇದೆಯೇ? ಒಬ್ಬ ಜವಾಬ್ದಾರಿಯುತ ವಿರೋಧ ಪಕ್ಷದ ನಾಯಕರಾಗಿ ಆಧಾರರಹಿತವಾಗಿ ಕಳ್ಳರಿದ್ದಾರೆ ಎಂದರೆ ಹೇಗೆ? ಆಧಾರರಹಿತವಾಗಿ ಏನು ಬೇಕಾದರೂ ಮಾತನಾಡಬಹುದಾ? ಮಾನ್ಯ ಮುಖ್ಯ ಮಂತ್ರಿಗಳು ಶಾಂತವಾಗಿ ಕೇಳುತ್ತಿದ್ದರು. ನೀವು ಹೇಳಿದ ಹಾಗೆ ಒಂದು ಶಬ್ದ ಮಾತನಾಡಿರಲಿಲ್ಲ. ನಾವು ಯಾರೂ ಕೂಡ ಮಾತನಾಡಿರಲಿಲ್ಲ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ನಿಮಗೆ ನಾಲಾಯಕ್ ಎಂದು ಕರೆಯಲಾ? ನಿಮಗೆ ಕಳ್ಳರು ಎಂದು ಕರೆಯಲಾ, ಗೂಂಡಾಗಳು ಎಂದು ಕರೆಯಲಾ? ದಗಾಕೋರರು ಎಂದು ಕರೆಯಲಾ? ಅನ್‌ಫಿಟ್ ಎಂದು ಕರೆಯಲಾ?

ಅಧ್ಯಕ್ಷರು :– ಎಲ್ಲರೂ ಎದ್ದು ನಿಂತರೆ ಹೇಗೆ? ಇವರು ಜವಾಬ್ದಾರಿ ಇರುವ ವಿರೋಧ ಪಕ್ಷದ ನಾಯಕರು, ಆಧಾರ ಇದ್ದರೆ ಹೇಳಲಿ. ಆಧಾರ ಇದ್ದರೆ ಹೇಳಲಿ. ಆಧಾರ ರಹಿತವಾಗಿ, ನಾನು ಯಾರ ಹೆಸರನ್ನೂ ಹೇಳುವುದಿಲ್ಲ, ಕಳ್ಳರು ಎಂದರೆ ಹೇಗೆ? ಏನಿದರರ್ಥ? ಆದುದರಿಂದ ಆಧಾರರಹಿತವಾಗಿ ಹೇಳುವುದು ಸರಿಯಲ್ಲ. ಇದು ಒಂದು. ಇನ್ನು ಎರಡನೆಯದಾಗಿ ನಿಮ್ಮ ಆಡಳಿತದಲ್ಲಿರುವಂಥ ಮುಖ್ಯಮಂತ್ರಿಗಳ ಮೇಲೆ ಇದೇ ಲೋಕಾಯುಕ್ತರು ವರದಿಯಲ್ಲಿ ಹೆಸರು ಸಮೇತ ಹೇಳಿದ್ದಾರೆ. ಹೀಗಿರುವಾಗ ನಿಮಗ್ಯಾವ ನೈತಿಕ ಹಕ್ಕಿದೆ ?

XXX XXX XXX

ಮಾನ್ಯ ಅಧ್ಯಕ್ಷರೆ, ಅವರು ಉಪಯೋಗಿಸಿರುವ ಆ ಶಬ್ಧಗಳನ್ನು ಕಡತದಿಂದ ದಯವಿಟ್ಟು ತೆಗೆಸಬೇಕು.

ಅಧ್ಯಕ್ಷರು :– ಆಯಿತು.

[ಗೊಂದಲ]

ಅಧ್ಯಕ್ಷರು :– ಈ ರೀತಿ ಆ ಕಡೆಯವರು ಈ ಕಡೆಯವರು ಒಟ್ಟಿಗೆ ಹೀಗೆ ಮಾತನಾಡುತ್ತಿದ್ದೀರಿ? what is this?

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಮಾನ್ಯ ಶ್ರೀನಿವಾಸ್‌ಪ್ರಸಾದ್ ರವರೆ, ನೀವು ಹಿರಿಯರು ಮತ್ತು ಅನುಭವಿಗಳು. ಈಗ ನಿಮ್ಮ ಉಪದೇಶ ಮುಖ್ಯಮಂತ್ರಿಗಳಿಗಲ್ಲ. ನಿಮ್ಮ ಪಕ್ಕದಲ್ಲಿಯೇ ಕುಳಿತಿರುವಂಥ ವಿರೋಧ ಪಕ್ಷದ ನಾಯಕರಿಗೆ ಹೇಳಿ. ನಿಮ್ಮ ಉಪದೇಶ ನಮಗೆ ಬೇಕಾಗಿಲ್ಲ. ಶ್ರೀನಿವಾಸ್ ಪ್ರಸಾದ್ ರವರೆ, ನಿಮ್ಮ ಬಗ್ಗೆ ನಮಗೆ ಗೌರವವಿದೆ. ನೀವು ನಿಮ್ಮ ಅನುಭವವನ್ನು ವಿರೋಧ ಪಕ್ಷದ ನಾಯಕರ ಜೊತೆ ಸ್ವಲ್ಪ ಹಂಚಿಕೊಳ್ಳಿ ಮುಖ್ಯಮಂತ್ರಿಗಳಿಗಲ್ಲ ನಿಮ್ಮ ಉಪದೇಶ.

[ಗೊಂದಲ]

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಒಟ್ಟಿಗೆ ಎಲ್ಲರೂ ಮಾತನಾಡಬೇಡಿ. ರೇಣುಕಾಚಾರ್ಯರವರೆ, ನೀವು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಶ್ರೀನಿವಾಸ್ ಪ್ರಸಾದ್ :- ಮಾನ್ಯ ಮುಖ್ಯಮಂತ್ರಿಗಳು ಈ ಅಕ್ರಮ ಗಣಿಗಾರಿಕೆಯನ್ನು ಮತ್ತು ಅಕ್ರಮ ಅದಿರು ಸಾಗಾಣಿಕೆಯನ್ನು ತಡೆಗಟ್ಟಲು ಒಳ್ಳೆಯ ಕ್ರಮವನ್ನು ತೆಗೆದುಕೊಂಡಿದ್ದರು. ಒಬ್ಬ ದಕ್ಷ ಡಿ.ಸಿ. ಯನ್ನು ಬಳ್ಳಾರಿಯಲ್ಲಿ ಹಾಕಿದರು. ಆ ಅಧಿಕಾರಿ ಈ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಕ್ರಮ ತೆಗೆದುಕೊಂಡಾಗ ಅದಕ್ಕೆ ಅಡ್ಡಿ ಪಡಿಸಿದವರ್‍ಯಾರು? ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಅಧಿಕಾರದ ಗದ್ದುಗೆಯನ್ನೇ ಅಲ್ಲಾಡಿಸಿ ಜನಾರ್ಧನ ರೆಡ್ಡಿಯವರು ಮತ್ತೆ ಅಪ್ರಮಾಣಿಕ ಅಧಿಕಾರಿಯನ್ನು ಅಲ್ಲಿಗೆ ಹಾಕಿಸಿಕೊಂಡರು. ಇದನ್ನು ನೀವು ಒಪ್ಪಿಕೊಳ್ಳುತ್ತೀರೋ ಇಲ್ಲವೋ ಹೇಳಿ.

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ನೋಡಿ ನೀವು ಯಾವುದೋ ಸಬ್ಜೆಕ್ಟ್ ತೆಗೆದುಕೊಂಡು ಹೀಗೆ ಮಾತನಾಡಿದರೆ ಹೇಗೆ ಹೇಳಿ. ದಯವಿಟ್ಟು ನಿಮ್ಮ ಉಪದೇಶವನ್ನು ನಿಮ್ಮ ಪಕ್ಷದವರಿಗೆ ಹೇಳಿ. ಗಣಿ ಲೂಟಿ ಮಾಡಿದಂಥವರು ಕಾಂಗ್ರೆಸ್ಸಿನ ಹಿಂದಿನ ಮುಖ್ಯ ಮಂತ್ರಿಗಳು ಎಂದು ಲೋಕಾಯುಕ್ತರು ಸ್ಪಷ್ಟವಾಗಿ ಬರೆದಿದ್ದಾರೆ. ಹೀಗಿರುವಾಗ ನಿಮಗೆ ಯಾವ ನೈತಿಕ ಹಕ್ಕಿದೆ ಮಾತನಾಡುವುದಕ್ಕೆ? what moral right you have got? The same Lokayuktha has indicted the Congress Chief Minister. What moral right you have got? you don't have any moral right?

*** ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

[ಗೊಂದಲ]

ಅಧ್ಯಕ್ಷರು :– XXX XXX XXX

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ನಾನು ಈಗಲೂ I am very clear, ನಾನು ಹೇಳಿರುವುದನ್ನು ಒಪ್ಪಿಕೊಳ್ಳುವುದಕ್ಕೆ ಈಗಲೂ ಸಿದ್ಧ.

ಅಧ್ಯಕ್ಷರು :– ಇಲ್ಲಿ ಎರಡೂ ಭಾಗದಲ್ಲಿರುವವರು ಮಾತನಾಡುವಾಗ ಎರಡೂ ಕಡೆಯೂ ಎನ್ನುವ ಪದಗಳನ್ನು ಉಪಯೋಗಿಸಿದ್ದಾರೆ. ಅವೆರಡನ್ನೂ ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಆ ಕಡೆಯಿಂದಲೂ ಇಲ್ಲಿ ಹೇಳಿದ್ದಾರೆ. ಈ ಕಡೆಯವರೂ ಹೇಳಿದ್ದಾರೆ. ಇವೆರಡನ್ನೂ ಕಡತದಿಂದ ತೆಗೆದು ಹಾಕಿಸಿದ್ದೇನೆ.

[ಗೊಂದಲ]

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರತಕ್ಕಂಥವರು ಈ ಸರ್ಕಾರದಲ್ಲಿದ್ದಾರೆ.

[ಗೊಂದಲ]

ಅಧ್ಯಕ್ಷರು :– ಈಗ ಸದನವನ್ನು ಮತ್ತೆ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 14 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 3.00 ಗಂಟೆಗೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 3.19ಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು : ಈಗ ನಿಯಮ 69ರ ಮೇಲೆ ಮುಂದುವರೆದ ಚರ್ಚೆ ಶಿವಲಿಂಗೇಗೌಡರು ಚರ್ಚೆಯನ್ನು ಪ್ರಾರಂಭಿಸಬೇಕು.

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಚರ್ಚೆ

ವಿಷಯ : ಸನ್ಮಾನ್ಯ ಲೋಕಾಯುಕ್ತರಾದ ಶ್ರೀ ಸಂತೋಷ ಹೆಗಡೆಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) :– ಸನ್ಮಾನ್ಯ ಸಭಾಧ್ಯಕ್ಷರೆ, ನಿಯಮ 69ರಡಿಯಲ್ಲಿ ಈಗಾಗಲೇ ಬಹಳ ದಿವಸಗಳಿಂದ ಚರ್ಚೆ ನಡೆಯುತ್ತಿದೆ. ಲೋಕಾಯುಕ್ತರ

*** ಈ ಪದಗಳನ್ನು ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ರಾಜೀನಾಮೆ ಹಾಗೂ ಗಣಿಗಾರಿಕೆಯಲ್ಲಿ ಆಗುತ್ತಿರುವ ಲೂಟಿ ಮತ್ತು ಅದರಿಂದ ರಾಜ್ಯಕ್ಕೆ ಆಗುತ್ತಿರುವ ಆರ್ಥಿಕ ನಷ್ಟದ ಬಗ್ಗೆ ಸವಿಸ್ತಾರವಾಗಿ ಚರ್ಚೆಯನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ಕನ್ನಡ ನಾಡು ಸಂಪತ್ಭರಿತವಾದಂಥ ನಾಡು, ನೈಸರ್ಗಿಕ ಸಂಪತ್ತನ್ನು, ಖನಿಜ ಸಂಪತ್ತನ್ನು ಹೇರಳವಾಗಿ ಹೊಂದಿರುವ ನಾಡು. ಈಗ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ, ನಾವು ನಾಲ್ಕನೇ ಕ್ಲಾಸಿನಲ್ಲಿದ್ದಾಗ, ವಿಜಯನಗರ ಸಾಮ್ರಾಜ್ಯದಲ್ಲಿ ಮುತ್ತುರತ್ನಗಳನ್ನು ಬಳ್ಳದಿಂದ (ಸೇರಿನಿಂದ) ಅಳೆದು ಮಾರುತ್ತಿದ್ದರು ಎಂದು ಓದುತ್ತಿದ್ದೆವು. ಅಂಥ ರಾಜ್ಯ ನಮ್ಮದು, ಹೇರಳವಾದಂಥ ಅರಣ್ಯ ಸಂಪತ್ತು, ಶ್ರೀಗಂಧದ ಬೀಡು. ಇವೆಲ್ಲವೂ ಕರ್ನಾಟಕ ರಾಜ್ಯಕ್ಕೆ ಕೊಟ್ಟಿರುವ ತಮ್ಮದೇ ಆದಂಥ ವೈಶಿಷ್ಟ್ಯತೆಯ ಪ್ರಭಾವ, ನೈಸರ್ಗಿಕ ಸಂಪತ್ತಿನ ಪ್ರಭಾವದಿಂದ ಭಾರತ ದೇಶದಲ್ಲಿ ಕರ್ನಾಟಕವು ತನ್ನದೇ ಆದಂಥ ಚರಿತ್ರೆಯನ್ನು ಹೊಂದಿರುವುದನ್ನು ನಾವೆಲ್ಲ ಕೇಳಿದ್ದೇವೆ, ನೋಡಿದ್ದೇವೆ, ಅನುಭವಿಸಿದ್ದೇವೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಖನಿಜ ಸಂಪತ್ತಿನಲ್ಲಿ ಕಬ್ಬಿಣದ ಅದಿರು ಹೇರಳವಾಗಿ ಸಿಗುತ್ತಿದೆ. ಹೀಗೆ ಸಿಗುತ್ತಿರುವ ಈ ಖನಿಜ ಸಂಪತ್ತನ್ನು ಕರ್ನಾಟಕ ರಾಜ್ಯದ ಆರ್ಥಿಕ ದೃಷ್ಟಿಯಿಂದ ಉಪಯೋಗಿಸಿಕೊಳ್ಳಲು ನಾವೆಲ್ಲರೂ ವಿಫಲರಾಗಿದ್ದೇವೆಯೇ ಎನ್ನುವ ವಿಚಾರದ ಬಗ್ಗೆ ನಮ್ಮ ಆತ್ಮಶೋಧನೆಯನ್ನು ಮಾಡಿ ನೋಡಿಕೊಳ್ಳಬೇಕಾದ ಒಂದು ಪ್ರಸಂಗ ಇವತ್ತು ಅನಿವಾರ್ಯವಾಗಿ ಬಂದಿದೆ. ಇವತ್ತು ಲಕ್ಷಾಂತರ ಜನ ನಿರುದ್ಯೋಗಿ ಪದವೀಧರರು I.T.I. ಗಳನ್ನು ಮಾಡಿಕೊಂಡು ತಮಗೆ ನೌಕರಿಯಿಲ್ಲದೇ, ಬೆಂಗಳೂರಿಗೆ ಬಂದು ಕೂಲಿ ಮಾಡತಕ್ಕಂಥ ಪರಿಸ್ಥಿತಿಗೆ ನಿರುದ್ಯೋಗದ ಸಮಸ್ಯೆ ಹೋಗಿರುವ ಈ ಕಾಲದಲ್ಲಿ ನಾವು ನಮ್ಮಲ್ಲಿಯೇ ಸಿಗತಕ್ಕಂಥ ನೈಸರ್ಗಿಕ ಖನಿಜ ಸಂಪತ್ತನ್ನು ಉಪಯೋಗಿಸಿಕೊಂಡು, ಕಬ್ಬಿಣದ ಅದಿರಿನ ಉಕ್ಕಿನ ಕಾರ್ಖಾನೆಗಳನ್ನು ಪ್ರಾರಂಭ ಮಾಡಿ, ಲಕ್ಷಾಂತರ ಜನ ನಿರುದ್ಯೋಗಿಗಳಿಗೆ ನಾವು ಉದ್ಯೋಗವನ್ನು ಕೊಟ್ಟು ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಬಹುದಿತ್ತು. ಆದರೆ ಇದ್ಯಾವುದೂ ಆಗುತ್ತಿಲ್ಲ. ಈ ಸಂಪತ್ತೆಲ್ಲವೂ ಎಲ್ಲಿ ಹೋಗುತ್ತಿದೆ? ನಾವೆಲ್ಲ ತಾಯಿ ಭುವನೇಶ್ವರಿಯನ್ನು ಆರಾಧನೆ ಮಾಡುತ್ತೇವೆ, ಹೊಗಳುತ್ತೇವೆ, ಕರ್ನಾಟಕ ಮಾತೆಗೆ ಜಯವಾಗಲಿ ಎಂದು ಹೇಳುತ್ತೇವೆ. ಆದರೆ ಆ ಕನ್ನಡ ತಾಯಿ ಭುವನೇಶ್ವರಿಯ ಒಡಲಿನಲ್ಲಿರುವ ಕಬ್ಬಿಣದ ಅದಿರನ್ನು ಪ್ರತೀ ದಿನಾ ಬಗೆದೂ ಬಗೆದೂ ಹೊರದೇಶಕ್ಕೆ ರವಾನೆ ಮಾಡುತ್ತಿದ್ದೇವಲ್ಲ, ಇಂಥ ಒಂದು ಪರಿಸ್ಥಿತಿಯನ್ನು ನಾವೆಲ್ಲರೂ ಅವಲೋಕನ ಮಾಡಿದರೆ ಬಹಶಃ ಈ ರಾಜ್ಯದ ಪರಿಸ್ಥಿತಿ ಎತ್ತ ಕಡೆಗೆ ಹೋಗುತ್ತಿದೆ ಎನ್ನುವುದು ತಿಳಿಯುತ್ತದೆ. ಅವರು, ಇವರು ಎಂದು ನಾನು ಹೇಳುವುದಿಲ್ಲ, ಈ ರಾಜ್ಯದಲ್ಲಿ ಕೇವಲ 100–150 ಜನರನ್ನು ಕೋಟ್ಯಾಧೀಶ್ವರರನ್ನಾಗಿ ಮಾಡಲಿಕ್ಕೋಸ್ಕರವಾಗಿ, ಈ ರಾಜ್ಯದ ಸಕಲ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲು

ನಾವು ಬಿಟ್ಟಿದ್ದೇವಲ್ಲ, ಇವತ್ತು ಈ ಸದನದಲ್ಲಿ ಕುಳಿತು ಇಂಥ ಒಂದು ಲೂಟಿಯನ್ನು ತಡೆದು, ಈ ರಾಜ್ಯದ ಭವಿಷ್ಯತ್ತನ್ನು ಕಾಪಾಡಲು ನಮಗೆ ಸಾಧ್ಯವಿಲ್ಲವೇ ಎನ್ನುವ ಪ್ರಶ್ನೆಯನ್ನು ನಾವು ಇವತ್ತು ಈ ಸದನದಲ್ಲಿ ಮಾಡಿಕೊಳ್ಳಬೇಕಾಗಿದೆ, ನಮ್ಮ ಆತ್ಮಶೋಧನೆಯನ್ನು ಮಾಡಿಕೊಳ್ಳಬೇಕಾಗಿದೆ. ಇವತ್ತು ಇರತಕ್ಕಂಥ ಸನ್ನಿವೇಶದಲ್ಲಿ ನಮ್ಮ ಆತ್ಮಶೋಧನೆಯನ್ನು ನಾವೇ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇವತ್ತಿನ ಈ ಬೆಳವಣಿಗೆಯಲ್ಲಿ ಆಗುತ್ತಿದೆ. ಅದಕ್ಕೋಸ್ಕರ ನಾವೆಲ್ಲರೂ ಒಟ್ಟುಗೂಡಿ, ಈ ರಾಷ್ಟ್ರದ ನೈಸರ್ಗಿಕ ಸಂಪನ್ಮೂಲದಿಂದ ಬರುವ ಖನಿಜ ಸಂಪತ್ತನ್ನು ನಾವೆಲ್ಲರೂ ಉಪಯೋಗಿಸಿಕೊಂಡು, ಈ ರಾಜ್ಯದ ಭವಿಷ್ಯತ್ತಿಗೋಸ್ಕರ ಹೋರಾಟ ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕವಾದ ಪ್ರಯತ್ನ ನಡೆಯಬೇಕು ಎನ್ನುವುದು ನನ್ನ ಒತ್ತಾಯ. ಆ ಒತ್ತಾಯಕ್ಕೆ ಇವತ್ತು ತಾವೆಲ್ಲರೂ ಮಣಿಯಬೇಕು. ಮಣಿದು, ಖನಿಜ ಸಂಪತ್ತನ್ನು ಉಪಯೋಗಿಸಿ ಕೊಳ್ಳತಕ್ಕಂಥ ನೀತಿ ಏನಿದೆ, ಅದನ್ನು ಮಾರ್ಪಾಡು ಮಾಡಿ, ಈ ರಾಷ್ಟ್ರದ, ಈ ರಾಜ್ಯದ ಭವಿಷ್ಯತ್ತಿನ ಕಡೆಗೆ ನಾವೆಲ್ಲರೂ ಗಮನವನ್ನು ಹರಿಸಬೇಕಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿದರು. ರಾಜೀನಾಮೆಯನ್ನು ನೀಡಬೇಕಾದಂಥ ಸಂದರ್ಭ ಯಾವುದು? ರಾಜೀನಾಮೆಯನ್ನು ನೀಡಲಿಕ್ಕೆ ಕಾರಣವೇನು? ಇದು ಬಹಳ ಮೂಲಭೂತವಾಗಿರುವ ಪ್ರಶ್ನೆ. ಭ್ರಷ್ಟಾಚಾರದ ನಿರ್ಮೂಲನೆಗೋಸ್ಕರವಾಗಿ ಲೋಕಾಯುಕ್ತ ಸಂಸ್ಥೆಯನ್ನು ಇದೇ ಸದನದಲ್ಲಿ ಹಿಂದಿನ ಮುಖ್ಯಮಂತ್ರಿಗಳಾಂಥ ರಾಮಕೃಷ್ಣ ಹೆಗಡೆಯವರು ಹುಟ್ಟು ಹಾಕಿದರು, ಅದನ್ನು ಅಸ್ತಿತ್ವಕ್ಕೆ ತಂದರು. ಅಂಥ ಒಂದು ಲೋಕಾಯುಕ್ತ ಸಂಸ್ಥೆಯ ಮುಖ್ಯಸ್ಥರು, ತಾವು ಮನನೊಂದು ರಾಜೀನಾಮೆಯನ್ನು ನೀಡುತ್ತಿದ್ದೇನೆ ಎಂದು ಹೇಳಿದರು. ಈ ರಾಜ್ಯದ ಜನತೆಗೆ ಗೊತ್ತಿರುವ ಹಾಗೆ, ಅವರು ರಾಜೀನಾಮೆಯನ್ನು ಕೊಡುವ ಸಂದರ್ಭದಲ್ಲಿ ಮನನೊಂದು ಏನು ಹೇಳಿದರೆಂದರೆ, ಇವತ್ತು ನನಗೆ ಸರ್ಕಾರದಿಂದ ಸಹಕಾರವಿಲ್ಲ, ನಾವು ಮಾಡುವಂಥ ಕೆಲಸದಲ್ಲಿ ಸರ್ಕಾರ ನಮಗೆ ಸಹಕಾರವನ್ನು ಕೊಡುತ್ತಿಲ್ಲ, ನನ್ನ ಕೈಕೆಳಗೆ ಕೆಲಸ ಮಾಡುವ ಅಧಿಕಾರಿಗಳು ಹೋಗಿ ರೈಡ್ ಮಾಡಿದಂಥ ಸಂದರ್ಭದಲ್ಲಿ ಅವರ ಮೇಲೆ ನಡೆಯುವ ಹಲ್ಲೆ, ಅವರಿಗೆ ಬರುವ ಎಲ್ಲ ಕಷ್ಟಸುಖಗಳಲ್ಲಿ ಅವರನ್ನು ಉಳಿಸಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ, ಅದಕ್ಕೋಸ್ಕರ ಮನನೊಂದು ನಾನು ರಾಜೀನಾಮೆಯನ್ನು ನೀಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುವುದರ ಜೊತೆಗೆ ಗಣಿಗಾರಿಕೆಯ ವಿಚಾರದಲ್ಲಿ ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿ, ಅದರಿಂದ ನಾನು ರಾಜೀನಾಮೆಯನ್ನು ಕೊಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿ ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿದರು. ರಾಜ್ಯದ ಭ್ರಷ್ಟಾಚಾರ ನಿರ್ಮೂಲನೆಗಾಗಿ ಉದಯವಾದಂಥ ಒಂದು ಸಂಸ್ಥೆಯ ಮುಖ್ಯಸ್ಥರು ರಾಜೀನಾಮೆಯನ್ನು ಕೊಟ್ಟು, ಸರ್ಕಾರದ

ವಿಫಲತೆಯನ್ನು ಪ್ರಕಟಿಸಿದರು. ಭ್ರಷ್ಟಾಚಾರ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾದ ಸಂದರ್ಭದಲ್ಲಿ ಅವರು 22ನೇ ತಾರೀಖು ರಾಜೀನಾಮೆಯನ್ನು ಕೊಡುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು 25ನೇ ತಾರೀಖಿನಂದು, ಲೋಕಾಯುಕ್ತರು ರಾಜೀನಾಮೆ ಕೊಟ್ಟಿದ್ದಕ್ಕೆ "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನೀಡುತ್ತಾರೆ. ನಾನು ಮತ್ತು ನಮ್ಮ ಸರ್ಕಾರ ಅವರಿಗೆ ಗೌರವಪೂರ್ವಕವಾದ ವಿದಾಯವನ್ನು ಹೇಳಿ ಕಳುಹಿಸಿ ಕೊಡುತ್ತೇವೆ ಎಂದು ಹೇಳುತ್ತಾರೆ. ಅದಾದನಂತರ, ಬೆಂಗಳೂರಿನ ಪತ್ರಿಕೆಗಳ ಒಕ್ಕೂಟ ಸಂವಾದವನ್ನು ನಡೆಸಿದಂಥ ಸಂದರ್ಭದಲ್ಲಿ ಅವರು ಹೇಳುತ್ತಾರೆ, ರಾಜೀನಾಮೆ ಪತ್ರವನ್ನು ವಾಪಸ್ಸು ಪಡೆಯಿರಿ ಎಂದು ಹೇಳಿ ನಾನು ಅವರಿಗೆ ಮುಜುಗರವನ್ನು ಉಂಟು ಮಾಡುವುದಿಲ್ಲ ಎಂದು ಹೇಳುತ್ತಾರೆ. 25ನೇ ತಾರೀಖಿನಂದು, ಎರಡು ವರ್ಷಗಳ ಕಾಲದ ತಮ್ಮ ಸರ್ಕಾರದ ಸಾಧನೆಯನ್ನು ಈ ರಾಜ್ಯದ ಜನತೆಗೆ ತಿಳಿಸಬೇಕು ಎನ್ನುವಂಥ ಸಂದರ್ಭದಲ್ಲಿ, ಲೋಕಾಯುಕ್ತರು ಯಾವುದೋ ವಿಚಾರಕ್ಕೆ ಮಣಿದು, ರಾಜಕೀಯಕ್ಕೆ ಮಣಿದು, ಯಾವುದೇ ಆಸೆ ಆಮಿಷಗಳಿಗೆ ಒಳಗಾಗಿ ರಾಜೀನಾಮೆಯನ್ನು ನೀಡಿದ್ದಾರೆ ಎಂದು ಅವರು ಹೇಳಿರುವುದು ಕರ್ನಾಟಕದ ಎಲ್ಲ ಪತ್ರಿಕೆಗಳಲ್ಲಿ ಪ್ರಚಾರವಾಗುತ್ತದೆ. ಬಿ.ಜೆ.ಪಿ. ಪಕ್ಷದ ರಾಜ್ಯಾಧ್ಯಕ್ಷರಾದ ಮಾನ್ಯ ಈಶ್ವರಪ್ಪನವರು, ಇದು ದುಡುಕಿನ ನಿರ್ಧಾರ ಎಂದು ಹೇಳಿದರು.

ರಾಮಚಂದ್ರಗೌಡರು ಒಂದು ತರಹದ ಹೇಳಿಕೆ ಕೊಡುತ್ತಾರೆ. ಲೋಕಾಯುಕ್ತರು ರಾಜಿನಾಮೆ ಕೊಟ್ಟಿದ್ದು ಸರಿಯಿಲ್ಲ. ನಮ್ಮ ಸಾಧನಾ ಸಮಾವೇಶ ನಡೆಸುವ ಸಂದರ್ಭದಲ್ಲಿ ಅದರ ಕೀರ್ತಿ ನಮಗೆ ಬರಬಾರದು ಎನ್ನುವ ದೃಷ್ಟಿಯಿಂದ ಈ ಆಟವನ್ನು ಮಾಡಿಸಿದ್ದಾರೆ ಎನ್ನುವ ನಿಟ್ಟಿನಲ್ಲಿ ಈ ಪ್ರಸಂಗವನ್ನು ತಂದಿದ್ದಾರೆ ಎನ್ನುವುದೂ ಪ್ರಸ್ತಾಪವಾಗಿದೆ. ಆದಾದ ಮೇಲೆ ಇವತ್ತು ಏನಾಗಿದೆ? ಲೋಕಾಯುಕ್ತರು ರಾಜೀನಾಮೆ ಕೊಟ್ಟ ಮೇಲೆ ಸಂಘಸಂಸ್ಥೆಗಳು, ಕರ್ನಾಟಕ ರಾಜ್ಯದ ಜನ, ವಿರೋಧ ಪಕ್ಷದವರು ಎಲ್ಲರೂ ಸೇರಿ ಒಕ್ಕೊರಲಿನಿಂದ ರಾಜಿನಾಮೆಯನ್ನು ಕೊಡಬಾರದಾಗಿತ್ತು ಎನ್ನುವ ಕೂಗನ್ನು ಕರ್ನಾಟಕ ರಾಜ್ಯದಲ್ಲಿ ಮಾಧ್ಯಮಗಳ ಮುಖಾಂತರ ಬಿತ್ತರಿಸಿದಾಗ ಪುನಃ ನೀವೇ ಹೋಗಿ ನಿಮ್ಮ ಪಕ್ಷದ ಎಲ್ಲ ಸದಸ್ಯರು ಅಲ್ಲಿ ಹೋಗಿ, ಕೊನೆಗೆ ಸ್ವತಃ ಮುಖ್ಯಮಂತ್ರಿಯವರೆ ಅವರ ಬಳಿಗೆ ಹೋಗಿ ಕೊನೆಗೆ ಈ ರಾಷ್ಟ್ರದ ಗೌರವಾನ್ವಿತ ರಾಜಕಾರಣಿಯಾದಂಥ ಲಾಲ್‌ಕೃಷ್ಣ ಅದ್ವಾನಿಯವರಿಂದ ಫೋನ್ ಮಾಡಿಸಿ, ರಾಷ್ಟ್ರೀಯ ಅಧ್ಯಕ್ಷರು ನೀವೆಲ್ಲ ಹೋಗಿ ಅವರ ಮನವೊಲಿಸುತ್ತೀರಿ. ಅವರಿಗೆ ವಿದಾಯವನ್ನು ಹೇಳಿದವರೂ ನೀವೆ. ಪುನಃ ಅವರ ಮನಸ್ಸನ್ನು ಒಲಿಸಿದವರೂ ನೀವೇ ವಿರೋಧ ಪಕ್ಷದವರಾಗಲಿ, ಈ ಕರ್ನಾಟಕ ರಾಜ್ಯದ ಜನರಾಗಲಿ ಅವರು ರಾಜಿನಾಮೆ ಕೊಟ್ಟಿದ್ದನ್ನು ಪುನರ್ ಪರಿಶೀಲನೆ ಮಾಡಬೇಡಿ ಎಂದು ಹೇಳಿದ್ದೇವೆಯೇ? ನೀವು ಅವರನ್ನು

ಕೇಳಬೇಡಿ ಎಂದು ಹೇಳಿದ್ದೇನೆಯೇ ನೀವೇ ಹೇಳುವುದು, ಪುನಃ ನೀವೇ ಹೋಗುವುದು. ಕರ್ನಾಟಕ ರಾಜ್ಯದಲ್ಲಿ ಸರ್ಕಾರವನ್ನು ನಡೆಸುತ್ತಿರತಕ್ಕ ನಿಮ್ಮ ಸರ್ಕಾರಕ್ಕೆ ಜನರು ಏನೆನ್ನಬೇಕು? ಜನ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಿಲ್ಲ. ಆ ನಿರ್ಧಾರನ್ನು ನೀವೇ ಮಾಡಬೇಕಾಗುತ್ತದೆ. ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಾಗ ಬಹಳ ಗಾಂಭೀರ್ಯತಿಯಿಂದ ಇರಬೇಕಾಗುತ್ತದೆ. ವಿದಾಯ ಹೇಳುತ್ತಿದ್ದ ಜನ ಇವತ್ತು ಹೋಗಿ ಇವತ್ತು ರಾಜ್ಯ ನಿಮ್ಮಿಂದ ಅವನತಿಗೆ ಹೋಗುತ್ತಿದೆ, ಲೋಕಾಯುಕ್ತರೆ ವಾಪಸ್ ಬನ್ನಿ ಎಂದು ಕರೆಯುವುದಾದರೆ, ಮಾತಿನ ವ್ಯತ್ಯಾಸ ನೋಡಬೇಕಾಗುತ್ತದೆ. ಇದೇನು ಗೋಲಿಯಾಟವೇ? ಅಥವಾ ಹುಡುಗರೆಲ್ಲಾ ಸೇರಿಕೊಂಡು ಬುಗುರಿಯಾಟ ಆಡುತ್ತಿದ್ದಾರೆಯೇ? ಕರ್ನಾಟಕದ ಜನ ನಿಮ್ಮ ಬಗ್ಗೆ ಏನು ತಿಳಿದುಕೊಳ್ಳಬೇಕೆನ್ನುವುದನ್ನು ನಾನು ಹೇಳುವುದಿಲ್ಲ, ಅದನ್ನು ಕರ್ನಾಟಕ ರಾಜ್ಯದ ಜನತೆಗೆ ಬಿಡೋಣ, ಮಾಧ್ಯಮದ ಜನರಿಗೆ ನೀವು ಯಾವ ರೀತಿ ಹೇಳುತ್ತೀರಿ ಎನ್ನುವುದನ್ನು ಬಿಡೋಣ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗಲೇ ಸದಸ್ಯರಿಂದ ತರಾಟೆ. ನಾವು ಹೊಸದಾಗಿ ಗೆದ್ದು ಬಂದಿದ್ದೇವೆ. ಎಲ್ಲಿಯಾದರೂ ಅಪ್ಪಿ ತಪ್ಪಿ ಪದಗಳ ಪ್ರಯೋಗದಲ್ಲಿ ಸ್ವಲ್ಪ ವ್ಯತ್ಯಾಸವಾದಾಗ ಇನ್ನು ಯಾವ ಗದಾಪ್ರಹಾರವನ್ನು ಅನುಭವಿಸಬೇಕೋ ಗೊತ್ತಾಗುತ್ತಿಲ್ಲ. ಅದಕ್ಕೋಸ್ಕರ ನಾವು ರಾಜಿನಾಮೆ ಕೇಳಬೇಕೋ, ಇಲ್ಲ, ನಿಮ್ಮ ನೈತಿಕ ಹೊಣೆಗಾರಿಕೆ ಏನೆನ್ನುವುದನ್ನು ಕೇಳಬೇಕೋ, ನಿಮ್ಮ ವಿಚಾರಧಾರೆ ಏನೆನ್ನುವುದನ್ನು ಕೇಳಬೇಕೋ ಇದನ್ನು ನಾನು ಕೇಳುವುದಿಲ್ಲ, ಈ ಕರ್ನಾಟಕ ರಾಜ್ಯದ ಜನರಿಗೇ ಬಿಡುತ್ತೇನೆ. ಕರ್ನಾಟಕ ರಾಜ್ಯದ ಜನ ಅದೇನು ತೀರ್ಮಾನ ಮಾಡುತ್ತಾರೋ ಮಾಡಲಿ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಗಣಿಗಾರಿಕೆ ಎನ್ನುವುದು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದ ರೀತಿಯಲ್ಲೇ ಒಂದು ಮಾಫಿಯಾ ಆಗಿದೆ. ಒಂದು ದಂಧೆಯಾಗಿದೆ. ಈ ದಂಧೆ ಎಲ್ಲಿಂದ ಪ್ರಾರಂಭವಾಯಿತು? ಏತಕ್ಕೋಸ್ಕರ ಪ್ರಾರಂಭವಾಯಿತು? ಕಾರಣವೇನು? ಎನ್ನತಕ್ಕಂಥದ್ದು ಬಹಳ ಪ್ರಮುಖವಾಗಿರುವ ವಿಚಾರ. ಹಿಂದೆ ಕಬ್ಬಿಣದ ಅದಿರು ಹೋಗಿ ಹೊಲಗಳಿಗೆ ಬಿದ್ದು ಹೊಲಗಳಲ್ಲಿ ಬೆಳೆ ಬೆಳೆಯುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕೆ ಅದನ್ನು ಯಾರಾದರೂ ಸಾಗಿಸಿಕೊಂಡು ಸಾಕಪ್ಪ ಎನ್ನುವ ಕಾಲವೊಂದಿತ್ತು. ಆದರೆ, ಹೊರದೇಶಗಳಲ್ಲಿ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದಾಗ ಇದಕ್ಕೆ export ಮಾಡಲಿಕ್ಕೆ permission ಕೊಡುತ್ತಾ ಬಂದರು. ಹೊರದೇಶಗಳಲ್ಲಿ ಬೇಡಿಕೆ ಹೆಚ್ಚಾದಂತೆ ಅದನ್ನು ದಂಧೆಯಾಗಿ, ಮಾಫಿಯಾವಾಗಿ ಮಾರ್ಪಾಡು ಮಾಡುವ ಪರಿಸ್ಥಿತಿಗೆ ಇವತ್ತಿನ ಸನ್ನಿವೇಶ ಉದ್ಭವವಾಗಿದೆ. ಆ ಸನ್ನಿವೇಶ ಇವತ್ತು ಉದ್ಭವವಾಗಲಿಕ್ಕೆ ಕಾರಣವಾಗಿದೆ. ಇಂಥ ಸಂದರ್ಭದಲ್ಲಿ 2000ನೇ ಇಸವಿಯಿಂದ ಇಲ್ಲಿಯವರೆಗೆ ನಡೆದ ಗಣಿಗಾರಿಕೆ ವಿಚಾರದಲ್ಲಿ

ಅಕ್ರಮ ಗಣಿಗಾರಿಕೆ ವಿಚಾರದಲ್ಲಿ ಪ್ರತಿಯೊಂದು ವಿಚಾರದಲ್ಲಿ ಸನ್ಮಾನ್ಯ ಕುಮಾರಸ್ವಾಮಿಯವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಯು.ಬಿ. ಭಟ್‌ರವರ ನೇತೃತ್ವದಲ್ಲಿ ಒಂದು ಆಯೋಗ ರಚನೆಯಾಯಿತು. ಅಂದು ಕುಮಾರಸ್ವಾಮಿಯವರ ಮೇಲೆ ಜನಾರ್ದನ ರೆಡ್ಡಿಯವರು 150 ಕೋಟಿ ರೂಪಾಯಿಗಳ ಹಗರಣವನ್ನು ಪ್ರಸ್ತಾಪ ಮಾಡಿದ್ದರು. ಆಗ ಅವರು ಯು.ಬಿ. ಭಟ್‌ರವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚನೆ ಮಾಡಿ ಯಾವುದೇ ವಿಚಾರವಾಗಲಿ ಯಾವುದೇ ವಸ್ತುಸ್ಥಿತಿ ಇರಲಿ, ನೀವು ಆ ಆಯೋಗದ ಮುಂದೆ ಅರ್ಜಿ ಹಾಕಿ ವಿಚಾರಣೆ ಮಾಡಿ ಎರಡು ತಿಂಗಳಲ್ಲಿ ಮೊದಲನೇ ವರದಿಯನ್ನು ಕೊಡಬೇಕೆಂಬ ತಾಕೀತನ್ನು ಆ ಅಯೋಗಕ್ಕೆ ಮಾಡುತ್ತಾರೆ. ಆದರೆ, ಆಯೋಗದ ಮುಂದೆ 6 ತಿಂಗಳು ಕಳೆದರೂ ಒಂದು ಅರ್ಜಿ ಕೂಡ ಬರುವುದಿಲ್ಲ. ಪುನಃ 6 ತಿಂಗಳ ಕಾಲ ಅವಕಾಶ ಕೊಡುತ್ತಾರೆ. ಆ 6 ತಿಂಗಳ ಕಾಲದಲ್ಲಿಯೂ ಸಹ ಯಾವುದೇ ಅರ್ಜಿ ಯು.ಬಿ. ಭಟ್‌ರವರ ಆಯೋಗಕ್ಕೆ ಹೋಗುವುದಿಲ್ಲ. ಅದಾದನಂತರ, ಯು.ಬಿ. ಭಟ್‌ರವರ ಆಯೋಗ ಈ ರಾಜ್ಯದಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ವಸ್ತುಸ್ಥಿತಿಯನ್ನು ಪ್ರದರ್ಶನ ಮಾಡಲಿಕ್ಕೆ ವರದಿಯನ್ನು ಕೊಡಲಿಕ್ಕೆ ವಿಫಲವಾದ ಸಂದರ್ಭದಲ್ಲಿ ಲೋಕಾಯುಕ್ತರು ಅದನ್ನು ವಹಿಸಿಕೊಳ್ಳುತ್ತಾರೆ. ಲೋಕಾಯುಕ್ತರು ವಹಿಸಿಕೊಂಡು 2008ನೇ ಇಸವಿಯಲ್ಲಿ 1800 ಪುಟಗಳ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ, ಈಗಿನ ಸರ್ಕಾರಕ್ಕೆ ಕೊಡುತ್ತಾರೆ. ಸರ್ಕಾರಕ್ಕೆ ಕೊಟ್ಟ ಸಂದರ್ಭದಲ್ಲಿ ಬೆಳಗಾಂ Session ನಲ್ಲಿ ಈ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ಆಗ ಉತ್ತರ ಕರ್ನಾಟಕದ ಹಿತದೃಷ್ಟಿಯಿಂದ, ಅಭಿವೃದ್ಧಿಗೋಸ್ಕರವಾಗಿ ಇಲ್ಲಿ ಅಧಿವೇಶವನ್ನು ಕರೆದಿದ್ದೇವೆ, ನಮ್ಮ ಗಣಿಗಾರಿಕೆ ವಿಚಾರವನ್ನು ಪ್ರಸ್ತಾಪ ಮಾಡಿ ಉತ್ತರ ಕರ್ನಾಟಕದ ಅಭಿವೃದ್ಧಿ ಕಡೆಗೆ ಗಮನ ಹರಿಸುತ್ತಿಲ್ಲವೆನ್ನುವುದು ಆಗುವುದು ಬೇಡವೆನ್ನುವ ದೃಷ್ಟಿಯಿಂದ ಅಂದು ಗಣಿಗಾರಿಕೆಯ ಬಗ್ಗೆ ಚರ್ಚಿಸಲು ಬೆಂಗಳೂರಿನಲ್ಲಿ ವಿಶೇಷ ಅಧಿವೇಶವನ್ನು ಕರೆದು ಪ್ರಸ್ತಾಪಿಸೋಣವೆನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು. ಆದರೆ, ಇವತ್ತಿನವರೆಗೆ ಲೋಕಾಯುಕ್ತರು ಕೊಟ್ಟಂಥ ವರದಿಯನ್ನು ಕರ್ನಾಟಕ ರಾಜ್ಯದ ಜನರ ಮುಂದಿಟ್ಟಿಲ್ಲ. ಅದು ಈ ಸದನದ ಮುಂದೆ ಬರಲಿಲ್ಲ. ವಿರೋಧ ಪಕ್ಷದ ನಾಯಕರು ಇವತ್ತು ಓದುತ್ತಿದ್ದದ್ದನ್ನು ನಾನು ಕೇಳಿದೆ. ನನ್ನ ಕೈಗೆ ಇನ್ನೂ ಅದು ಸಿಕ್ಕಿಲ್ಲ. ಅಂದು ಲೋಕಾಯುಕ್ತರು ಕೊಟ್ಟಿರುವ ವರದಿಯಲ್ಲಿ ಯಾವ ವಿಚಾರ ಅಡಕವಾಗಿದೆ ಎನ್ನುವುದು ಈ ರಾಜ್ಯದ ಜನರಿಗೆ ತಿಳಿದಿಲ್ಲ. ಅಲ್ಲಿಂದ ಮುಂದೆ ಮುಖ್ಯಮಂತ್ರಿಯವರು ಒಂದು ಮಾತು ಹೇಳಿದರು ಈ ರಾಜ್ಯದಲ್ಲಿ ಯಾರ್ಯಾರು ಅಕ್ರಮವಾಗಿ ಗಣಿಗಾರಿಕೆ ಮಾಡಿದ್ದಾರೆ ಅವೆಲ್ಲವನ್ನೂ ಜಪ್ತಿ ಮಾಡಿ ಒಂದೆ ಕಡೆ hard ಮಾಡಿ ಅವರ ಹತ್ತಿರ stock ಮಾಡಿಸುತ್ತೇವೆ, stock ಮಾಡಿಸಿ ಸುಮಾರು 90 ಕೋಟಿ ರೂಪಾಯಿಗಳ

ಗಣಿ ಅದಿರನ್ನು raid ಮಾಡಿಸಿ ಒಂದು ಕಡೆ stock ಮಾಡಿಸಿದ್ದೇನೆ. ಆದರೆ, ಆ 90 ಕೋಟಿ ರೂಪಾಯಿಗಳ ಅದಿರನ್ನು ಹರಾಜು ಮಾಡಿದಾಗ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ನಾನು ಈ ಸದನದ ಮುಖಾಂತರ ಪ್ರಶ್ನೆ ಮಾಡಲಿಕ್ಕೆಬಯಸುತ್ತೇನೆ, ಆ hard ನಲ್ಲಿದ್ದ ಅದಿರನ್ನು ಎಷ್ಟು ಕೋಟಿ ರೂಪಾಯಿಗಳಿಗೆ ಹರಾಜು ಮಾಡಿದ್ದೀರಿ ಸ್ವಾಮಿ? ಈ ರಾಜ್ಯದ ಬೊಕ್ಕಸಕ್ಕೆ ಎಷ್ಟು ಆದಾಯ ಬಂತು ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ಇದರಲ್ಲಿ ಆಗಿದ್ದಿಷ್ಟೇ. ಯಾರೋ ಸಣ್ಣ ಪುಟ್ಟ ಗಣಿಗಾರರು ಅಕ್ರಮವಾಗಿ ಗಣಿಗಾರಿಕೆ ಮಾಡಿಕೊಂಡು ಸಾಮಂತ ರಾಜರಿಗೆ ಕಪ್ಪ ಕಾಣಿಕೆ ಕೊಡುತ್ತಿದ್ದರೋ ಆ ರೀತಿ ಕೆಲವು ಸಾಮಂತ ರಾಜರಿದ್ದಾರೆ. ಅಲ್ಲಿ ಆ ಸಾಮಂತ ರಾಜರಿಗೆ ಕಪ್ಪ ಕಾಣಿಕೆ ಕೊಡುತ್ತಿದ್ದರು. ಮುಖ್ಯಮಂತ್ರಿಯವರು ಮಾಡಿದ ಒಂದು ಅಚಾತುರ್ಯದಿಂದ ಎಲ್ಲ ಕಪ್ಪ ಕಾಣಿಕೆಗಳೂ ಒಬ್ಬರಿಗೇ ಹೋಗುವ ಅವಕಾಶವಾಯಿತು. ಎಲ್ಲಾ ಹೋಗಿ ಸಣ್ಣಪುಟ್ಟ ದುಡಿಯುತ್ತಿದ್ದ ನಾಲ್ಕಾರು ಜನರ ಬಾಯಿಗೆ ಮಣ್ಣು ಬಿತ್ತು. ಇದರಿಂದ ಏನೂ ಆಗಲಿಲ್ಲ. ಪುನಃ ಅದೇ ದಂಧೆ, ವ್ಯವಹಾರ ಮುಂದುವರೆದಿದೆ. ಇಂಥ ಸಂದರ್ಭ ಇವತ್ತು ಆಗಿದೆ. ಲೋಕಾಯುಕ್ತರು ಬಳ್ಳಾರಿ ಮತ್ತು ಇತರೆ ಗಣಿ ಪ್ರದೇಶಗಳಿಗೆ ಹೋದ ಸಂದರ್ಭದಲ್ಲಿ ಅಲ್ಲಿ ನಡೆದಿರುವುದನ್ನು ನಾವು ಮಾಧ್ಯಮಗಳ ಮುಖಾಂತರವೇ ನೋಡಬೇಕು. Electronic ಮಾಧ್ಯಮದಲ್ಲಿ ಮೂಲಕ ನಾವು ತಿಳಿದುಕೊಂಡಿದ್ದೇವೆ. ಕರ್ನಾಟಕದ ಗಡಿಭಾಗವನ್ನು ತೆಗೆದು ಆಂಧ್ರದ ಗಡಿಭಾಗಕ್ಕೆ ಸೇರಿಸಿ ಅಕ್ರಮವಾಗಿ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ದಂಧೆ ನಡೆಯುತ್ತಿದೆ ಎನ್ನುವುದನ್ನು ನಾವು ಹಲವಾರು ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದೇವೆ, ಟಿ.ವಿ. ಮಾಧ್ಯಮದಲ್ಲಿ ನೋಡಿದ್ದೇವೆ. ಆ ಗಡಿಯನ್ನು ಒತ್ತುವರಿ ಮಾಡಿರುವಂಥದ್ದು ನೋಡಿ. ಅಲ್ಲಿ ಒಂದು ದೇವಸ್ಥಾನ ಇರುತ್ತದೆ. ಆ ದೇವಸ್ಥಾನವನ್ನು blast ಮಾಡಿ ಆ ದೇವಸ್ಥಾನದಡಿಯಲ್ಲಿ ಕಬ್ಬಿಣದ ಅದಿರನ್ನು ಮಾರುವುದು ಮತ್ತು ಕಬ್ಬಿಣದ ಅದಿರನ್ನು yard ಮಾಡಿಕೊಳ್ಳುವುದು ಅಂದರೆ ಶೇಖರಣಾ ಕೇಂದ್ರ ಮಾಡಿಕೊಳ್ಳುವುದು. ಅರಣ್ಯ ಪ್ರದೇಶದಿಂದ ಕಬ್ಬಿಣದ ಅದಿರನ್ನು ತುಂಬಿ ಬಂದಾಗ 27ನೇ form ಕೊಡಬೇಕಾಗುತ್ತದೆ. ರಾಜ್ಯದ ಹೆದ್ದಾರಿಯಲ್ಲಿ ಹೋಗಬೇಕಾದರೆ 31ನೇ form ಕೊಡಬೇಕಾಗುತ್ತದೆ. 27 ಇದೆಯೋ, 31 ಇದೆಯೋ, ರಾಜ್ಯದಲ್ಲಿ ಯಾವ form ಇದೆಯೋ, ಇಲ್ಲವೋ ಅವರೇ ಹೇಳಬೇಕು. yard ಗೆ ತಂದು ಹಾಕಿರುತ್ತಾರೆ, ಅದೇ ರೀತಿ ಕರ್ನಾಟಕ ರಾಜ್ಯದಲ್ಲಿದ್ದಂಥ ಗಣಿ ಸಂಪತ್ತನ್ನು, ಕಬ್ಬಿಣದ ಅದಿರನ್ನು ಆಂಧ್ರ border ಗೆ ಹಾಕಿ ಆಂಧ್ರ ಮುಖಾಂತರ ಮತ್ತೆ ಕರ್ನಾಟಕದ port ಗೆ ತಂದು ಹೊರದೇಶಕ್ಕೆ ರವಾನೆ ಮಾಡುವ ವಿಚಾರವನ್ನು ಅನೇಕ ಸಾರಿ ಪತ್ರಿಕೆಗಳಿಂದ, ಮಾಧ್ಯಮಗಳಿಂದ ತಿಳಿದಿದ್ದೇವೆ, ಅಕ್ರಮ ದಂಧೆ ಹೇಗೆ ನಡೆಯುತ್ತಿದೆ ಎನ್ನುವುದನ್ನು ಸವಿಸ್ತಾರವಾಗಿ ಮಾಧ್ಯಮದವರು ಹೇಳಿರುವ ವಿಚಾರ ಮತ್ತು

ಲೋಕಾಯುಕ್ತರು ಈ ಒಂದು ನಿಟ್ಟಿನಲ್ಲಿ ವರದಿ ಕೊಟ್ಟಿದ್ದಾರೆನ್ನುವ ವಿಚಾರವನ್ನು ಸಹ ಅನೇಕ ಸಂದರ್ಭದಲ್ಲಿ ಕೇಳಿದ್ದೇವೆ. ಇವತ್ತು ರಕ್ಷಿತ ಅರಣ್ಯ ಒತ್ತುವರೆಯಾಗಿದೆ. ಆ ರಕ್ಷಿತ ಅರಣ್ಯವನ್ನು ಒತ್ತುವರಿ ಮಾಡುವುದರ ಜೊತೆಗೆ ಮುಖ್ಯಮಂತ್ರಿಯವರೆ ರಕ್ಷಿತ ಅರಣ್ಯವನ್ನು ಗಣಿಗಾರಿಕೆಗೋಸ್ಕರ ಕೊಟ್ಟಿರುವುದನ್ನು, cabinet ನಲ್ಲಿ decision ಆಗಿ ಬಂದಿರುವುದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಈ ಗಣಿಗಾರಿಕೆಗೆ, ಅಕ್ರಮಕ್ಕೆ ಯಾರು ಕಾರಣಕರ್ತರಿದ್ದಾರೆ, ಯಾರ ಹಿನ್ನೆಲೆ ಇದೆ ಎಂದು ನಾವು ನೀವು ಇದರಿಂದ ತಿಳಿದಿಕೊಳ್ಳಬೇಕಾದಂಥ ಪರಿಸ್ಥಿತಿ ಬಂದಿದೆ. ಅದಕ್ಕೋಸ್ಕರ ನಾನು ಇದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಆದಾದ ಮೇಲೆ ಬೇಲೇಕೇರಿ ಕಾರವಾರ ಬಂದರಿನಲ್ಲಿ 8,20,000 ಟನ್ ಕಬ್ಬಿಣದ ಅದಿರು ಅಕ್ರಮವಾಗಿ ದಾಸ್ತಾನು ಆಗಿದೆ ಎಂದು ಲೋಕಾಯುಕ್ತರಿಗೆ ಗೊತ್ತಾಗುತ್ತದೆ. ಲೋಕಾಯುಕ್ತರು ಯು.ವಿ. ಸಿಂಗ್‌ರವರ ನೇತೃತ್ವದಲ್ಲಿ ಹೋಗಿ ಪರಿಶೀಲನೆ ಮಾಡಿ ನಿಜವಾಗಿಯೂ ಅಲ್ಲಿ ಅಕ್ರಮವಾಗಿ ದಾಸ್ತಾನು ಇದೆ, ಅದಕ್ಕೋಸ್ಕರ ಈ ದಾಸ್ತಾನು ಅನ್ನು ಅರಣ್ಯ ಇಲಾಖೆಯವರು ಎಲ್ಲಾ ಒಟ್ಟಿಗೆ ಸೇರಿ ಅಂಕೋಲಾ ನ್ಯಾಯಾಲಯಕ್ಕೆ ಈ ವಿಷಯವನ್ನು ತಿಳಿಸುತ್ತಾರೆ. ಅಲ್ಲಿ ಅಕ್ರಮವಾಗಿರುವ ದಾಸ್ತಾನು ಅನ್ನು port ಅಧಿಕಾರಿಯ ವಶದಲ್ಲಿಡಲು ಅನುಮತಿ ಪಡೆದು ಅದನ್ನು port ಅಧಿಕಾರಿಯ ವಶದಲ್ಲಿ ಇಟ್ಟಿರುತ್ತಾರೆ. ನಾನು ಹಿಂದೆ Public Accounts Committee ಮೂಲಕ ಕಾರವಾರ ಬಂದರಿಗೆ ಹೋದಾಗ ಅಲ್ಲಿ ಅವರು ಬಹಳ ಸ್ವಚ್ಛತೆಯನ್ನು ಕಾಪಾಡಿದ್ದರು. ಅಲ್ಲಿ ಒಂದೇ ಒಂದು ಅಡಿ ಕಬ್ಬಿಣದ ಅದಿರು ಬಿದ್ದಿರಲಿಲ್ಲ. ಅಷ್ಟೊಂದು ಸ್ವಚ್ಛವಾಗಿ ಇಟ್ಟಿದ್ದಾರಲ್ಲಾ ಎಂದು ಅಲ್ಲಿಯ ಜನರನ್ನು ವಿಚಾರಿಸಿದ್ದಕ್ಕೆ, ಅವರು, ಸ್ವಾಮಿ ನೀವು ಬರುತ್ತೀರಿ ಎಂದು ಯಾವುದೇ ಲಾರಿಗಳು ಎರಡು ದಿವಸಗಳಿಂದ ಇಲ್ಲಿಗೆ ಬಂದಿಲ್ಲ, ನಿಮಗೆ ಗೊತ್ತಾಗುತ್ತದೆಂದು ಎಲ್ಲಾ ಸ್ವಚ್ಛ ಮಾಡಿದ್ದೇವೆ, ಇಲ್ಲಿ ನಡೆಯುವುದೆಲ್ಲಾ ದಂಧೆ ಸ್ವಾಮಿ ಎಂದು ಹೇಳಿದರು. ತಾವು ಹೇಳಿದ ಹಾಗೆ, ನಾವು ಕಳ್ಳ ಎನ್ನುವ ಪದವನ್ನು ಬಿಡಬೇಕಾಗುತ್ತದೆ. ದಂಧೆ, ದರೋಡೆ ಎಂದು ಉಪಯೋಗಿಸೋಣ, ಅಲ್ಲಿ ದಂಧೆ ನಡೆಯುತ್ತಿದೆ. ಅದಕ್ಕೋಸ್ಕರ ಬಹಳ ಸ್ವಚ್ಛವಾಗಿ port ಅನ್ನು ಇಟ್ಟಿದ್ದೇವೆಂದು ಹೇಳಿದರು. ಆದಾದ ಮೇಲೆ ನಾನು ಮತ್ತೆ ಗೋವಾಕ್ಕೆ ಪ್ರಯಾಣ ಮಾಡಲಿಲ್ಲ. ನಾನು ಕಾರವಾರದಿಂದ ಹುಬ್ಬಳ್ಳಿಗೆ ಹೋಗಲು train ಗೆ ಬರಲಿಕ್ಕೆ drop ತೆಗೆದುಕೊಂಡೆ. ಆವಾಗ 3000 ಲಾರಿಗಳು ಕಾರವಾರದಿಂದ ಹುಬ್ಬಳ್ಳಿವರೆಗೆ ನಿಂತಿದ್ದವು. ನಾನು ಅಲ್ಲಿ ಇಳಿದು ಇಷ್ಟೊಂದು ಲಾರಿ ಏಕೆ ನಿಂತಿವೆ ಎಂದು ಕೇಳಿದಾಗ, ಎಂಎಲ್‌ಎ ಗಳು ಬರುತ್ತಾರೆ, ಅದಕ್ಕೆ ಎರಡು ದಿವಸಗಳ ವರೆಗೆ ಅಲ್ಲಿಗೆ ತೆಗೆದುಕೊಂಡು ಹೋಗಬೇಡಿ ಎಂದು ನಿಲ್ಲಿಸಿದ್ದಾರೆ, ಅದಕ್ಕೋಸ್ಕರ ಇಲ್ಲಿ ಲಾರಿಗಳು ನಿಂತಿವೆ, ಆ ಎಂಎಲ್‌ಎ ಗಳಿಗೆ ಏನೂ ಕೆಲಸವಿಲ್ಲವೆ, ಅವರು ಹೋದರೋ, ಇಲ್ಲವೋ ಗೊತ್ತಾಗಲಿಲ್ಲವೆಂದು

ಅಲ್ಲಿನ Driver ನನ್ನನ್ನೇ ಕೇಳಿದ. ನಾವು ಅಲ್ಲಿಂದ ಬಂದ ತಕ್ಷಣ ತೆಗೆದುಕೊಂಡು ಹೋಗಿ ಅಕ್ರಮವಾಗಿ ಕಳುಹಿಸುವ ದಂಧೆ ನಡೆಯುತ್ತಿದೆ. 5 ಲಕ್ಷಕ್ಕೂ ಅಧಿಕವಾದ metric tonne ಕಬ್ಬಿಣದ ಅದಿರು ಅಲ್ಲಿ ಬಂದು ಬಿದ್ದಿದೆ ಎಂದರೆ ಅದು ಆಕಾಶದಿಂದ ಉದುರಿತ್ತೇ? Road ಮುಖಾಂತರ ಬರಲಿಲ್ಲವೇ? Road ನಲ್ಲಿ ಬರಬೇಕಾದರೆ ಅದಕ್ಕೆ ಪರವಾನಿಗೆ ಇರಲಿಲ್ಲವೇ? Tonnage ಇಲ್ಲವೇ? ಅಲ್ಲಿ ಎಷ್ಟು check post ಗಳು ಬರುತ್ತಿವೆ? ಅವರೇ ಹೇಳಿದ ರೀತಿಯಲ್ಲಿ ಅಲ್ಲಿ 7 check posts ಬರುತ್ತವೆ. ಅವುಗಳನ್ನು ದಾಟಿ port ಗೆ ಬರಬೇಕಾದರೆ ನೀವೇ ಯೋಚನೆ ಮಾಡಿ. ಅಂಗೈನಲ್ಲಿ ಹುಣ್ಣು ಇಟ್ಟುಕೊಂಡು ಕನ್ನಡಿ ನೋಡಬೇಕೆ?ಈ ರಾಜ್ಯದ ಪ್ರಭಾವಿಗಳ ಹಸ್ತಕ್ಷೇಪವಿಲ್ಲದೆ 7 check posts ಬಚಾಯಿಸಿ ಬುರವುದು ಸಾಧ್ಯವೇ? Revenue ಅಧಿಕಾರಿಗಳು ಬರುತ್ತಾರೆ. Tonnage ಗೋಸ್ಕರ RTO ರವರು 10 ಟನ್ ಹಾಕುತ್ತಾರೆ. 14 ಟನ್‌ಗೆ permit ಇದ್ದರೆ 40 ಟನ್ ಹಾಕಿ ರಸ್ತೆ ಹಾಳು ಮಾಡುತ್ತಾರೆ. ಪ್ರತಿ ಪೊಲೀಸ್ ಠಾಣೆಗೂ ಮಾಮೂಲಿ fix ಆಗಿರುತ್ತದೆ. ಅರಣ್ಯಾಧಿಕಾರಿ, ಪೊಲೀಸ್, RTO ಎಲ್ಲಾ ಅಧಿಕಾರಿಗಳ ಶಾಮೀಲಿನಿಂದ ಅದು port ತಲುಪಬೇಕೇ ಹೊರತು ಹಾಗೆಯೇ ಬರಲಿಕ್ಕೆ ಸಾಧ್ಯವಿಲ್ಲ. ಅದು ಸರ್ಕಾರಕ್ಕೆ ಗೊತ್ತಿರಲಿಲ್ಲವೇ? ಆ ಕಾಲದಲ್ಲಿ ನಡೆದಿರಲಿಲ್ಲವೇ ಎಂದು ಕೇಳುತ್ತಾರೆ. ಆ ಕಾಲದಲಿ ನಡೆದಿತ್ತು, ನಡೆಯುತ್ತಿತ್ತು. ಆದರೆ, ಇಷ್ಟು ನಡೆಯುತ್ತಿದೆ ಎಂದು ಕರ್ನಾಟಕ ರಾಜ್ಯದ ಜನತೆಗೆ ಗೊತ್ತಿರಲಿಲ್ಲ. ಈಗ ನಿಮ್ಮ ಸರ್ಕಾರ ಬಂದ ಮೇಲೆ ಗೊತ್ತಾಗಿದೆ. ಇಷ್ಟೊಂದು ದಂಧೆ, ಮಾಫಿಯಾ ಇಲ್ಲಿ ಬಹಳ ನಡೆಯುತ್ತಿದೆ ಎನ್ನುವುದು ಗೊತ್ತಾಗಿದೆ. ಇದಕ್ಕೆ rate ಬಂದಿದ್ದು ಸಹ ನಿಮ್ಮ ಸರ್ಕಾರ ಬಂದ ಮೇಲೆಯೇ, ಮಹತ್ವ ಬಂದಿದ್ದು ನಿಮ್ಮ ಸರ್ಕಾರ ಬಂದ ಮೇಲೆಯೇ ಆದ್ದರಿಂದಲೇ, ಇದು ಬಹಳ ಗಹನವಾದ ವಿಚಾರವಾಗಿದೆ. ಆದ್ದರಿಂದ, ಎರಡು ವರ್ಷಗಳು ಸತತವಾಗಿ ಚೆಕ್ ಪೋಸ್ಟ್ ದಾಟಿ ರಾಜಾರೋಷವಾಗಿ ಆ ಬಂದರಿಗೆ ನೆಲಬಾಡಿಗೆ ಕೊಟ್ಟಿದ್ದಾರೋ ಇಲ್ಲವೋ, ಒಂದು permit ನಲ್ಲಿ 10 load ಗಳನ್ನು ಸಾಗಿಸುತ್ತಾರೆ. ಅರಣ್ಯಾಧಿಕಾರಿಗಳು ಏನು ಮಾಡುತ್ತಿದ್ದರು? ಹಾಗಾದರೆ, ಮುಖ್ಯಮಂತ್ರಿಯವರೆ, ನೀವೇನು ಸೂಚನೆ ಕೊಟ್ಟಿದ್ದೀರಿ? ಮೂರೂ ಇಲಾಖೆಗಳು ನಿಮ್ಮ ಕೈಯಲಿಯೇ ಇವೆ. ಅರಣ್ಯಾಧಿಕಾರಿಗಳಿಗೆ ಏನು ಸೂಚನೆ ಇತ್ತು? Mines and Geology Department ಅಧಿಕಾರಿಗಳಿಗೆ ಏನು ಸೂಚನೆ ಇತ್ತು? ಯಾವ್ಯಾವ ಅಧಿಕಾರಿಗಳಿಗೆ ಏನೇನು ಸೂಚನೆ ಇತ್ತು? ನಾವು ಯಾರನ್ನು ಪ್ರಶ್ನೆ ಮಾಡಬೇಕು? ರಾಜ್ಯದಲ್ಲಿ ಯಾರನ್ನು ಪ್ರಶ್ನೆ ಮಾಡಬೇಕು ಹೇಳಿ. ನಾವು ಅವರನ್ನೇ ಪ್ರಶ್ನೆ ಮಾಡುತ್ತೇವೆ. permit ಕೊಡಲಿಕ್ಕೆ ಅರಣ್ಯ ಇಲಾಖೆ ನಿಮ್ಮ ಕೈಯಲ್ಲಿಯೇ ಇದೆ. ನಮ್ಮ ಆಡಳಿತದಲ್ಲಿ permit ಅಲ್ಲ. ಹೌದು, ಅವರು ನೀವು ಹೊಡೆಯಿರಿ ಎಂದು permit ಕೊಟ್ಟು

ಹೋಗಿದ್ದಾರೆ. ಆದರೆ, ಅಕ್ರಮವಾಗಿ ಸಾಗಿಸಿ ಎಂದು ಕೊಟ್ಟು ಹೋಗಿಲ್ಲ.

ಸನ್ಮಾನ್ಯ ಆಡಳಿತ ಪಕ್ಷದ ಸದಸ್ಯರಲ್ಲಿ ವಿನಂತಿಸುವುದೇನೆಂದರೆ, ನಾವು ಯಾರ ಮೇಲೂ ಗಂಭೀರವಾದ ಆಪಾದನೆ ಮಾಡುವುದಿಲ್ಲ. ಹಿಂದೆ ನಡೆದ ನಿಜ ಸಂಗತಿಯನ್ನು ಕರ್ನಾಟಕ ರಾಜ್ಯದ ಜನಕ್ಕೆ ಈ ಸದನದ ಮೂಲಕ ತಿಳಿಸಬೇಕಾಗಿರತಕ್ಕಂಥದ್ದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ. ಇದನ್ನು ನೀವು ಪಕ್ಷಾತೀತವಾಗಿ ಇಲ್ಲಿ ಪ್ರಶ್ನೆ ಮಾಡಬೇಕು. ಅದನ್ನು ಬಿಟ್ಟು ಪಕ್ಷದ ದೃಷ್ಟಿಯಿಂದ ಇಲ್ಲಿ ಚರ್ಚೆಯಾಗುವುದು ಬೇಡ. ಇದು ಕರ್ನಾಟಕ ರಾಜ್ಯದ ಜ್ವಲಂತ ಸಮಸ್ಯೆ. ಕರ್ನಾಟಕ ರಾಜ್ಯದ ಆರು ಕೋಟಿ ಜನಗಳ ಸಮಸ್ಯೆ. ಆರು ಕೋಟಿ ಜನರ ಹಕ್ಕು. ಇದು ಅವರ ಸಂಪತ್ತು. ಆ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದಾರೆ. ಇದನ್ನು ತಡೆಗಟ್ಟತಕ್ಕಂಥದ್ದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಿದೆ ಎಂದು ನಾನು ಈ ಮೊದಲೇ ಹೇಳಿದ್ದೇನೆ. ಇದನ್ನು ಪಕ್ಷಾತೀತವಾಗಿ ತೆಗೆದುಕೊಳ್ಳಿ ಪಕ್ಷ ರಾಜಕಾರಣಕ್ಕೆ ಇದನ್ನು ಉಪಯೋಗಿಸಬೇಡಿ, ನಾವು ಯಾರ ಮೇಲಿನ ದ್ವೇಷಕ್ಕೆ ಹೇಳುತ್ತಿಲ್ಲ, ಯಾರ ಮೇಲಿನ ಹೊಟ್ಟೆ ಉರಿಗೆ ಹೇಳುತ್ತಿಲ್ಲ. ನೀವು ಸರ್ಕಾರ ನಡೆಸುತ್ತೀರಿ ಎನ್ನುವ ಬಾದೆಯಿಂದಾಗಲಿ, ಸಂಕಟದಿಂದಾಗಲಿ ನಾನು ಈ ಮಾತನ್ನು ಹೇಳುತ್ತಿಲ್ಲ. ನೀವು ಸರ್ಕಾರ ನಡೆಸಿ, ಈ ರಾಜ್ಯದ ಜನ ನಿಮಗೆ ಅಧಿಕಾರ ಕೊಟ್ಟಿದ್ದಾರೆ ನೀವು ಅಧಿಕಾರ ನಡೆಸಿ. ಆದರೆ, ಅಧಿಕಾರ ನಡೆಸತಕ್ಕಂಥ ಕಾಲದಲ್ಲಿ ಪ್ರಾಮಾಣಿಕತೆ ಎನ್ನುವುದೂ ಒಂದು ಇದೆ. ಆ ಪ್ರಾಮಾಣಿಕತೆಗೆ ಅನುಗುಣವಾಗಿ ಕಾನೂನಿನ ಚೌಕಟ್ಟಿನಡಿಯಲ್ಲಿ ಸಂವಿಧಾನ ಬದ್ಧವಾಗಿ ರಾಜ್ಯದಲ್ಲಿ ಅಧಿಕಾರ ನಡೆಸಬೇಕೆಂದು ಕೇಳುತ್ತೇನೆ. ಇದು ವಿರೋಧ ಪಕ್ಷದವರ ಕರ್ತವ್ಯ. ಕೆಲವೊಂದು ವಿಚಾರಗಳನ್ನು ಕಠೋರವಾಗಿ ಹೇಳಬಹುದು. ನಾವು ವಿರೋಧ ಪಕ್ಷದಲ್ಲಿ ಕುಳಿತಾಗ ಕಠೋರವಾಗಿ ಹೇಳದೇ ನಿಮಗೆ ಮುತ್ತು ಕೊಡುವುದಕ್ಕಾಗುವುದಿಲ್ಲ. ನಾವು ಕಠೋರವಾಗಿ ಹೇಳಬೇಕಾಗುತ್ತದೆ. ಇಲ್ಲಾಂದ್ರೆ ಮಾಧ್ಯಮದವರು ಇಲ್ಲಿಯೇ ಕುಳಿತಿದ್ದಾರೆ. ಇವರೆಲ್ಲಾ ಅವರ ಜೊತೆಗೆ ಶಾಮೀಲಾಗಿದ್ದಾರೆ ಆದ್ದರಿಂದ ಕಠೋರವಾಗಿ ಮಾತನಾಡುತ್ತಿಲ್ಲ ಪದದ ಬಳಕೆ ಕಠೋರವಾಗಿಲ್ಲ ಎನ್ನುವ ಭಾವನೆಯನ್ನು ಮಾಧ್ಯಮದವರು ಕೆತ್ತಿ ಬರೆಯುತ್ತಾರೆ. ನಾನು ಮೊನ್ನೆ ಒಂದು ಪುಸ್ತಕವನ್ನು ರೆಫರ್ ಮಾಡುತ್ತಾ ನೋಡಿದೆ.

ಛೇರ್ಮನ್: ಗೌಡ್ರೆ, ತಾವು ಈಗಾಗಲೇ 40 ನಿಮಿಷ ಮಾತನಾಡಿದಿರಿ. ಬೇಗ ಮುಗಿಸಿ

ಶ್ರೀ ಕೆ. ಎಂ. ಶಿವಲಿಂಗೇಗೌಡ: ಎರಡು ಗಂಟೆ ಬೇಕೆಂದು ನಾನು ಮಾನ್ಯ ಅಧ್ಯಕ್ಷರ ಹತ್ತಿರ ಹೋಗಿ ಸಮಯವನ್ನು ಕೇಳಿ ಪಡೆದಿದ್ದೇನೆ, ಬಹುಶಃ ತಮಗೆ ಈ ವಿಚಾರ ಗೊತ್ತಿಲ್ಲ. ಬೇಕಾದರೆ ತಾವು ನಮ್ಮ ಅಧ್ಯಕ್ಷರನ್ನು ಕೇಳಿ.

ಛೇರ್ಮನ್: ವಿಷಯಕ್ಕೆ ಬನ್ನಿ,

ಶ್ರೀ ಕೆ. ಎಂ. ಶಿವಲಿಂಗೇಗೌಡ: ವಿಷಯ ಬಿಟ್ಟು ನಾನೂ ಎಲ್ಲಿಯೂ ಹೋಗುವುದಿಲ್ಲ. ನಾನು ಯಾವುದೇ ಸಂದರ್ಭದಲ್ಲೂ ವಿಷಯ ಬಿಟ್ಟು ಹೋಗುವುದಿಲ್ಲ. ಒಂದು ಸಾರಿ ನಿಜಲಿಂಗಪ್ಪನವರು ಆ ಬಾಗಿಲಿನಿಂದ ಬರುತ್ತಿರುತ್ತಾರೆ. ಗೋಪಾಲಗೌಡರವರು ಈ ಕಡೆ ಕುಳಿತಿರುತ್ತಾರೆ. ಬರಬೇಕು ಬರಬೇಕು ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ಬಾಗೋಣವಾಗಬೇಕು. ಜನ ನಿಮ್ಮನ್ನು ಸಿಗಿದು ತೋರಣ ಕಟ್ಟುವುದಕ್ಕೆ ಹಳ್ಳಿಯಲ್ಲಿ ಕಾದುಕೊಂಡು ಕುಳಿತಿದ್ದಾರೆ ಬನ್ನಿ ನಿಜಲಿಂಗಪ್ಪನವರೆ ಕುಳಿತುಕೊಳ್ಳಿ ಕುಳಿತುಕೊಳ್ಳಿ ಎಂದು ಕರೆಯುತ್ತಾರೆ. ವಿರೋಧ ಪಕ್ಷದಲ್ಲಿದ್ದಾಗ ಗಾಂಭೀರತೆಗೆ ಅನುಗುಣವಾಗಿ ಮಾತನಾಡತಕ್ಕಂಥದ್ದು ವಿರೋಧ ಪಕ್ಷದ ಕರ್ತವ್ಯ. ವಿರೋಧ ಪಕ್ಷದಲ್ಲಿ ಕುಳಿತಾಗ ಯಾರ ಮೇಲೂ ನಾನು ವೈಯುಕ್ತಿಕವಾಗಿ ನಿಂದನೆಯ ಮಾಡುವುದಿಲ್ಲ. ಬಾಯಿಗೆ ಬಂದ ಹಾಗೆಯೂ ಮಾತನಾಡುವುದಿಲ್ಲ. ಬಾಯಿಗೆ ಬಂದ ಹಾಗೆ ಮಾಡನಾಡುವ ಅವಶ್ಯಕತೆಯೂ ಇಲ್ಲ. ಆವತ್ತಿನ ಕಾಲದ ವಿಷಯದಲ್ಲಿ ಗಾಂಭೀರತೆ ಇತ್ತೋ ಏನೋ ಅದಕ್ಕಾಗಿ ಅವರು ಸಿಗದು ತೋರಣಕ್ಕೆ ಹಾಕಬೇಕೆನ್ನುವ ಶಬ್ದಗಳನ್ನು ಪ್ರಸ್ತಾಪಿಸಿದ್ದಾರೆ. ಅದು ತಪ್ಪಲ್ಲ. ಜನರ ಕಷ್ಟವನ್ನು ನಿವಾರಣೆ ಮಾಡುವ ಸಂದರ್ಭದಲ್ಲಿ ಹೀಗೆಂದು ಜನ ಮಾತನಾಡಿಕೊಳ್ಳುತ್ತಾರೆಂದು ಹೇಳಿದ್ದರು. ಅದು ತಪ್ಪು ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಆ ರೀತಿಯಾಗಿ ಇವತ್ತು ಈ ಸಂದರ್ಭದಲ್ಲಿ ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ನೀವು ಆಡಳಿತ ಪಕ್ಷದಲ್ಲಿ ಇದ್ದೇವೆಂದು ಮಾತ್ರಕ್ಕೆ ಎಲ್ಲವನ್ನೂ ವಿರೋಧ ಮಾಡತಕ್ಕಂತದ್ದಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಲ್ಲಿ ಇವತ್ತು ಐದು ಲಕ್ಷ ಟನ್ ಬಂದು ಬೀಳಬೇಕಾದರೆ ಯಾವ್ಯವ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎನ್ನುವುದನ್ನು ನೀವು ಆಲೋಚಿಸಿ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದಾದ ನಂತರ ಪೋರ್ಟ್ ಅಧಿಕಾರಿಗೆ ವಹಿಸುತ್ತಾರೆ. ಇವರು ಅವರಿಗೆ ವಹಿಸಿದ ಮೇಲೆ ಆ ಅದಿರು ನಾಪತ್ತೆಯಾಗುತ್ತದೆ. ಅದಿರು ನಾಪತ್ತೆಯಾಗಿ ಹೋದ ಮೇಲೆ 2ನೇ ಜೂನ್‌ನಲ್ಲಿ "ಕರಾವಳಿ ಮುಂಜಾವು" ಎನ್ನುವ ಪತ್ರಿಕೆಯ ಮುಖಪುಟದಲ್ಲಿ ನ್ಯಾಯಾಲಯಕ್ಕೆ ಗೊತ್ತುಪಡಿಸಿ ಸೀಜ್ ಮಾಡಿದ ಅದಿರು ಬಂದಿರಿನಲ್ಲಿ ಅಕ್ರಮವಾಗಿ ದಾಸ್ತಾನಿಟ್ಟಿದ್ದ ಅದಿರು ರಾತ್ರೋರಾತ್ರಿ ಕಾಣೆಯಾಗಿ ಅಕ್ರಮವಾಗಿ ಸಾಗಾಣಿಕೆಯಾಗಿದೆ ಎಂದು ಪ್ರಕಟವಾಗುತ್ತೆ. ಇದಾದ ನಂತರ ಅಲ್ಲಿಗೆ ಅಧಿಕಾರಿಗಳು ಹೋಗಿ ನೋಡುತ್ತಾರೆ. ಗೋಕುಲ್ ಎನ್ನುವ ಒಬ್ಬ ದಕ್ಷ ಅಧಿಕಾರಿ ತನಿಖೆ ಮಾಡಲು ಅಲ್ಲಿಗೆ ಹೋಗುತ್ತಾನೆ. ಅಲ್ಲಿ ನಿಜವಾಗಿ ಕಬ್ಬಿಣದ ಅದಿರು ನಾಪತ್ತೆಯಾಗಿದೆ. ಈ ಸಂದರ್ಭದಲ್ಲಿ ಏನು ಮಾಡಬೇಕೆಂದು ತೋಚದೆ ಪುನಃ ನ್ಯಾಯಾಲಯಕ್ಕೆ ಹೋಗಿ ಕೇಳುತ್ತಾರೆ, ಅವತ್ತೇನು

ನಿಮ್ಮ ನ್ಯಾಯಾಲಯಕ್ಕೆ ವರದಿ ಕೊಟ್ಟಿತ್ತೊ ಆ ಅದಿರು ಅಲ್ಲಿ ಇಲ್ಲ ಸ್ವಾಮಿ, ಕಾಣೆಯಾಗಿದೆ, ಯಾರು ತೆಗೆದುಕೊಂಡು ಹೋಗಿದ್ದಾರೆ ಗೊತ್ತಿಲ್ಲ, ಏನು ಮಾಡಬೇಕೆಂದು ಕೇಳುತ್ತಾರೆ. ಈ ವಿಚಾರ ಹೇಳಿ ತನಿಖೆ ಮುಂದುವರಿಸಲಿಕ್ಕೆ ನನಗೆ ಅನುಮತಿ ನೀಡಬೇಕೆಂದು ಕೇಳುತ್ತಾರೆ. ನಂತರ ಅಲ್ಲಿಗೆ ಬಂದು ಪೋರ್ಟಿನ ಅಧಿಕಾರಿಯನ್ನು ಕೇಳುತ್ತಾರೆ. ಪೋರ್ಟಿನ ಅಧಿಕಾರಿಯನ್ನು ಕೇಳಿದಾಗ ಆ ಅಧಿಕಾರಿ ಹೇಳುತ್ತಾನೆ, ಇಲ್ಲಿ ಇದೆ ತರಹ ಎಷ್ಟೋ ಲಕ್ಷಾಂತರ ಟನ್ ಬರುತ್ತದೆ ಲಕ್ಷಾಂತರ ಟನ್ ಹೋಗುತ್ತದೆ ಯಾವ ಲೆಕ್ಕವೂ ಇಲ್ಲ ಯಾವ ಲೆಕ್ಕಪತ್ರವೂ ಇಲ್ಲ, ಅವ್ವನೂ ಇಲ್ಲ ಅಪ್ಪನೂ ಇಲ್ಲ, ಇದಕ್ಕೆ ಯಾರೂ ಇಲ್ಲ, ಇದು ಹೀಗೆ ಬರುತ್ತಿರುತ್ತದೆ ಇದು ಹೀಗೆ ಸಾರಾಗವಾಗಿ ನಡೆಯುತ್ತಿರತಕ್ಕಂಥ ದಂಧೆ, ಇದನ್ನು ಪ್ರಶ್ನೆ ಮಾಡಿದರೆ ನಾನು ಏನು ಹೇಳಲಿ ಎನ್ನುವ ವಿಚಾರವನ್ನು ಆ ಪೋರ್ಟಿನ ಅಧಿಕಾರಿ ಹೇಳುತ್ತಾನೆ. ಪುನಃ 4 ಷಿಪ್ಪಿಂಗ್ ಕಂಪನಿಯ ಮೇಲೆ ಅದರ ಹಿಂದೆ ಇರುವಂಥ 11 ಜನಗಳ ಮೇಲೆ ಮೊಖದ್ದಮೆ ದಾಖಲು ಮಾಡಲಿಕ್ಕೆ ಎಫ್.ಐ.ಆರ್. ಅನ್ನು ಹರಿಯಲಿಕ್ಕೆ ದೂರನ್ನು ಕೊಡಲಿಕ್ಕೆ ಹೋದರೆ, ಎಂಥ ಭಯದ ವಾತಾವರಣ ಇದೆ ಎಂದರೆ, ಸಿಕ್ಕಂಥ ಸರಕಾರದ ಕಬ್ಬಿಣದ ಅದಿರಿನ ಬಗ್ಗೆ ಕೇಸ್‌ನ್ನು ದಾಖಲಿಸಬೇಕಾದರೆ ಎಸ್.ಐ. ಒಪ್ಪುವುದಿಲ್ಲ. ಎಸ್.ಪಿ.ಯವರು ನನಗೆ ಮೂರುಗಂಟೆಗಳ ಕಾಲಾವಕಾಶ ಕೊಡಿ ಎಂದು ಕೇಳುತ್ತಾರೆ. ನಂತರ ಈ ದೂರು ಐ.ಜಿ.ಪಿ. ಯವರೆವಿಗೂ ಬರುತ್ತದೆ. ನೀವು ಇದನ್ನು ಆಲೋಚನೆ ಮಾಡಿ. ಯಾವ ತರಹದ ಭೀತಿಯ ವಾತಾವರಣ, ಯಾವ ತರಹದ ಕಪಿಮುಷ್ಟಿಯ ದಂಧೆ ಇಲ್ಲಿ ನಡೆಯುತ್ತಿದೆ. ಎಂಥ ಪ್ರಭಾವಿಗಳು ಇದರ ಹಿನ್ನೆಲೆಯಲ್ಲಿ ಇರಬಹುದು ಎನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಹಗಲು ದರೋಡೆ ಮಾಡಿ ರಾಜ್ಯದ ಸಂಪತ್ತನು ಅಕ್ರಮವಾಗಿ ತಂದಿಟ್ಟಂಥ ಸಂಪತ್ತನ್ನು ರಾತ್ರೋರಾತ್ರಿ ಹೊರದೇಶಕ್ಕೆ ಕಳುಹಿಸಿದ್ದಾರೆ ಎನ್ನುವ ವಿಚಾರಕ್ಕೆ ಪೊಲೀಸ್‌ನವರು ದೂರು ತೆಗೆದುಕೊಂಡು ಎಫ್.ಐ.ಆರ್. ಹಾಕಲಿಕ್ಕೆ ಹಿಂದೆ ಮುಂದೆ ನೋಡುತ್ತಾರೆ ಎನ್ನುವುದಾದರೆ ಈ ರಾಜ್ಯ ಇನ್ನೆಂಥ ಪರಿಸ್ಥಿತಿಗೆ ಇನ್ನೆಂಥ ಗಂಢಾಂತರಕ್ಕೆ ಬಂದಿದೆ ಎನ್ನುವುದನ್ನು ನಾವು ನೀವು ಇವತ್ತು ಆಲೋಚನೆ ಮಾಡಬೇಕಾಗಿದೆ. ಪೋರ್ಟಿನ ಅಧಿಕಾರಿಯ ಮೇಲೆ ಎಫ್.ಐ.ಆರ್. ಆಗಿ ಇಲ್ಲಿಗೆ ಒಂದು ಅಧ್ಯಾಯ ಮುಗಿಯುತ್ತದೆ. ಇದಾದ ನಂತರ ಕರಾವಳಿ ಪತ್ರಿಕೆಯಲ್ಲಿ ಬಂದ ಮೇಲೆ ಬಂದರು ಸಚಿವರು ಅಂಕೋಲಕ್ಕೆ ಹೋಗುತ್ತಾರೆ. ಅಲ್ಲಿ ಸಭೆ ಮಾಡುತ್ತಾರೆ. ಗೋಕುಲ್ ಎನ್ನುವ ಒಬ್ಬ ಅಧಿಕಾರಿಯನ್ನು ಕರೆಸುವ ಪ್ರಯತ್ನ ಮಾಡುತ್ತಾರೆ. ಮಾನ್ಯ ಬಂದರು ಸಚಿವರು ಇಲ್ಲಿ ಇದ್ದರೆ ನಾನು ಅವರನ್ನು ಕೇಳಲಿಕ್ಕೆ ಬಯಸುತ್ತೇನೆ. ನಿಮ್ಮದು ಚಿಕ್ಕ ಖಾತೆ, ಸಾಲದ್ದಕ್ಕೆ ಮಂಗಳೂರು–ಕಾರವಾರ ಒಂದೇ. ನೀವು ಬಂದರು ಸಚಿವರಾಗಿ ಬಂದರಿನಲ್ಲಿ ಸುಮಾರು 4–5 ತಿಂಗಳಿನಿಂದ ಅಕ್ರಮವಾಗಿ ದಾಸ್ತಾನು ಇದೆ ಎನ್ನುವುದು ನಿಮ್ಮ ಗಮನಕ್ಕೆ ಬರಲಿಲ್ಲವೆ? ಹಾಗಾದರೆ

ಮಂತ್ರಿಗಳ ಕೆಲಸ ಏನು? ಎಲ್ಲಿ ಅಕ್ರಮವಾಗಿ ನಡೆಯುತ್ತಿದೆ, ರಾಜ್ಯಕ್ಕೆ ಎಲ್ಲಿ ಹಣ ಸೋರಿಕೆಯಾಗುತ್ತದೆ, ಎಲ್ಲಿ ಅಕ್ರಮ ದಂಧೆ ನಡೆಯುತ್ತದೆ, ನಿಜವಾಗಲೂ ಅದನ್ನು ಯೋಚಿಸುವುದು ಮಂತ್ರಿಗಳ ಕರ್ತವ್ಯ ಅಲ್ಲವೆ?

ಈ ಮಾಹಿತಿ ಪತ್ರಿಕೆಯಲ್ಲಿ ವರದಿಯಾದ ನಂತರ ಹೋಟಲ್‌ನಲ್ಲಿ ಒಂದು ಸಭೆ ಮಾಡಿ ಈ ಸಭೆಗೆ ಗೋಕುಲ್ ಎಂಬ ಅಧಿಕಾರಿ ಬಂದಿಲ್ಲ. ಆದ್ದರಿಂದ, ದಯಮಾಡಿ ಅವರನ್ನು ಸಸ್ಪೆಂಡ್ ಮಾಡಿ ಎಂದು ಮಾನ್ಯ ಕೃಷ್ಣ ಪಾಲೇಮಾರ್ ರವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುತ್ತಾರೆ. ಆ ಸಭೆಯಲ್ಲಿ ಪಾಲ್ಗೊಂಡಿದ್ದವರು ಯಾರು? FIR ನಲ್ಲಿ ಯಾರು ಆಪಾದಿತರೆಂದು ಮಾಡಲು ಹೊರಟಿರುವ ನಾಲ್ಕು ಜನ ಶಿಪ್ಪಿಂಗ್ ಕಂಪನಿಯವರು ಮತ್ತು ಇವರ ಜೊತೆಗೆ ಇತರೆ 11 ಜನ ಕಂಪನಿಯ ಮಾಲೀಕರ ಜೊತೆಯಲ್ಲಿ ಇವರು ಸಭೆಯನ್ನು ಮಾಡಿ ಗೋಕುಲ್ ಎಂಬ ಅಧಿಕಾರಿಯನ್ನು ಕರೆಸಿ FIR ಅನ್ನು ಪೋರ್ಟ್ ಅಧಿಕಾರಿಯ ಮೇಲೆ ಮಾತ್ರ ಸೀಮಿತಗೊಳಿಸಿ ಬೇರೆ ಯಾವುದೇ ಕಾರಣಕ್ಕೂ ಕೂಡ ಈ 11 ಜನ ಕಂಪನಿಯ ಮಾಲೀಕರ ಮೇಲೆ ಮತ್ತು ನಾಲ್ಕು ಜನ ಶಿಪ್ಪಿಂಗ್ ಕಂಪನಿಯವರ ಮೇಲೆ FIR ಅನ್ನು ಹಾಕಬೇಡಿ ಎಂದು ತಾಕೀತು ಮಾಡುವುದಕ್ಕೋಸ್ಕರ ನೀವು ಪ್ರಯತ್ನ ಮಾಡಿದ್ದೀರಿ. ಇದು ನನ್ನ ವರದಿ ಅಥವಾ ನನ್ನ ಮಾತಲ್ಲ. ಈ ವಿಚಾರವನ್ನು ಅಲ್ಲಿನ ಪತ್ರಿಕೆಯವರು ಬರೆದಿದ್ದಾರೆ. ಈ ರೀತಿಯಾಗಿ ಆ ಸಭೆಯಲ್ಲಿ ನಡೆಯುತ್ತಿತ್ತೆಂದು ಗೋಕುಲ್ ಎಂಬ ಅಧಿಕಾರಿ ಆ ಸ್ಥಳಕ್ಕೆ ಹೋಗಿಲ್ಲ. ಅಧಿಕಾರಿ ಆ ಸ್ಥಳಕ್ಕೆ ಹೋಗದೆ ಇದ್ದ ಕಾರಣಕ್ಕೆ ನಾನು ಕರೆದಂಥ ಸಭೆಗೆ ಗೋಕುಲ್ ಎಂಬ ಅಧಿಕಾರಿ ಬಂದಿಲ್ಲ. ಆದ್ದರಿಂದ, ಆತನನ್ನು ಅಮಾನತ್ತಿನಲ್ಲಿಡಿ ಎಂಬ ಪತ್ರವನ್ನು ಇವರು ಬರೆದಿದ್ದಾರೆ. ಈ ವಿಷಯದಿಂದ ಲೋಕಾಯುಕ್ತರು ಮನನೊಂದು ನನ್ನ ಕೈ ಕೆಳಗಡೆ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ನಾನು ರಕ್ಷಣೆಯನ್ನು ಕೊಡದಿದ್ದರೆ ಅಥವಾ ಇವರನ್ನು ಗಂಡಾಂತರಕ್ಕೆ ಸಿಕ್ಕಿಸಿದರೆ ನನಗೆ ಪಾಪ ಬರುವುದಿಲ್ಲವೇ ಎನ್ನತಕ್ಕಂಥ ವಿಚಾರವನ್ನು ಅರಿತ ಲೋಕಾಯುಕ್ತರು ಇಲ್ಲಿ ಸಂಪೂರ್ಣವಾದಂಥ ಸ್ವಾತಂತ್ರ್ಯ ಇಲ್ಲ ಮತ್ತು ಸರ್ಕಾರದ ಮತ್ತು ಮಾನ್ಯ ಮುಖ್ಯಮಂತ್ರಿಗಳ ಸಹಕಾರ ಇಲ್ಲದೇ ಇರುವುದಕ್ಕೋಸ್ಕರ ನಾನು ರಾಜೀನಾಮೆಯನ್ನು ಕೊಡುತ್ತಿದ್ದೇನೆಂಬ ಮಾತನ್ನು ಹೇಳಿ ಲೋಕಾಯುಕ್ತರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಏನು ನಡೆದಿದೆ ಎಂಬುದನ್ನು ಈಗಾಗಲೇ ಹೇಳಿದ್ದೇವೆ. ಅಲ್ಲಿ ನೆಲದ ಬಾಡಿಗೆಯನ್ನು ತೆಗೆದುಕೊಂಡಿದ್ದೀರಾ ಎಂದು ಇವತ್ತು ಮಾನ್ಯ ಬಂದರು ಮಂತ್ರಿಗಳಲ್ಲಿ ರಾಜಾರೋಷವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಅಕ್ರಮವಾಗಿ ಇಟ್ಟಿದ್ದು ಯಾರದು? 11 ಜನರು ಯಾರೆಂದು ಕಂಡು ಹಿಡಿಯುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೆ? ಇವತ್ತಿನದಿವಸ ಮಾನ್ಯ ಮುಖ್ಯಮಂತ್ರಿಯವರ ಕೈಕೆಳಗೆ Intelligence Department ಇದೆ. ಈ

ರಾಜ್ಯದಲ್ಲಿ ಯಾವುದೇ ಒಂದು ಅಕ್ರಮ ದಂಧೆ ನಡೆದರೆ ಅಥವಾ ಒಂದು ಸಣ್ಣ ಗಲಾಟೆ ನಡೆದರೂ ಕೂಡ Intelligence Department ನಿಂದ ಮಾನ್ಯ ಮುಖ್ಯ ಮಂತ್ರಿಯವರಿಗೆ ವರದಿ ಬರುತ್ತದೆ. ಅಲ್ಲಿ 5 ಲಕ್ಷ ಟನ್‌ನಷ್ಟು ಅದಿರನ್ನು ಅಕ್ರಮವಾಗಿ ಇಟ್ಟಿರತಕ್ಕಂಥದ್ದನ್ನು ಯಾರಿಗೂ ಗೊತ್ತಿಲ್ಲದೆ ರಾತ್ರೋರಾತ್ರಿ ದರೋಡೆ ಮಾಡಿ ಕಳುಹಿಸಿರತಕ್ಕಂಥದ್ದು ಮತ್ತು ಅವರು ಕೋರ್ಟ್‌ನಲ್ಲಿ ಹೋಗಿ ಇದು ನಮ್ಮದೆ ಮಾಲು ಎಂದು ದಾವೆಯನ್ನು ಹೂಡಿದ್ದಾರೆ. ಇದು ನೈಸರ್ಗಿಕ ಸಂಪತ್ತು ಒಂದು ವೇಳೆ ಇದು ಹಾಳಾದರೆ ಅದು ನಿಸರ್ಗಕ್ಕೆ ಹೋಗಲಿ, ಇದಕ್ಕೆ ನಾವು ಸ್ಟೇ ಕೊಡುವುದಿಲ್ಲವೆಂಬ ಮಾತನ್ನು ಹೇಳಿ ತಿರಸ್ಕಾರ ಮಾಡಿದ್ದಾರೆ. ಕೋರ್ಟ್‌ನಲ್ಲಿ ಆ ದಾವೆ ಹೂಡಿದವರು ಯಾರು? ಅಂದರೆ, ಆ ಶಿಪ್ಪಿಂಗ್ ಕಂಪನಿಯವರು ಯಾರು? ಮತ್ತೆ 11 ಜನರ‍್ಯಾರು? ಅವರ ಪ್ರಭಾವ ಏನು? ಈ ವಿಷಯಗಳೆಲ್ಲಾ ಈ ರಾಜ್ಯದ ಜನತೆ ಮತ್ತು ಈ ಸದನಕ್ಕೆ ಗೊತ್ತಾಗಬಾರದೆ? ಏತಕ್ಕೋಸ್ಕರ ಅವರನ್ನು ಮುಚ್ಚಿಡುತ್ತಿದ್ದೀರಿ ಹೇಳಿ? ಅವರ‍್ಯಾರು, ಅವರ ಪ್ರಭಾವ ಮತ್ತು ಅವರ ಹಿನ್ನೆಲೆ ಏನು? ಅವರ ಹಿಂದೆ ಯಾರು ಇದ್ದಾರೆ? ಏತಕ್ಕೋಸ್ಕರ ಅವರನ್ನು ಮುಚ್ಚಿಡುತ್ತಿದ್ದೀರಿ? ಈ ವಿಷಯವನ್ನು ಬಹಿರಂಗಪಡಿಸಿ ಸಂಬಂಧಪಟ್ಟವರನ್ನು ಹಿಡಿದುಕೊಂಡು ಬಂದು ನೇಣು ಹಾಕಿ ಎಂದು ಮಾನ್ಯ ಸಿದ್ದರಾಮಯ್ಯರವರು ಹೇಳಿದರು. ಅವರು ನಿಮ್ಮ ಹತ್ತಿರ ಇದ್ದಾರೆಂದು ನಾವು ಹೇಳುವುದಿಲ್ಲ. ಈ 11 ಜನ ದೇಶದ್ರೋಹಿಗಳು ಈ ರಾಜ್ಯದ ಖನಿಜ ಸಂಪತ್ತನ್ನು ಅಕ್ರಮವಾಗಿ ಸಾಗಾಟ ಮಾಡಿ ದೇಶದ್ರೋಹದ ಕೆಲಸ ಮಾಡಿದ್ದಾರೆ. ಈ ದೇಶದ್ರೋಹ ಕೆಲಸಕ್ಕೆ ಹಿನ್ನಲೆ ಏನು? ಇದರ ಹಿಂದೆ ಯಾರು ಇದ್ದಾರೆಂಬುದರ ಬಗ್ಗೆ ಪ್ರಾಮಾಣಿಕವಾಗಿ ಈ ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ಈ ವಿಷಯದ ಬಗ್ಗೆ ರಾಜ್ಯದ ಜನತೆಗೆ ಗೊತ್ತು ಮಾಡತಕ್ಕಂಥದ್ದು ನಮ್ಮ ಕರ್ತವ್ಯ ಅಲ್ವಾ? ಇಲ್ಲಿ ವಿರೋಧಪಕ್ಷ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ನಮ್ಮನ್ನು ಕಳುಹಿಸಿದ್ದಾರೆ. ಶ್ರೀಮಾನ್ ಯಡಿಯೂರಪ್ಪನವರು ಬಹಳ ವರ್ಷಗಳ ಕಾಲ ವಿರೋಧಪಕ್ಷದಲ್ಲಿದ್ದು ಕೆಲಸ ಮಾಡಿ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿ ಎಳೆಎಳೆಯಾಗಿ ಈ ರಾಜ್ಯದ ಜನತೆಗೆ ತಿಳಿಸಿದ್ದಾರೆ. ಇವತ್ತಿನ ದಿವಸ ಅದೇ ಕೆಲಸವನ್ನು ನಾವೂ ಕೂಡ ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ಈ ರಾಜ್ಯದಲ್ಲಿ ನಡೆಯುತ್ತಿರುವ ಗಣಿ ಮಾಫಿಯಾ ದಂಧೆಯನ್ನು ಈ ರಾಜ್ಯದ ಜನತೆಗೆ ತಿಳಿಸಬೇಕೆಂದು ಮತ್ತು ಈ ರಾಜ್ಯದ ಜನತೆಗೆ ಬಂದಿರುವಂಥ ಕಷ್ಟವನ್ನು ನಿವಾರಣೆ ಮಾಡಿ ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಮಾಡುವುದಕ್ಕೆ ಮತ್ತು ಆರ್ಥಿಕ ಸಂಕಷ್ಟದಿಂದ ನಿವಾರಣೆ ಮಾಡುವುದಕ್ಕೋಸ್ಕರ ಪ್ರಾಮಾಣಿಕ ಪ್ರಯತ್ನ ನಡೆಯಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ. ಇದರಲ್ಲಿ ಯಾವುದೇ ದ್ವೇಷ, ಅಸೂಯೆ, ರಾಜಕಾರಣ ಇಲ್ಲ. ಈ ಸಂದರ್ಭದಲ್ಲಿ ಸರ್ಕಾರವನ್ನು ಮತ್ತು ಮಾನ್ಯ ಮುಖ್ಯಮಂತ್ರಿಯವರನ್ನು

ಪ್ರಶ್ನೆ ಮಾಡದೆ ನಮ್ಮ ಸದಸ್ಯರನ್ನೇ ನಾವು ಪ್ರಶ್ನೆ ಮಾಡುವುದಕ್ಕೆ ಆಗುತ್ತದೆಯೇ? ನಾವು ಯಾರನ್ನು ಪ್ರಶ್ನೆ ಮಾಡಬೇಕು? ಈ ರೀತಿಯಾದ ಒಂದು ಪರಿಸ್ಥಿತಿ ಇವತ್ತಿನ ದಿವಸ ಅಲ್ಲಿ ನಡೆಯುತ್ತಿದೆ. ಅಕ್ರಮವಾಗಿ ಯಾರು ಕಳ್ಳ ಸಾಗಣಿಕೆಯಲ್ಲಿ ಸಾಗಿಸುವುದಕ್ಕೆ ಶಾಮೀಲಾಗಿರುವವರನ್ನು ಬಹಿರಂಗ ಪಡಿಸಿ ಎನ್ನತಕ್ಕಂಥದ್ದು ನಮ್ಮ ಒತ್ತಾಯ. ಈ ವಿಷಯ ಸರ್ಕಾರಕ್ಕೆ ಗೊತ್ತಿದೆ ಹೊರತು ನಮಗೆ ಗೊತ್ತಾಗುವುದಿಲ್ಲ. ಆದ್ದರಿಂದ ಆ ವಿಚಾರವನ್ನು ದಯಮಾಡಿ ಸದನಕ್ಕೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಟನೇಜ್‌ನಲ್ಲಿ ಮತ್ತು ಪರವಾನಿಗೆಯಲ್ಲಿ ಕದ್ದು ಹೇಗೂ ಮಾಡಿ ಬಂದರು ಹತ್ತಿರಕ್ಕೆ ತಲುಪುತ್ತಾರೆ. ಆದರೆ, ಬಂದರ್‌ನಿಂದ ಹೊರ ರಾಷ್ಟ್ರಗಳಿಗೆ ಹೋಗಬೇಕಾದರೆ ಅಲ್ಲಿ ಏನಾದರೂ ದಂಧೆ ಇದೆಯೇ? ಇದರ ಬಗ್ಗೆ ನನಗೆ ಸ್ವಲ್ಪ ಸಂಶಯ ಇದೆ. ಇದರ ಬಗ್ಗೆ ಉತ್ತರ ಹೇಳುವವರು ಯಾರು ಇಲ್ಲ. ಅಕ್ರಮವಾಗಿ ಬಂದರ್‌ನಲ್ಲಿ ದಾಸ್ತಾನು ಮಾಡಿರತಕ್ಕಂಥದ್ದನ್ನು ಹೊರದೇಶಗಳಿಗೆ ಕಳುಹಿಸಿರುವುದಕ್ಕೆ ದಾಖಲೆ ಇಲ್ಲವೇ? ದಾಖಲೆ ಸಮೇತ ಕಳುಹಿಸಿದರೆ, ಭಾರತ ದೇಶದ ಎಜಿ ಅಕೌಂಟ್‌ನಲ್ಲಿ ಆಡಿಟ್ ಆಗಿಲ್ಲವೇ? ಇದರ ಬಗ್ಗೆ ಆಡಿಟ್ ಆಗಿದ್ದಾಗ ಯಾವ್ಯಾವ ಕಂಪನಿಯಿಂದ ಎಷ್ಟು ಲಕ್ಷ ಟನ್ ಅದಿರನ್ನು ಕಳುಹಿಸಿದ್ದಾರೆಂಬ ಬಗ್ಗೆ ಲೆಕ್ಕ ಸಿಗುವುದಿಲ್ಲವೇ? ಈ ಲೆಕ್ಕದ ಮುಖಾಂತರ ಇವತ್ತು ಈ ರಾಜ್ಯದಿಂದ ಅಕ್ರಮವಾಗಿ ಅಥವಾ ಹೇಗೆ ಕಳುಹಿಸಿದ್ದರೂ ಕೂಡ ಅದನ್ನು ಕಂಡು ಹಿಡಿದು ಯಾವ್ಯಾವ ಕಂಪನಿಗಳಿಂದ ಹೊರದೇಶಕ್ಕೆ ಎಷ್ಟೆಷ್ಟು ಲಕ್ಷ ಟನ್ ಕಬ್ಬಿಣದ ಅದಿರನ್ನು ಕಳುಹಿಸಿರುವುದಕ್ಕೆಲ್ಲಾ ಮಾಹಿತಿ ಸಿಗುತ್ತದೆ. ನಮಗೆ ಮೋಸ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ರಾಯಲ್ಟಿ ಮತ್ತು ಅರಣ್ಯಕ್ಕೆ ಕೊಡಬೇಕಾಗಿರುವ ಪ್ರತಿಯೊಂದು ಟ್ಯಾಕ್ಸ್ ಅನ್ನು ಅವರಿಗೆ ಹಾಕುವುದಕ್ಕೆ ಸಾಧ್ಯವಿಲ್ಲವೆ? ಇದರ ಬಗ್ಗೆ ನಮಗೆ ಗೊತ್ತಿಲ್ಲ. ಆದ್ದರಿಂದ, ಸನ್ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತಿಳಿಸಬೇಕು. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಹೊರದೇಶಕ್ಕೆ ಅಕೌಂಟ್ ಮೂಲಕವೇ ಕಳುಹಿಸಬೇಕಾಗುತ್ತದೆ. ಅಥವಾ ಹೊರದೇಶಕ್ಕೆ ಏನಾದರೂ ಸೆಕೆಂಡ್ಸ್ ಕಳುಹಿಸುವುದಕ್ಕೆ ಸಾಧ್ಯ ವಿದೆಯೇ? ಅಂದರೆ, ಟ್ಯಾಕ್ಸ್ ಇಲ್ಲದೆ ಅಕ್ರಮವಾಗಿ ಕಳ್ಳ ಸಾಕಾಣಿಕೆಯನ್ನು ಹೊರದೇಶಕ್ಕೆ ಮಾರುವುದಕ್ಕೆ ಸಾಧ್ಯವಿದೆಯೇ? ಇದರ ಬಗ್ಗೆ ನಮಗೆ ಗೊತ್ತಿಲ್ಲದೆ ಇರುವುದರಿಂದ ನಾನು ಕೇಳುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂಧರ್ಭದಲ್ಲಿ ಹೇಳುತ್ತಾರೆಯೋ ಅಥವಾ ಈಗ ಹೇಳುತ್ತಾರೆಯೋ ನನಗೆ ಗೊತ್ತಿಲ್ಲ. ಹೊರದೇಶಕ್ಕೆ ಅಕ್ರಮವಾಗಿ ಕಳುಹಿಸುವುದಕ್ಕೆ ಸಾಧ್ಯವಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ತಿಳಿಸಬೇಕು. ಒಂದು ವೇಳೆ ಅವರು ಅಕೌಂಟ್‌ನಲ್ಲಿ ಕಳುಹಿಸಿದ್ದು ಇದರ ಬಗ್ಗೆ ಹೊರದೇಶದಲ್ಲಿ ದಾಖಲಾತಿ ಇದ್ದರೆ ಆ ದಾಖಲಾತಿಯನ್ನು ತರಿಸಿ ಅಕ್ರಮವಾಗಿ ಕಳುಹಿಸಿರುವುದಕ್ಕೆಲ್ಲಾ

ಪೆನಾಲ್ಟಿಯನ್ನು ಹಾಕುವುದರ ಜೊತೆಗೆ ಸಂವಿಧಾನದ ಕಾನೂನಿನ ಪ್ರಕಾರ ಸಂಬಂಧಪಟ್ಟವರಿಗೆ ಏನು ಶಿಕ್ಷೆ ಕೊಡಬೇಕಾಗಿದೆಯೋ ಆ ಶಿಕ್ಷೆಯನ್ನು ಕೊಡುವುದಕ್ಕೆ ಸಾಧ್ಯತೆ ಇಲ್ಲವೆ ಎಂಬುದು ಈ ಸದನದಲ್ಲಿ ಎಲ್ಲರ ಮನಸ್ಸಿನಲ್ಲಿ ಕಾಡುತ್ತಿದೆ. ಆದ್ದರಿಂದ, ದಯಮಾಡಿ ಹೊರ ರಾಷ್ಟ್ರಗಳಿಗೆ ಕಳುಹಿಸಿರುವ ಬಗ್ಗೆ ದಾಖಲಾತಿಗಳನ್ನು ತರಿಸಿ ಯಾವ್ಯಾವ ಮಹಾಶಯರು ಮತ್ತು ಯಾವ್ಯಾವ ಕಂಪನಿಯವರು ಎಷ್ಟೆಷ್ಟು ಲಕ್ಷ ಟನ್ ಅದಿರನ್ನು ಹೊರದೇಶಕ್ಕೆ ಕಳುಹಿಸಿದ್ದಾರೆಂಬ ದಾಖಲಾತಿಯನ್ನು ತರಿಸಿ ಈ ದೇಶದ ಬೊಕ್ಕಸಕ್ಕೆ ಎಷ್ಟು ಲಕ್ಷ ಮೋಸ ಮಾಡಿದ್ದಾರೆಂದು ತಿಳಿಸಿ, ಈ ಮಾಹಿತಿಯನ್ನು ತರಿಸುವುದಕ್ಕೆ ನಿಮ್ಮ ಕೈಯಿಂದ ಸಾಧ್ಯವಿಲ್ಲವೇ ಎಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳುವುದರ ಜೊತೆಗೆ ಇದು ಸ್ವಲ್ಪ ಅಂತರಾಷ್ಟ್ರೀಯ ವಿಷಯಕ್ಕೆ ಸಂಬಂಧಪಟ್ಟಂಥ ಮಾಹಿತಿಯಾಗಿರುವುದರಿಂದ ಇದು ಕೇಂದ್ರ ಸರ್ಕಾರಕ್ಕೆ ಒಳಪಡುತ್ತದೆ. ಕೇಂದ್ರ ಸರ್ಕಾರದವರು ಇದರಲ್ಲಿ ಭಾಗಿಗಳಾಗಿ ಎಷ್ಟೆಷ್ಟು ಅಕ್ರಮ ದಂಧೆ ನಡೆದಿದೆ ಎಂಬುದನ್ನು ಸಾಬೀತು ಮಾಡುವುದಕ್ಕೆ ಸಾಧ್ಯವಿಲ್ಲವೆ? CBI ತನಿಖೆ ಬೇರೆ. ಆದರೆ, ಇವತ್ತಿನ ದಿವಸ ಎಜಿ ಅಕೌಂಟ್ ಏತಕ್ಕೆ ಇದೆ? ಹೊರ ದೇಶಕ್ಕೂ ಕೂಡ ಅಕ್ರಮವಾಗಿ ಸಾಗಣಿಕೆ ಮಾಡುವುದಕ್ಕೆ ಸಾಧ್ಯವೇ ಎಂಬುದು ನನ್ನ ಪ್ರಶ್ನೆಯಾಗಿದೆ. ಹೊರದೇಶಕ್ಕೆ ಅಕ್ರಮವಾಗಿ ಸಾಗಾಣಿಕೆ ಮಾಡುವುದಕ್ಕೆ ಸಾಧ್ಯವೇ? ಹೊರದೇಶಕ್ಕೆ ಅಕ್ರಮವಾಗಿ ಸಾಗಾಣಿಕೆ ಮಾಡುವುದಕ್ಕಾಗದಿದ್ದರೆ, ಅವರು ಯಾವ್ಯಾವ ಕಂಪನಿಯವರು ಎಷ್ಟೆಷ್ಟು ಲಕ್ಷ ಟನ್ ಕಳುಹಿಸಿದರು, ಆಡಿಟ್ ಆಗಿ ಲೆಕ್ಕ ಸಿಗುತ್ತದೆ. ಆ ಲೆಕ್ಕವನ್ನು ತೆಗೆಸಿ ಇವರು ಇಲ್ಲಿ ಪುಸ್ತಕದಲ್ಲಿ ಬರೆದುಕೊಂಡಿರುತ್ತಾರೆ. 5 ಲಕ್ಷ ಕಳುಹಿಸಿ ಒಂದು ಲಕ್ಷವೆಂದು ಹೇಳಿದ್ದರೆ, ನೀವು ಆ 5 ಲಕ್ಷಕ್ಕೆ ಪೆನಾಲ್ಟಿಯನ್ನು ಹಾಕಿ ಅವರಿಗೆ ರಾಯಲ್ಟಿ ಫಿಕ್ಸ್ ಮಾಡಿ ದೇಶದ್ರೋಹದ ಕೆಲಸವನ್ನು ಹೊರದಶದವರ ಜೊತೆಯಲ್ಲಿ ಮಾಡಿದ್ದೀರಿ ಎಂದು ನೀವು ಅವರನ್ನು ಜೈಲಿಗೆ ಹೋಗಿ ಎಂದು ಅವರನ್ನು ಜೈಲಿಗೆ ಕಳುಹಿಸುವುದಕ್ಕಾಗುವುದಿಲ್ಲವೆ ಸ್ವಾಮಿ, ಯೋಚನೆ ಮಾಡಿ,

ಅಧ್ಯಕ್ಷರು : ನೀವು ಮುಗಿಸಬೇಕು

ಶ್ರೀ ಕೆ. ಶಿವಲಿಂಗೇಗೌಡ : ನೀವು 2 ಗಂಟೆ ಸಮಯವನ್ನು ಕೊಟ್ಟಿರುತ್ತೀರಿ

ಅಧ್ಯಕ್ಷರು : ನೀವು ಮುಕ್ಕಾಲು ಗಂಟೆಯನ್ನು ಕೇಳಿದ್ದು

ಶ್ರೀ ಕೆ. ಶಿವಲಿಂಗೇಗೌಡ : ಇಲ್ಲಾ 2 ಗಂಟೆ ಸಮಯ ಕೇಳಿದ್ದು, ನೀವು ಬೇಕಾದರೆ ನಮ್ಮ ನಾಯಕರನ್ನು ಕೇಳಿ.

ಶ್ರೀ ಸಿ. ಟಿ. ರವಿ : ನಿಮಗೆ ಎರಡು ಗಂಟೆ ಟೈಮ್ ಕೊಟ್ಟರೆ ನಮಗೆ ಬೇಡವೇ?

ಶ್ರೀ ಕೆ. ಶಿವಲಿಂಗೇಗೌಡ : ಇನ್ನು ಎರಡು ದಿವಸ ಚರ್ಚೆ ನಡೆಯಲಿ ಬಿಡಿ

(ಗೊಂದಲ)

ಅಧ್ಯಕ್ಷರು : ಒಂದು ಗಂಟೆಯಾಗುತ್ತ ಬಂತು ಬೇಗ ಮುಗಿಸಿ

ಶ್ರೀ ಸಿ. ಟಿ. ರವಿ : ಮಾಧ್ಯಮಕ್ಕೆ ಹೋಗಲಿ ಎಂದು ಮಾತನಾಡುತ್ತಿದ್ದಾರೆ

ಶ್ರೀ ಕೆ. ಶಿವಲಿಂಗೇಗೌಡ : ನಮ್ಮನ್ನು ಮಾತನಾಡುವುದಕ್ಕೆ ಬಿಡುವುದಿಲ್ಲ. ನೀವು ಇನ್ನು ನಮ್ಮನ್ನು ಏತಕ್ಕೆ ಬಿಡುತ್ತೀರಿ. ಇದಕ್ಕೂ ಕಷ್ಟವೇ?

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ರವಿಯವರೆ, ಮಾಧ್ಯಮಕ್ಕೋಸ್ಕರ ಮಾತನಾಡುತ್ತಿಲ್ಲ. ಸದನಕ್ಕೆ ಬೆಳಕು ಚೆಲ್ಲುತ್ತಿದ್ದಾರೆ. ಮಾಧ್ಯಮದ ಸಲುವಾಗಿ ನೀವು ಮಾತನಾಡುವವರು.

ಅಧ್ಯಕ್ಷರು : ರವಿಯವರೆ ಕುಳಿತುಕೊಳ್ಳಿ. Please ಅವರು ಬೇಗ ಮುಗಿಸಲಿ

ಶ್ರೀ ಹೆಚ್. ಸಿ. ಬಾಲಕೃಷ್ಣ : ನಿಮಗೆ ಈಗ ಕಣ್ಣು ಕಾಣುತ್ತಿಲ್ಲ, ರವಿಯವರೆ ನಿಮಗೆ ಕಣ್ಣು ಕಾಣುವಂತೆ ಮಾಡುತ್ತಿದ್ದಾರೆ.

ಶ್ರೀ ಕೆ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಇವರು ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮಾಡಿದರು. ಎಷ್ಟು ಹಣ ಖರ್ಚಾಯಿತು, ಎಷ್ಟು ಹಣ ಬಿಟ್ಟಿತು ಎನ್ನುವುದು ಅದು ಪ್ರಶ್ನೆಯಲ್ಲ ಅದನ್ನು ಮಾಡಿದರು. ನಿಮ್ಮ ಬಂಢವಾಳ ಹೂಡಿಕೆದಾರರ ಸಮಾವೇಶಕ್ಕೆ ಬಂದವರೆಲ್ಲರೂ ಉಕ್ಕು ಕಾರ್ಖಾನೆಯನ್ನು ಪ್ರಾರಂಭ ಮಾಡತಕ್ಕಂಥವರು. ಅವರು ಏತಕ್ಕೆ ಬಂದರೆಂದರೆ ಇಲ್ಲಿ ಗಣಿಗಾರಿಕೆ ಅಕ್ರಮವಾಗಿ ನಡೆದು ಪುಕ್ಕಟೆಯಾಗಿ ಅದಿರು ಸಿಗುತ್ತದೆ. ಕಡಿಮೆ ಬೆಲೆಗೆ ಭೂಮಿಯನ್ನು ಕೊಡುತ್ತಾರೆ. ಆದ್ದರಿಂದ ಹೊರದೇಶಕ್ಕೆ ತೆಗೆದುಕೊಂಡು ಹೋಗಿ ಮಣ್ಣು ಮಾರಿ ದುಡ್ಡು ಸಂಪಾದನೆ ಮಾಡುವ ಬದಲು ಈ ರಾಜ್ಯದಲ್ಲಿಯೇ ಬಂಡವಾಳವನ್ನು ಹಾಕಿ ಮತ್ತಷ್ಟು ಲೂಟಿಯನ್ನು ಹೊಡೆಯೋಣವೆಂದು ಹೇಳಿ ಈ ಎಲ್ಲಾ ಗಣಿಗಾರಿಕೆಯವರು ಬಂದು ಬಂಡವಾಳ ಹೂಡಲು ಬಂದು ತಮ್ಮ ಹೆಸರನ್ನು ದಾಖಲಾಯಿಸದರು. ಇದು ನನ್ನ ಅನಿಸಿಕೆಯಾಗಿದೆ. ಹೂಡಿಕೆದಾರರ ಒಂದು ಸಮಾವೇಶದಲ್ಲಿ 80% ಬಂಡವಾಳವನ್ನು ಹಾಕಿ ಹೂಡಿಕೆದಾರರು ಉಕ್ಕು ಕಾರ್ಖಾನೆಯನ್ನು ತೆಗೆಯುವುದಕ್ಕೋಸ್ಕರ ಬಂದಿರುತ್ತಾರೆ. ಅಕ್ರಮವಾಗಿ ಅದಿರು ಸಿಗುವುದರಿಂದ ಇಲ್ಲಿ ಉಕ್ಕು ಕಾರ್ಖಾನೆಗಳನ್ನು ತೆರೆಯುವುದಕ್ಕೋಸ್ಕರ ಒಂದು ಅಗ್ರಿಮೆಂಟ್ ಮಾಡಿಕೊಂಡಿರುವುದರಿಂದ ಇವತ್ತು ಅಕ್ರಮ ಗಣಿಗಾರಿಕೆಯಲ್ಲಿ ಅಕ್ರಮ ದಂಧೆ ಬಹಳ ಕಡಿಮೆ ಖರ್ಚಿನಲ್ಲಿ ನಮಗೆ ಕಬ್ಬಿಣದ ಅದಿರು ಪುಕ್ಕಟೆ ಸಿಗುತ್ತದೆ ಇವತ್ತು ಭೂಮಿ ಪುಕ್ಕಟೆಯಾಗಿ ಕಡಿಮೆ ದರಕ್ಕೆ ಸಿಗುತ್ತದೆ ಅದಕ್ಕೋಸ್ಕರವಾಗಿ ನಾವು ಈ ದಂಧೆಯನ್ನು ಉಪೋಗಿಸಿಕೊಳ್ಳಬೇಕೆಂದು

ಹೇಳಿ ಏನಾದರೂ ಮಾಡಿದರಾ ಎನ್ನತಕ್ಕಂಥ ಭಾವನೆ ನನ್ನ ಮನಸ್ಸಿನಲಿದೆ. ಆ ಅನಿಸಿಕೆಯನ್ನು ನಾನು ನಿಮ್ಮ ಮುಂದೆ ವ್ಯಕ್ತ ಮಾಡಿದ್ದೇನೆ. ಅದನ್ನು ನಾನು ಯಾವುದೆ ವ್ಯವಹಾರಿಕವಾಗಿ ಮಾತನಾಡುತ್ತಿಲ್ಲ. ಮುಂದೆ ಅದು ಆ ರೀತಿಯಾಗಿ ಆಗಬಾರದು. ಅದು ಯಶಸ್ವಿಯಾಗಬೇಕು ಯಾರು ಉಕ್ಕು ಕಾರ್ಖಾನೆಯನ್ನು ಮಾಡುವುದಕ್ಕೆ ಬಂದಿದ್ದಾರೆ ಅವರಿಗೆ ಹಂತ ಹಂತವಾಗಿ ಕೊಡಿ ಈ ಖನಿಜ ಸಂಪತ್ತನ್ನು ಪೂರ್ಣ ಮುಗಿಸಿ ಈ ರಾಜ್ಯದಲ್ಲಿರತಕ್ಕಂಥ ಎಲ್ಲಾ ಖನಿಜ ಸಂಪತ್ತನ್ನು ಮುಗಿಸಿ ಈ ದೇಶದ ನೈಸರ್ಗಿಕ ಸಂಪತ್ತನ್ನು ಹಾಳು ಮಾಡಬೇಡಿ. ನೈಸರ್ಗಿಕ ಪರಿಸರ ಹಾಳಾಗುವುದು ಬೇಡ. ಎಷ್ಟು ಪ್ರಮಾಣದಲ್ಲಿ ಕೊಡಬೇಕೋ ಅಷ್ಟು ಪ್ರಮಾಣದಲ್ಲಿ ಆ ಕೈಗಾರಿಕೆಗೆ ಒಂದು ಉತ್ತೇಜನವನ್ನು ಕೊಟ್ಟು ಈ ಖನಿಜ ಸಂಪತ್ತನ್ನು ಉಳಿಸತಕ್ಕಂಥ ಪ್ರಾಮಾಣಿಕತೆ ಪ್ರದರ್ಶನವಾಗಬೇಕು ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಜನ ಮಾತನಾಡಿಕೊಳ್ಳುವುದನ್ನು ಹೇಳುತ್ತಿದ್ದೇನೆ. ಸರ್ಕಾರ ಬಂದಿರುವುದು ಕಬ್ಬಿಣದ ಅದಿರಿನಿಂದ ಸರ್ಕಾರ ಹೋದರು ಕಬ್ಬಿನದ ಅದಿರಿನಿಂದ ಹೊಗಬಹುದು ಎನ್ನತಕ್ಕಂಥ ಚರ್ಚೆ ಜನಸಾಮಾನ್ಯರ ಮಧ್ಯೆದಲ್ಲಿ ಕುಳಿತಾಗ ಆಗಾಗ ಕೇಳುತ್ತಿರುತ್ತೇವೆ. ಜನ ಮಾತನಾಡುತ್ತಾರೆ ಅದು ನನ್ನ ಅಭಿಪ್ರಾಯವಲ್ಲ.

(ಗೊಂದಲ)

ಅಧ್ಯಕ್ಷರು : Please, ಅವರು ಮುಗಿಸಲಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇಲ್ಲಿ ನನ್ನ ಅಭಿಪ್ರಾಯ ಅಲ್ಲ ಜನರ ಅಭಿಪ್ರಾಯವೆಂದು ಹೇಳಿರುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಜನರು ಹೇಳುವುದು 150 ಕೋಟಿ ರೂ.ಗಳನ್ನು ಲೂಟಿ ಹೊಡೆದಿದ್ದೀರಿ ಎಂದು

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಈ ತರಹ ತೊಂದರೆ ಕೊಟ್ಟರೆ ನಾವು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಸಿ.ಟಿ. ರವಿಯವರನ್ನು ಯಾರು ಕೇಳುವುದಿಲ್ಲವೆಂದು ಕೂಗಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನೀವು ಆ ಕಡೆ ನೋಡಿ ಮಾತನಾಡಬೇಡಿ. ಈ ಕಡೆ ನೋಡಿ ಮಾತನಾಡಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸರ್ಕಾರದ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ

ಬರುವುದಿಲ್ಲ. ಆದರೆ ಜನ ಸಾಮಾನ್ಯರು ಮಾತನಾಡಿಕೊಳ್ಳುತ್ತಿರುವುದನ್ನು ನಾನು ಹೇಳಿದೆ. ಅದನ್ನು ಹೇಳುವುದಕ್ಕೆ ಬಿಡುತ್ತಿಲ್ಲವೆಂದರೆ ಹೇಗೆ? ಸಾಮಾನ್ಯ ಜನ ಗ್ರಾಮೀಣ ಪ್ರದೇಶದಲ್ಲಿ ಏನು ಮಾತನಾಡಿಕೊಳ್ಳುತ್ತಿದ್ದಾರೆ ಮಾಧ್ಯಮ ಮತ್ತು ಪತ್ರಿಕೆಗಳನ್ನು ನೋಡಿ.

ಶ್ರೀ ಸಿ. ಟಿ. ರವಿ : ಒಂದು ನಿಮಿಷ

ಅಧ್ಯಕ್ಷರು : ಅವರು ಮುಗಿಸಲಿ ನೀವು ದಯವಿಟ್ಟು ಕುಳಿತುಕೊಳ್ಳಿ. ಇಲ್ಲದಿದ್ದರೆ ಅವರು ಬೇಗ ಮುಗಿಸುವುದಿಲ್ಲ.

ಶ್ರೀ ಸಿ. ಟಿ. ರವಿ : ಇವರು ಇನ್ನು ಹಗಲೊತ್ತಿನಲ್ಲಿ ಕನಸು ಕಾಣುತ್ತಿದ್ದಾರೆ. ರಾತ್ರಿ ಮಲಗಿದಾಗ ಕನಸು ಕಾಣುವುದು ಸ್ವಾಭಾವಿಕ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾನು ಯೀಲ್ಡ್ ಆಗಿರುವುದಿಲ್ಲ. ಏಕೆ ಹೀಗೆ ಮಾತನಾಡುತ್ತೀರಿ.

ಶ್ರೀ ಸಿ. ಟಿ. ರವಿ : ಬಿ.ಬಿ.ಎಂ.ಪಿ. ಎಲೆಕ್ಷನ್

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅವರು ಎರಡು ಸಲ ಗೆದ್ದಿದ್ದಾರೆ, ಅವರಿಗೆ ಕಾನೂನು ಚೆನ್ನಾಗಿ ಗೊತ್ತಿರಬೇಕು.

ಶ್ರೀ ಸಿ. ಟಿ. ರವಿ : ಇವರಿಗೆ ಇದಕ್ಕೂ ಮುಂಚೆ ಹೀಗೆ ಕನಸು ಬಿದ್ದಿತ್ತು. ಅವರೆ ಅಧಿಕಾರದಲ್ಲಿ ಕುಳಿತಂತೆ ಕನಸು ಬಿದ್ದಿತ್ತು. ಎಲೆಕ್ಷನ್ ಆದ ಮೇಲೆ ಗೊತ್ತಾಯಿತು.

ಅಧ್ಯಕ್ಷರು : ದಯವಿಟ್ಟು ವಿಷಯಾಂತರವಾಗುವುದು ಬೇಡ

ಶ್ರೀ ಸಿ. ಟಿ. ರವಿ : ಮೂರು ಮತ್ತೊಂದು ಎಂದು ಆಗ ಗೊತ್ತಾಯಿತು. ಈಗಲೂ ಹಾಗೆಯೇ? ಅಂದರೆ ರಾತ್ರಿ ಮಲಗಿದಾಗ ನೆನಪಿಸಿಕೊಂಡು ಮಲಗಿದರೆ ಕನಸು ಬೀಳುತ್ತವೆ. ಇಲ್ಲಿ ಮಾತನಾಡುತ್ತಿರಬೇಕಾದರೆ ಅದು ಹಗಲು ಕನಸು ಆಗುತ್ತದೆ.

ಅಧ್ಯಕ್ಷರು : ನೀವು 5 ನಿಮಿಷದಲ್ಲಿ ಮುಗಿಸಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ಜನಸಾಮಾನ್ಯರು ಮಾತನಾಡುತ್ತಿರುವುದನ್ನು ಈ ಸದನದಲ್ಲಿ ಹೇಳಬೇಡಿ ಎಂದರೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಿಮಗೆ ಅಷ್ಟೊಂದು ನೋವು ಆದರೆ ಹೋಗಲಿ ನಾನು ಹೇಳುವುದಿಲ್ಲ. ನಾನು ಇಲ್ಲಿ ಸುಳ್ಳು ಹೇಳುತ್ತಿದ್ದೇನೆಂದರೆ ಬೇಕಾದರೆ ಕೇಳಲಿ. ಜನಾಭಿಪ್ರಾಯವನ್ನು ಕೇಳೋಣ.

ಅಧ್ಯಕ್ಷರು : ಈಗ ಒಂದು ಗಂಟೆ ಆಯಿತು. ನೀವು ಕೇಳಿರುವುದಕ್ಕೆ ಹೆಚ್ಚಿಗೆ ಸಮಯವನ್ನು

ಕೊಟ್ಟಿದ್ದೇನೆ, ಬೇಗ ಮುಗಿಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾನು ಬೇಗ ಮುಗಿಸುತ್ತೇನೆ. ಈಗ ಹೇಗಾಗಿದೆ ಎಂದರೆ, ಈ ರಾಜ್ಯದ ವಿಚಾರವನ್ನು ಮಾತನಾಡುವುದು ಬೇಡವೆಂದರೆ ನಾವು ಇನ್ನು ಏನು ಮಾಡೋಣ. ನಾನು ಏನಾದರೂ ತಪ್ಪು ಮಾತನಾಡಿದ್ದರೆ ಅಥವಾ ಸುಳ್ಳು ಹೇಳಿದ್ದರೆ, ಅಶ್ಲೀಲ ಪದಗಳನ್ನು ಉಪಯೋಗಿಸಿದ್ದರೆ, ಕಾನೂನು ಬಾಹೀರವಾಗಿ ಮಾತನಾಡಿದ್ದರೆ ಹೇಳಬೇಕು. ನಮ್ಮ ಅಧಿಕಾರವನ್ನು ಮೊಟಕುಗೊಳಿಸುವುದಕ್ಕೆ ಮಧ್ಯದಲ್ಲಿ ಎದ್ದೆದ್ದು ಮಾತನಾಡಿದರೆ ಹೇಗೆ? ಇರುವಂಥ ವಿಚಾರವನ್ನು ನಾನು ಇಲ್ಲಿ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾವು ದಾಖಲೆ ಇಲ್ಲದೆ ಇಲ್ಲಿ ಬಂದಿಲ್ಲ. ದಾಖಲೆಯನ್ನು ಇಟ್ಟುಕೊಂಡಿದ್ದೇವೆ. ಬಳ್ಳಾರಿಯಲ್ಲಿ ಗಣಿದಾಳಿ, ಲೋಕಾಯುಕ್ತರ ಮಿಂಚಿನ ಕಾರ್ಯಚರಣೆ ಏನೇನು ನಡೆಯಿತು, ದಾಖಲಾತಿ ಇಲ್ಲಿದೆ ನೋಡಿ. ಈ ಪತ್ರಿಕೆಯಲ್ಲಿ ಬರೆದಿರುತ್ತಾರೆ ಏಕೆ ಬರೆದರು. ಈ ರಾಜ್ಯದ ಜನತೆಯ ಅಭಿಪ್ರಾಯವನ್ನು ನಾವು ಈ ಸಂದರ್ಭದಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಹೊರತು ಯಾವುದೇ ವೈಯಕ್ತಿಕವಾದ ದ್ವೇಷವಿಲ್ಲವೆನ್ನುವುದನ್ನು ನಾನು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಅಪ್ಪಚ್ಚು ರಂಜನ್ : ಆ 150 ಕೋಟಿಗಳು.......

ಶ್ರೀ ಕೆ.ಎಂ. ಶಿವಲಿಂಗೇಗೌಡ : ಆ 150ಕೋಟಿ ರೂ.ಗಳದ್ದು ಏನು ಮಾಡಿದಿರಿ......

(ಗೊಂದಲ)

ಅಧ್ಯಕ್ಷರು : ವಿಷಯಾಂತರ ಬೇಡ

ಶ್ರೀ ಹೆಚ್. ಸಿ. ಬಾಲಕೃಷ್ಣ : ಅದು ತನಿಖೆಯಾಗಲಿ, ಮಾನ್ಯ ಸಿದ್ಧರಾಮಯ್ಯನವರು ಮಾತನಾಡುವಾಗ ವಿಷಯ ಬಂದಾಗ ಇದನ್ನು ಹೇಳಲಾಗಿದೆ. (ಗೊಂದಲ) ನಿಮ್ಮ ಸರ್ಕಾರ ಇತ್ತು ಎರಡು ವರ್ಷ ಏಕೆ ಸುಮ್ಮನೆ ಕುಳಿತಿರುತ್ತೀರಿ. 150 ಕೋಟಿ ರೂಪಾಯಿಗಳನ್ನು ಎಲ್ಲಿ ತಿಂದಿದ್ದಾರೆಂದು ನಮಗೂ ಗೊತ್ತಾಗಲಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಎರಡು ವರ್ಷವಾಯಿತು ನೀವು ಸರ್ಕಾರ ನಡೆಸುತ್ತಿದ್ದೀರಿ ಏಕೆ ಸುಮ್ಮನೆ ಕುಳಿತಿರುತ್ತೀರಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : 150 ಕೋಟಿ ರೂಪಾಯಿಗಳನ್ನು ಮಾನ್ಯ

ಕುಮಾರಸ್ವಾಮಿಯವರು ಹೊಡೆದಿದ್ದರೆ, ಎನ್‌ಕ್ವಾಯಿರಿ ಮಾಡಿ ಅವರನ್ನು ಜೈಲಿಗೆ ಕಳುಹಿಸಿ, ಅದನ್ನು ಬಿಟ್ಟು ನೀವು ಹಣ ಹೊಡೆದಿರುತ್ತೀರೆಂದರೆ ಅದನ್ನು ನೀವು ಸಾಬೀತು ಮಾಡಿ. ಇದು ಸಾಬೀತಾಗಿದೆ ಸ್ವಾಮಿ, ಇದನ್ನು ನಾವು ಹೇಳಿರುವುದಲ್ಲ, ನಿಮ್ಮ ಮುಖ್ಯಮಂತ್ರಿಗಳೆ ಒಪ್ಪಿಕೊಂಡಿರುತ್ತಾರೆ. ಇದು ಸಾಬೀತಾಗಿದೆ, ಇದನ್ನು ನಾನು ಹೇಳಿರುವುದಲ್ಲ, ನಿಮ್ಮ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಅಕ್ರಮ ಗಣಿಗಾರಿಕೆಯು ನಡೆದಿದೆ, ಅಕ್ರಮ ಗಣಿಗಾರಿಕೆಯಿಂದ ಅದಿರು ಹೊರದೇಶಕ್ಕೆ ಹೋಗಿದೆ, ಲೂಟಿಯಾಗಿದೆ, ಇದು ಅಂದಿನಿಂದ ನಡೆದುಕೊಂಡು ಬಂದಿದೆ. ನಮ್ಮ ಕಾಲದಲ್ಲಿ ಇದು ಸ್ವಲ್ಪ ಜಾಸ್ತಿಯಾಗಿದೆ. ಅದಕ್ಕೋಸ್ಕರ ಇದನ್ನು ತಡೆಗಟ್ಟಬೇಕು, ಗೋಕುಲ್ ಎನ್ನುವಂತಹ ಅಧಿಕಾರಿಗೆ ಪ್ರಶಸ್ತಿಯನ್ನು ಕೊಡಬೇಕು. ನಾವು ತಪ್ಪು ಮಡಿದ್ದೇವೆ, ನಾವೆಲ್ಲರೂ ಇವತ್ತು ಈ ರಾಜ್ಯದ ಹಾಗೂ ಈ ರಾಷ್ಟ್ರದ ಸಂಪತ್ತನ್ನು ನಾವು ಉಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು. ಇದನ್ನು ನಾನು ಹೇಳಿದ್ದೀನಾ, ಹೊರದೇಶಕ್ಕೆ ಕಳುಹಿಸಿರುವುದಕ್ಕೆ ನಾವು ಏನನ್ನಬೇಕು, ದೇಶದ್ರೋಹಿಗಳು ಎನ್ನದೆ ಅವರಿಗೆ ನಾವು ಕರ್ಪೂರ ತೆಗೆದುಕೊಂಡು ಬಂದು ಮಂಗಳಾರತಿಯನ್ನು ಎತ್ತಬೇಕೇ? ಅವರು ದೇಶದ್ರೋಹಿಗಳೆ, ಅವರು ಕಳ್ಳರೆ,

ಶ್ರೀ ಸಿದ್ಧುಸವದಿ : 150 ಕೋಟಿ ರೂಪಾಯಿಗಳನ್ನು ಹೊಡೆದಿರುವ ಬಗ್ಗೆ.....

ಶ್ರೀ ಕೆ.ಎಂ. ಶಿವಲಿಂಗೇಗೌಡ : 150 ಕೋಟಿ ರೂಪಾಯಿಗಳನ್ನು ಹೊಡೆದಿರುವ ಬಗ್ಗೆ ಸಾಬೀತುಮಾಡಿ ತೋರಿಸಿದರೆ ನಾವು ನಿಮ್ಮ ಮನೆಯಲ್ಲಿ ಜೀತವನ್ನು ಮಾಡುತ್ತೇನೆ. ನೀವು ಮಾಡಿ ತೋರಿಸಿ. ನೀವು ಇದನ್ನು ಸಾಬೀತು ಮಾಡಿದರೆ ನಿಮ್ಮ ಮನೆಯಲ್ಲಿ ಜೀತವನ್ನು ಮಾಡುತ್ತೇನೆ. ನೀವು 150 ಕೋಟಿ ರೂಪಾಯಿಗಳ ಬಗ್ಗೆ ತೋರಿಸಿ. ಬರೀ ಬಂಡಲ್ ಹೊಡೆಯುವುದಿಲ್ಲ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ನೀವು ತಾಕತ್ತು ಇದ್ದರೆ ಅದನ್ನು ಸಾಬೀತು ಮಾಡಿ, ನಿಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ನೀವು ಅದನ್ನು ಸಾಬೀತು ಮಾಡಿ. ಮಾನ್ಯ ಸದಸ್ಯರಾದ ಶ್ರೀ ಶಿವಲಿಂಗೇಗೌಡರು ನಿಮ್ಮ ಮನೆಯಲ್ಲಿ ಜೀತ ಮಾಡುತ್ತೇನೆಂದು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು : ಮಾನ್ಯ ಬಾಲಕೃಷ್ಣರವರೆ, ತಾವು ಈ ಕಡೆ ನೋಡಿ ಮತನಾಡಿ

ಶ್ರೀ ಸಿ. ಟಿ. ರವಿ : ಈಗ ಎಲ್ಲಿ ಜೀತಕ್ಕೆ ಇದ್ದೀರಿ ಅದನ್ನು ಹೇಳಿ. ಅದನ್ನು ನಮ್ಮ ಹತ್ತಿರ ಹೇಳುವುದು ಬೇಡ. ನೀವು ಆರೋಪ ಮಾಡಿದ ತಕ್ಷಣ ಅದು ಸಾಬೀತಾಗುವುದಿಲ್ಲ

ಶ್ರೀ ಹೆಚ್. ಸಿ. ಬಾಲಕೃಷ್ಣ : ರವಿಯವರೆ, ತಾವು ಬಾಯಿ ತೀಟೆಗೋಸ್ಕರ

ಮಾತನಾಡುವುದಕ್ಕೆ ಹೋಗಬೇಡಿ. ನೀವು ಸದನಕ್ಕೆ ಬೆಳಕನ್ನು ಚೆಲ್ಲಿರಿ.

ಶ್ರೀ ಸಿ. ಟಿ. ರವಿ : ನೀವು ಎಲ್ಲಿದ್ದೀರಿ ಅಲ್ಲಿ ಜೀತವನ್ನು ಮಾಡಿ. ಇಲ್ಲಿ ಜೀತ ಮಾಡುವುದು ಬೇಡ.

ಶ್ರೀ ಹೆಚ್. ಸಿ. ಬಾಲಕೃಷ್ಣ : ನೀವು ಎಲ್ಲಿ ಜೀತವನ್ನು ಮಾಡುತ್ತಿದ್ದೀರೆಂದು ಎಲ್ಲರಿಗೂ ಗೊತ್ತಿದೆ. ನಿಮ್ಮನ್ನು ಏನು ಉಪ್ಪರಿಗೆಯ ಮೇಲೆ ಕೂರಿಸಿಲ್ಲ, ನೀವು ಕೂಡ ಜೀತವನ್ನು ಮಾಡುತ್ತಿದ್ದೀರಿ. ನೀವು ಕೂಡ ಮಾಡಿ. ಎಲ್ಲರೂ ಕೂಡ ಒಂದೊಂದು ಪಕ್ಷದಲ್ಲಿ ಜೀತವನ್ನು ಮಾಡಲೇಬೇಕು. ಅವರವರ ಪಕ್ಷದಲ್ಲಿ ಜೀತವನ್ನು ಮಾಡಲೇಬೇಕು. ನಿಮ್ಮನ್ನು ಏನು ಉಪ್ಪರಿಗೆಯ ಮೇಲೆ ಕೂರಿಸಿಲ್ಲ ರವಿಯವರೆ,

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ, ತಾವು ಮಾತನಾಡಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ನೀವು ನಮ್ಮ ಮೇಲೆ 150 ಕೋಟಿ ರೂಪಾಯಿಗಳು ಎಂದು ಹೇಳುತ್ತೀರಾ? ನಾವು ನಿಮ್ಮ ಮೇಲೆ 10,000 ಕೋಟಿ ಎಂದು ಹೇಳುತ್ತೇನೆ. ನೀವು ಏನು ಮಾಡುತ್ತೀರಿ ನಿಮ್ಮ ಹಾಗೆ ನಾನು ಕೂಡ 10,000 ಕೋಟಿ ಎಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ, ನೀವು ಮಾತನ್ನು ಮುಗಿಸದೆ ಹೋದರೆ ನಾನು ಮುಗಿಸುತ್ತೇನೆ, ಶಿವಲಿಂಗೇಗೌಡರೆ, Please.......

ಶ್ರೀ ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ,........

ಅಧ್ಯಕ್ಷರು : ಮಾನ್ಯ ಅಪ್ಪಚ್ಚುರವರೆ, Please, ತಾವು ಕುಳಿತುಕೊಳ್ಳಿ

(ಗೊಂದಲ)

ತಾವು ಮಾತನಾಡಿ ಬೇಗನೆ ಮುಗಿಸಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾನು ಮಾತನಾಡಿ ಬೇಗನೆ ಮುಗಿಸುವುದಕ್ಕೆ ಅವರು ಬಿಡುತ್ತಿಲ್ಲ.

ಅಧ್ಯಕ್ಷರು : ತಾವು 5 ನಿಮಿಷದಲ್ಲಿ ಮುಗಿಸಬೇಕು

ಶ್ರೀ ಪಿ. ಎಂ. ಅಶೋಕ್ : ಅವರು ಮಾತನಾಡುವುದಕ್ಕೆ ಇನ್ನು ಒಂದು ಗಂಟೆ ಕಾಲ ಇದೆ.

ಅಧ್ಯಕ್ಷರು : Please, ಬೇಗ ಮುಗಿಸಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇವತ್ತು ಏನು ಅಕ್ರಮ ಗಣಿಗಾರಿಕೆ ದಂದೆ ಈ

ರಾಜ್ಯದಲ್ಲಿ ನಡೆದಿದೆ. ಇದನ್ನು ನಾನು ಅಕ್ರಮ ಅನ್ನದೆ ಇನ್ನು ಏನೆಂದು ಹೇಳಲಿ? ಇದನ್ನು ನಾನು ಹೇಳಿರುವುದಲ್ಲ, ನಿಮ್ಮ ಮುಖ್ಯಮಂತ್ರಿಗಳೆ ಹೇಳಿರುವುದು. ಅಯ್ಯೋ ಶಿವನೇ, ಅಕ್ರಮ ನಡೆದಿದೆಯೋ ಇಲ್ಲವೋ ಎಂದು ನೀವು ಅವರನ್ನೇ ಕೇಳಿ.

ಅಧ್ಯಕ್ಷರು : ನೀವು ಆ ಕಡೆ ನೋಡಬೇಡಿ, ಈ ಕಡೆ ನೋಡಿಕೊಂಡು ಮಾತನಾಡಿ.
ಒಬ್ಬ ಮಾನ್ಯ ಸದಸ್ಯರು: ಎಲ್ಲವನ್ನು ನೀವೇ ಮಾತನಾಡಿಬಿಡಿ.

ಶ್ರೀ ಸಿದ್ದುಸವದಿ : ಮಾನ್ಯ ಅಧ್ಯಕ್ಷರೇ,........

ಅಧ್ಯಕ್ಷರು : ಸಿದ್ದುರವರೆ, ತಾವು ಕುಳಿತುಕೊಂಡು ಏಕೆ ಮಾತನಾಡುತ್ತಿದೀರಿ?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅಕ್ರಮ ಗಣಿಗಾರಿಕೆ ಎಂದು ಮಾತನಾಡುತ್ತೇನೆ

ಒಬ್ಬ ಮಾನ್ಯ ಸದಸ್ಯರು: ಅದು ಸಕ್ರಮ

ಅಧ್ಯಕ್ಷರು : ನೀವು ಆ ಕಡೆ ಏಕೆ ನೋಡಿಕೊಂಡು ಮಾತನಾಡುತ್ತೀರಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇವತ್ತು ಏನು ಒಂದು ಅಕ್ರಮ ಗಣಿಗಾರಿಕೆ ವಿಚಾರ ಏನು ಇದೆ. ಇದನ್ನು ಸಕ್ರಮ ಎಂದು ನಾನು ಏಕೆ ಹೇಳಲಿ, ಇಲ್ಲಿ ಬರಿ ಅಕ್ರಮವೇ ನಡೆದಿರುವುದು.

ಅಧ್ಯಕ್ಷರು : ತಾವು ಮಾತನಾಡಿ ಮುಗಿಸಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ಈ ಅಕ್ರಮ ಗಣಿಗಾರಿಕೆ ವಿಚಾರ ಏನು ಇದೆ

ಶ್ರೀ ಸಿ. ಟಿ. ರವಿ : ಮಾನ್ಯ ಅಧ್ಯಕ್ಷರೇ, ಈ ಕಾಪಿರೈಟಿಂಗ್

ಅಧ್ಯಕ್ಷರು : ಅವರು ಮಾತನಾಡಿ ಮುಗಿಸಲಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ರವಿಯವರೆ, ನಾನು ಮಾತನಾಡುವುದಕ್ಕೆ ಹೋದರೆ ಏತಕ್ಕಾಗಿ ಹೊಟ್ಟೆ ಉರಿದುಕೊಳ್ಳುತ್ತೀರಿ. ಏತಕ್ಕಾಗಿ ನೀವು ನಮ್ಮ ಮೇಲೆ ಪದೇ ಪದೇ ಸಿಟ್ಟು ಮಾಡಿಕೊಳ್ಳುತ್ತೀರಿ ನಾನು ಯೀಲ್ಡ್ ಆಗಿಲ್ಲ. ನೀವು ಹೇಗೆ ಮಾತನಾಡುತ್ತೀರಿ.

ಶ್ರೀ ಸಿ. ಟಿ. ರವಿ : ನಿಮ್ಮ ಬೆಂಬಲ ಕೊಟ್ಟು ನಾನು ಮಾತನಾಡುತ್ತಿರುವುದು

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾನು ಯೀಲ್ಡ್ ಆಗಿಲ್ಲ ತಡೆಯಿರಿ

ಶ್ರೀ ಸಿ. ಟಿ. ರವಿ : ಮಾನ್ಯ ಅಧ್ಯಕ್ಷರೇ, ನಿಮಗೆ ಬೆಂಬಲವನ್ನು ಕೊಡುತ್ತಿದ್ದೇನೆ. ನಾವು ಸಣ್ಣ ಹುಡುಗನಿರುವಾಗ handwriting improve ಆಗಲಿ ಎಂದು ಕಾಪಿರೈಟಿಂಗ್‌ನ್ನು

ಮಾಡಿಸುತ್ತಿದ್ದರು ಅದರಲ್ಲಿ ಆಕ್ಷರದ ಮೇಲೆ ಸುತ್ತಿಸುತ್ತಿದ್ದರು. "ಅ" ಎಂದು ಸುತ್ತಿಸುತ್ತಿದ್ದರು. ಹಾಗೆಯೇ ಇವರು ಅದನ್ನೆ ಸುತ್ತುತ್ತಿದ್ದಾರೆ. ಇವರು ಕಾಪಿರೈಟಿಂಗ್ ಮಾಡಿಸುತ್ತಿದ್ದಾರೆ.

ಅಧ್ಯಕ್ಷರು : ತಾವು ಮಾತನಾಡಿ ಮುಗಿಸಿ

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇಲ್ಲಿ ನಾವು ಯಾರನ್ನು ಉದ್ದೇಶಿಸಿ ಮಾತನಾಡುತ್ತಿಲ್ಲವೆಂದು ನಾನು ಮೊದಲೆ ಹೇಳಿದ್ದೇನೆ. ಇರುವ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸನ್ಮಾನ್ಯ ಲೋಕಾಯುಕ್ತರು ರಾಜೀನಾಮೆಯನ್ನು ವಾಪಸ್ಸು ಪಡೆಯುತ್ತೇನೆಂದು ಹೇಳಿದ್ದಾರೆ.

ಶ್ರೀ ಡಿ. ಎನ್. ಜೀವರಾಜ್ : ಗೌಡರೆ, ಒಂದು ನಿಮಿಷ ನಾನು ಮಾತನಾಡುತ್ತೇನೆ. ತಾವು ಕುಳಿತುಕೊಳ್ಳಿ, ಮಾನ್ಯ ರವಿಯವರು ಅಕ್ಷರವನ್ನು ಸುತ್ತಿಸುವುದು ಎಂದು ಹೇಳಿದರು. ಅದು ಹಾಗಲ್ಲ, ಎರಡು ಸಿ.ಡಿ. ಪ್ಲೇಯರ್‌ಗಳು ಬರುತ್ತವೆ. ಹಳೇ ಸಿ.ಡಿ. ಪ್ಲೇಯರ್ ಪಿಕ್ಚರ್ ಸ್ಟಾರ್ಟ್ ಆಗಿ ಮಧ್ಯದಲ್ಲಿ ಕರೆಂಟ್ ಹೋದರೆ ಮತ್ತೇ ಅಲ್ಲಿಂದ ಚಿತ್ರವು ಶುರು ಆಗುತ್ತದೆ. ಚಿತ್ರಕಥೇ, ನಿರ್ದೇಶನ ಎಂದು ಅಲ್ಲಿಂದಲೇ ಶುರು ಆಗುತ್ತದೆ. ಈಗ ಹೊಸ ಸಿ.ಡಿ. ಪ್ಲೇಯರ್‌ಗಳು ಹೇಗೆ ಎಂದರೆ ಕರೆಂಟ್ ಹೋದ ಮೇಲೆ ಎಲ್ಲಿ ಪಿಕ್ಚರ್ ನಿಂತಿರುತ್ತದೆಯೋ ಅಲ್ಲಿಂದಲೇ ಶುರು ಆಗುತ್ತದೆ. ಇವರು, ಇವರ ನಾಯಕರು ರೇವಣ್ಣನವರು ಇಬ್ಬರು ಹಳೆ ಸಿ.ಡಿ. ಪ್ಲೇಯರ್ ತರಹ, ಅಲ್ಲಿಂದಲೇ ಶುರು ಮಾಡುತ್ತಾರೆ, ವಿಷಯ ಇರುತ್ತದೆ ಆದರೆ ಹೊಸ ಸಿ.ಡಿ. ಪ್ಲೇಯರ್ ತರಹ.

ಅಧ್ಯಕ್ಷರು : ಆಯಿತು.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಜೀವರಾಜ್‌ರವರೆ, ನೀವು ಇಲ್ಲಿ ಹೇಳಿದ್ದೀರಲ್ಲಾ ಅದಕ್ಕೆ ನೀವು ಒಳಗೆ ಹೋಗಿ, ಹೊರೆಗೆ ಬರುತ್ತೀರಿ. ಅದಕ್ಕೆ ನಿಮಗೆ ಸಿ.ಡಿ. ಪ್ಲೇಯರ್ ಅಲ್ಲಿಯೇ ಇದ್ದಹಾಗೆ ಕಾಣುತ್ತದೆ. ನೀವು ಇಲ್ಲಿ ಕುಳಿತುಕೊಂಡರೆ ಅದರ ಬಗ್ಗೆ ಗೊತ್ತಾಗುತ್ತದೆ. ಎಲ್ಲಿಯ ತನಕ ಓಡಿದೆ, ಎಲ್ಲಿಯ ತನಕ ಬಂದಿದೆ ಎಂದು ಗೊತ್ತಾಗುತ್ತದೆ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಸಿ. ಬಾಲಕೃಷ್ಣ : ರೇವಣ್ಣನವರದು ಹಳೆಯ ಸಿ.ಡಿ.ಪ್ಲೇಯರ್, ಅವರು ಅದನ್ನು ಪ್ಲೇ ಮಾಡಿದರೆ ನೀವುಗಳೆಲ್ಲರೂ ಊಸ್ಟ್ ಆಗಿ ಬಿಡುತ್ತೀರಿ.

ಅಧ್ಯಕ್ಷರು : ತಾವು ಬೇಗನೇ ಮುಗಿಸಿ, ಇನ್ನು ಯಾರು ಮಾತನಾಡಿದರೂ ತಾವು ಯೀಲ್ಡ್ ಆಗಬೇಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಹಳೆಯ ಸಿ.ಡಿ. ಎಂದು ವ್ಯತ್ಯಾಸ ಬೇಡ. ನಾವು ಅದನ್ನೆ ಹೇಳಬೇಕೆಂದು ಏನು ಇಲ್ಲ. ಅದನ್ನು ಅಕ್ರಮ ಎಂದು ಕರೆಯುತ್ತಿದ್ದೇವೆ. ಅದನ್ನು

ಹೇಳಿದ ತಕ್ಷಣ ನಿಮಗೆ ಏತಕ್ಕೆ ಸಿಟ್ಟು ಬರುತ್ತದೆ. ತಾವು ಸಿಟ್ಟನ್ನು ಮಾಡಿಕೊಳ್ಳಬೇಡಿ. ಅದನ್ನು ಅಕ್ರಮ ಎಂದೆ ಹೇಳಬೇಕಾಗುತ್ತದೆ. ಅದನ್ನು ಸಕ್ರಮ ಎಂದು ಹೇಳುವುದಕ್ಕಾಗುತ್ತದೆಯೇ? ಯಾರ್‍ಯಾರು ಮಾಡಿದ್ದಾರೋ ನಿನ್ನೆಯ ದಿನ ಮಾನ್ಯ ಸದಸ್ಯರಾದ ಶ್ರೀ ಎಂ.ಸಿ. ನಾಣಯ್ಯನವರು ಮೇಲ್ಮನೆಯಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಈ ಅಕ್ರಮ ಗಣಿಗಾರಿಕೆಯಿಂದ ಇವತ್ತು ಭಾರತ ಆಪರೇಷನ್ ಆಗುತ್ತದೆ. ಕರ್ನಾಟಕದ ರಾಜಕಾರಣದ ಆಪರೇಷನ್ ಅಲ್ಲ. ಭಾರತದೇಶದ ರಾಜಕಾರಣದ ಆಪರೇಷನ್ ಆಗುವಂತಹ ಮಟ್ಟಕ್ಕೆ ಹೋಗಿದೆ. ಈ ಅಕ್ರಮ ಗಣಿಗಾರಿಕೆಯಿಂದ 3000 ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿ 10-10 ಕೋಟಿ ರೂಪಾಯಿಗಳನ್ನು ಒಬ್ಬೊಬ್ಬರಿಗೆ ಕೊಟ್ಟು 300 ಜನ ಎಂಪಿಗಳನ್ನು ಗೆಲ್ಲಿಸುವಂತಹ ರಾಜಕಾರಣವನ್ನು ಮಾಡುವುದಕ್ಕೆ ಹೊರಟಿದ್ದಾರೆಂದು ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಎಂ.ಸಿ. ನಾಣಯ್ಯನವರು ಹೇಳಿದ್ದಾರೆ. ನಾನು ಇಲ್ಲಿ ಅಸೆಂಬ್ಲಿಯನ್ನು ಮುಂದೂಡಿದ ಮೇಲೆ ನಾನು ಅಲ್ಲಿ ಹೋಗಿ ಟಿ.ವಿ.ಯಲ್ಲಿ ನೋಡಿದಾಗ ಅವರು ಮಾತನಾಡುತ್ತಿದ್ದರು.

(ಗೊಂದಲ)

ಈ ತರಹ ನೀವುಗಳು ತೊಂದರೆಯನ್ನು ಕೊಟ್ಟು ಈ ಸಂವಿಧಾನದ ವ್ಯವಸ್ಥೆಯೊಳಗೆ ..... ನೀವು ಏಕೆ ಹೀಗೆ, ಈ ತರಹ ತಾವು ಮಾತನಾಡಬಾರದು. ನಮಗೆ ಸಂವಿಧಾನಬದ್ಧವಾದಂತಹ ಹಕ್ಕನ್ನು ಕೊಟ್ಟಿದ್ದಾರೆ, ನಾವು ಮಾತನಾಡುತ್ತಿದ್ದೇವೆ. ನಾವು ಯಾರ ಮೇಲೂ ವೈಯುಕ್ತಿಕವಾಗಿ ನಿಂದನೆಯನ್ನು ಮಾಡುತ್ತಿಲ್ಲ. ಅವರು ಮಾತನಾಡಿರುವುದನ್ನು ನಾನು ಇಲ್ಲಿ ಉದಾಹರಣೆಯನ್ನು ಕೊಟ್ಟಿದ್ದೇನೆ. ಅದಕ್ಕೆ ಏಕೆ ನಿಮಗೆ ಇಷ್ಟೊಂದು ಕೋಪ ? ಅವರು ಏನು ಮಾತನಾಡಿದ್ದಾರೆಂದು ನನಗೂ ಕೂಡ ಗೊತ್ತಿದೆ. ಇಲ್ಲಿ ಏನು ಹೇಳಿದ್ದಾರೆ ಎಂದು ನನಗೂ ಕೂಡ ಗೊತ್ತಿದೆ. ನೀವು ಅಲ್ಲಿ ಕೇಳಿಕೊಂಡು ಬಂದು ಹೇಳಿ.

ಅಧ್ಯಕ್ಷರು : ನೀವು ಆ ಕಡೆ ಪ್ರತಿಯೊಂದಕ್ಕೂ ಉತ್ತರವನ್ನು ಕೊಡುತ್ತಿದ್ದರೆ, ನಾನು ಕ್ಲೋಸ್ ಮಾಡುತ್ತೇನೆ. ಕೆಲವು ಜನರು ಹೇಳಿರುವುದನ್ನು ಉದಾಹರಣೆಯನ್ನು ಕೊಡಬೇಕಾಗುತ್ತದೆ. ಇಲ್ಲಾ ನಾವೇ ಹೇಳಿದರೆ, ಇವನು ದೊಡ್ಡ ಮನುಷ್ಯ ಅನ್ನುತ್ತೀರಲ್ಲಾ, ಅದಕ್ಕೋಸ್ಕರ ಇಂತಿಂಥವರು ಹೇಳಿದ್ದಾರೆಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ಅಂತರರಾಷ್ಟ್ರೀಯ ಸಂಬಂಧ ಇರುವುದರಿಂದ ಹೊರ ರಾಷ್ಟ್ರಕ್ಕೆ ಅಕ್ರಮವಾಗಿ ಅಕ್ರಮ ಗಣಿಗಾರಿಕೆಯನ್ನು ಮಾಡಿ ಇವತ್ತು ಈ ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿ ಈ ರಾಜ್ಯಕ್ಕೆ ಬರತಕ್ಕಂತಹ ರೆವಿನ್ಯೂವನ್ನು ಅನ್ಯಾಯ ಮಾಡಿ ಈ ರಾಜ್ಯಕ್ಕೆ ಬರಬೇಕಾದಂತಹ ಆದಾಯವನ್ನು ಮೋಸ ಮಾಡಿ ಇವತ್ತು ಅಕ್ರಮ ಗಣಿಗಾರಿಕೆ ನಡೆದಿದೆ, ಕಬ್ಬಿಣದ ಅದಿರನ್ನು

ಹೊರದೇಶಕ್ಕೆ ಕಳುಹಿಸಿದ್ದಾರೆ. ನಾನು ಒಂದು ಮಾತನ್ನು ಹೇಳಿದ್ದೇನೆ. ಕಬ್ಬಿಣದ ಅದಿರನ್ನು ಹೊರದೇಶಕ್ಕೆ ಅಕ್ರಮವಾಗಿ ಕಳುಹಿಸುವುದಕ್ಕೆ ಸಾಧ್ಯವಿದೆಯೇ, ನಂಬರ್–2ನಲ್ಲಿ ಕಳುಹಿಸುವುದಕ್ಕೆ ಸಾಧ್ಯವಿದೆಯೇ ? ಟ್ಯಾಕ್ಸ್‌ನ್ನು ತಪ್ಪಿಸಿ ಕಳುಹಿಸುವುದಕ್ಕೆ ಸಾಧ್ಯವಿದೆಯೇ ಎನ್ನುವಂತಹ ಮಾತನ್ನು ಹೇಳಿದೆ. ಇವತ್ತು ಹೊರ ರಾಷ್ಟ್ರಗಳಲ್ಲಿ ಹೋಗಿ ಅದರ ಬಗ್ಗೆ ತಪಾಸಣೆಯನ್ನು ಮಾಡಿ ಕಂಡು ಹಿಡಿಯಬೇಕಾದರೆ ಇವತ್ತಿನ ದಿವಸ ನಾನಲ್ಲ ಹೋಗುವವನು, ಅಲ್ಲಿ ಅಪ್ಪಂದಿರು ಸಿ.ಬಿ.ಐ. ನವರಿಗೆ ಕೊಟ್ಟರೆ ಅವರು ಹೋಗುತ್ತಾರೆ. ಭಾರತದೇಶದಲ್ಲಿ ಕುಳಿತಿದ್ದಾರೆ, ಅದಕ್ಕಾಗಿ ಸಂಸ್ಥೆ ಇದೆ, ಸಿಬಿಐ ತನಿಖೆಯ ಅವಶ್ಯಕತೆಗೆ ಮಹತ್ವ ಇದೆ. ಅಲ್ಲಿ ಹೋಗಿ ತನಿಖೆಯನ್ನು ಮಾಡುವುದಕ್ಕೆ ಇವತ್ತು ಸಿಓಡಿ ತನಿಖೆಯಿಂದ ಸಾಧ್ಯವಿಲ್ಲ, ಲೋಕಾಯುಕ್ತರಿಂದ ಸಾಧ್ಯವಿಲ್ಲ. ಇದು ಹೊರದೇಶಕ್ಕೆ ಹೋಗಿರುವಂತಹದ್ದು ಅಲ್ಲಿಂದಲೇ ಇದು ಎಷ್ಟು ಅನ್ಯಾಯವಾಗಿದೆ ಎಂದು ಕಂಡುಹಿಡಿಯಬೇಕಾಗಿರುವುದರಿಂದ ಇವತ್ತಿನ ದಿವಸ ಸಿಬಿಐ ತನಿಖೆಗೆ ಕೊಡಬೇಕು. ಇದರ ಜೊತೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗದಲ್ಲಿ ಅರಣ್ಯಾಧಿಕಾರಿಗಳ ಸಭೆಯಲ್ಲಿ ಈ ರಾಜ್ಯದಲ್ಲಿ ಅಕ್ರಮವಾದ ಗಣಿಗಾರಿಕೆಯು ನಡೆಯುತ್ತಿದೆ, ಬಳ್ಳಾರಿ ಆ ಕಡೆಯಲ್ಲಿ ಲೂಟಿ ನಡೆಯುತ್ತಿದೆ ನೀವು ಅಲ್ಲಿಗೆ ಹೋಗಿ ನೋಡುವುದನ್ನು ಬಿಟ್ಟು ಇಲ್ಲಿಗೆ ಬಂದು ಯಾವುದೋ ಕಟ್ಟುಕಥೆಯನ್ನು ಹೇಳುತ್ತಿದ್ದಿರಲ್ಲಾ ಎಂದು ಹೇಳುತ್ತಿರಿ.

ಈ ರಾಜ್ಯದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ. ಬಳ್ಳಾರಿ ಆ ಕಡೆ ಲೂಟಿ ನಡೆಯುತ್ತಿದೆ. ನೀವು ಹೋಗಿ ನೋಡುವುದನ್ನು ಬಿಟ್ಟು ಯಾವುದೋ ಕಟ್ಟಿಗೆಯದು ಹೇಳುತ್ತಿದ್ದಾರಲ್ಲ ಎಂದು ಹೇಳುವುದು. ಅಲ್ಲಿ ಜಿಂದಾಲ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಂದಾಲ್ ಏರ್‌ಪೋರ್ಟ್‌ನಲ್ಲಿ ಪತ್ರಿಕೆಯವರಿಗೆ, ಮಾಧ್ಯಮದವರಿಗೆ ಈ ರಾಜ್ಯದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ಈ ರಾಜ್ಯದಲ್ಲಿ ನಡೆಯುತ್ತಿಲ್ಲ ಎಂದು ಹೇಳಿಕೆ ಕೊಡುವುದು. ಇದನ್ನು ನೋಡಿದರೆ ಮಾನ್ಯ ಮುಖ್ಯ ಮಂತ್ರಿಗಳು ಎರಡೆರಡು ಹೇಳಿಕೆಗಳನ್ನು ಕೊಟ್ಟು ಈ ರಾಜ್ಯದ ಜನತೆಯನ್ನು ದಿಕ್ಕು ತಪ್ಪಿಸುವುದಾದರೆ ಇದು ಸರಿಯೇ ಎಂದು ನಾನು ಈ ಸಂದರ್ಭದಲ್ಲಿ ಈ ಸದನದಲ್ಲಿ ಪ್ರಶ್ನೆ ಮಾಡುತ್ತಿದ್ದೇನೆ. ಇಂಥ ಹೇಳಿಕೆಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಯಾವುದೇ ಕಾರಣಕ್ಕೂ ಕೊಡದೇ ಇವತ್ತು ಅವರೇ ಒಪ್ಪಿಕೊಂಡಂತೆ ಕಬ್ಬಿಣದ ಅದಿರು ಅಕ್ರಮವಾಗಿ ನನ್ನ ಕಾಲದಲ್ಲಿ ಸಾಗಾಣಿಕೆ ಆಗಿದೆ. ಐದು ಲಕ್ಷ ಟನ್ ಅದಿರು ಮಾಯವಾಗಿದೆ ನಿಜ, ನಾನು ಒಪ್ಪಿಕೊಂಡಿದ್ದೇನೆ, ಆ ಅಧಿಕಾರಿಗೆ ಬೋನಸ್ ಕೊಡುತ್ತೇನೆ ಎಂದ ಮೇಲೆ ಆ ಅಧಿಕಾರಿಗೆ ಪ್ರಶಸ್ತಿಯನ್ನು ಕೊಟ್ಟ ಮೇಲೆ ಇದಕ್ಕೆ ಇವರ ಹತ್ತಿರವೇ ಆ ಖಾತೆಯನ್ನು ಇಟ್ಟುಕೊಂಡು ಇವರ ಬಳಿಯೇ ಸರ್ಕಾರ ಇದ್ದು ಇವತ್ತಿನ ದಿವಸ ಇಂಥ ಅಕ್ರಮ ದಂಧೆ ನಡೆದಿದೆ ಎನ್ನುವುದಾದರೆ ಅದಕ್ಕೆ ನೈತಿಕ ಹೊಣೆಗಾರಿಕೆಯನ್ನು

ಯಾರು ಹೊರಬೇಕು ? ನಾವು ಹೊರಬೇಕೆ ? ಮುಖ್ಯಮಂತ್ರಿಗಳು ಹೊರಬಾರದೇ ? ಮುಖ್ಯಮಂತ್ರಿಗಳು ನೈತಿಕತೆಯಿಂದ ಇವತ್ತು ಈ ರಾಜ್ಯದಲ್ಲಿ ನಿಜವಾಗಲೂ ಅನೇಕ ಉದಾಹರಣೆಗಳಿವೆ, ಶ್ರೀ ರಾಮಕೃಷ್ಣ ಹೆಗಡೆಯವರು ನೈತಿಕ ಹೊಣೆಗಾರಿಕೆಯನ್ನು ಹೊತ್ತು ರಾಜೀನಾಮೆಯನ್ನು ಕೊಟ್ಟಿದ್ದನ್ನು ನಾವು ಕೇಳಿದ್ದೇವೆ. ಅದೇ ರೀತಿ ಇವತ್ತು ನೈತಿಕ ಹೊಣೆಯನ್ನು ಹೊತ್ತು ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕೆಂದು ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಜಯಚಂದ್ರರವರು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡುತ್ತಾರೆ. ನಾಳೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಇಲ್ಲ, ಇವತ್ತೇ ಮುಗಿಸಬೇಕು. ನಾಳೆ ಆಗುವುದಿಲ್ಲ.

ಶ್ರೀ ಬಂಡೆಪ್ಪ ಕಾಶಂಪುರ್ : ಮಾನ್ಯ ಅಶೋಕ್‌ರವರೇ ನಿಯಮ 60 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದರೆ ಒಂದು ದಿವಸದಲ್ಲೇ ಮುಗಿದುಹೋಗುತ್ತಿತ್ತು. ನಿಯಮ 69 ರಡಿಯಲ್ಲಿ ಅವಕಾಶ ಕೊಟ್ಟಿರುವುದರಿಂದ ಆರಾಮವಾಗಿ ಚರ್ಚೆ ನಡೆಯುತ್ತಿರಲಿ.

ಶ್ರೀ ಟಿ.ಬಿ. ಜಯಚಂದ್ರ (ಸಿರಾ) : ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತರು ರಾಜೀನಾಮೆ ಕೊಡತಕ್ಕಂಥ ಹಿನ್ನೆಲೆಯಲ್ಲಿ ವಿಧಾನಸಭೆ ಪ್ರಾರಂಭವಾದಾಗ ಅವರ ರಾಜೀನಾಮೆಯಿಂದ ಆಗಿರತಕ್ಕಂಥ ಬಿಕ್ಕಟ್ಟಿನ ವಿಚಾರದಲ್ಲಿ ಸದನದಲ್ಲಿ ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಪಟ್ಟೆವು. ನಿಯಮ 60 ರಡಿಯಲ್ಲಿ ಚರ್ಚೆ ಆಗಬೇಕೆಂಬುದು ನಮ್ಮ ಅಭಿಪ್ರಾಯ ಆಗಿತ್ತು ಅಭಿಲಾಷೆ ಆಗಿತ್ತು ಒತ್ತಾಯ ಕೂಡ ಆಗಿತ್ತು. ಆದರೆ ಸರ್ಕಾರ ಎಲ್ಲೋ ಒಂದು ಕಡೆ ನಿಯಮ 69 ರಡಿಯಲ್ಲಿ ಚರ್ಚೆಯಾಗಬೇಕೆಂಬ ಪಟ್ಟು ಹಿಡಿದ ಹಿನ್ನೆಲೆಯಲ್ಲಿ ನಮ್ಮ ಪ್ರತಿಭಟನೆ ಏನು ಎನ್ನತಕ್ಕಂಥದ್ದನ್ನು ತೋರಿಸಿ ನಂತರ ಇವತ್ತು ನಾವು ಚರ್ಚೆಗೆ ಪ್ರಾರಂಭ ಮಾಡಿದ್ದೇವೆ. ಈಗ ಮಾತನಾಡಬೇಕಾದಾಗ ನಮ್ಮ ನಾಯಕರು ಈಗಾಗಲೇ ಸಾಕಷ್ಟು ರೀತಿಯಲ್ಲಿ ಅಕ್ರಮ ಗಣಿಗಾರಿಕೆ ಬಗ್ಗೆ ...

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ನಿಮಗೆ ಒಂದು ಪತ್ರವನ್ನು ಬರೆದಿದ್ದಾರೆ ಹಾಗೂ ಕೌನ್ಸಿಲ್ ಛೇರ್ಮನ್‌ರವರಿಗೆ ಒಂದು ಪತ್ರವನ್ನು ಬರೆದಿದ್ದಾರೆ ಎಂದು ನಾನು ಪತ್ರಿಕೆಯಲ್ಲಿ ಓದಿದೆ. ಕೌನ್ಸಿಲ್‌ನಲ್ಲಿ ಪತ್ರ ಬಂದಿದೆ ಎಂದು ಹೇಳಿದ್ದಾರೆ. ನಿಮಗೂ ಬಂದಿರಬಹುದೆಂದು ಭಾವಿಸುತ್ತೇನೆ. ದಯಮಾಡಿ ಆ ಪತ್ರದಲ್ಲಿ ಮಾನ್ಯ ರಾಜ್ಯಪಾಲರು ಏನು ಬರೆದಿದ್ದಾರೆ ಅದನ್ನು ಸದನದ ಮುಂದೆ ಇಡಬೇಕೆಂದು ನನ್ನ

ಮನವಿ. ದಯಮಾಡಿ ಅದನ್ನು ಸದನದ ಮುಂದೆ ಇಡಿ.

ಅಧ್ಯಕ್ಷರು : ಹೌದು, ಮಾನ್ಯ ರಾಜ್ಯಪಾಲರ ಪತ್ರ ಬಂದಿದೆ. ನಾನು ಸದನದ ಮುಂದೆ ಇಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಸಿದ್ಧರಾಮಯ್ಯನವರು ಈಗಾಗಲೇ ಸಾಕಷ್ಟು ರೀತಿಯಲ್ಲಿ ವಿಧವಿಧವಾಗಿ ಅಕ್ರಮ ಗಣಿಗಾರಿಕೆ ಇರಬಹುದು, ಲೋಕಾಯುಕ್ತರ ರಾಜೀನಾಮೆಯ ವಿಚಾರದ ಹಿನ್ನೆಲೆಯಲ್ಲಿ ಎಲ್ಲಾ ವಿಚಾರವನ್ನು ಕೂಡ ಸರ್ಕಾರಕ್ಕೆ ಮನದಟ್ಟು ಮಾಡಲಿಕ್ಕೆ ಪ್ರಾಮಾಣಿಕವಾಗಿ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಹಾಗಾಗಿ ನಾನು ಮತ್ತೆ ಅದೇ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಲೋಕಾಯುಕ್ತರು ದಿನಾಂಕ : 23 ರಂದು ರಾಜೀನಾಮೆಯನ್ನು ಕೊಟ್ಟರು. ರಾಜೀನಾಮೆ ಕೊಡಬೇಕಾದಾಗ ಕೆಲವೇ ನಿರ್ದಿಷ್ಟವಾದಂಥ ಕಾರಣಗಳನ್ನು ಕೊಟ್ಟರು. ನನಗೆ ಸರ್ಕಾರದಿಂದ ಸಹಕಾರ ಸಿಗುತ್ತಿಲ್ಲ. ಎಲ್ಲೋ ಒಂದು ಕಡೆ ಮುಖ್ಯ ಮಂತ್ರಿಗಳ ಕಡೆಯಿಂದ ಪರೋಕ್ಷವಾಗಿ ಸಹಕಾರ ಸಿಗುತ್ತಿಲ್ಲ. ನಾನು ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಎಂದು ಹೇಳಿದರೆ ಅವರು ಬೇಡವೆಂದು ಹೇಳುತ್ತಾರೆ, ಮಾಡಿದವರನ್ನೇ ತಂದು ಹಾಕುತ್ತಾರೆ ಎಂಬ ವಿಚಾರವಿದೆ ಅದನ್ನೆ ಮತ್ತೆ ಮತ್ತೆ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಅದನ್ನು ಮಾಡಬೇಕಾದಾಗ ಎಲ್ಲಾ ಪತ್ರಿಕೆಯಲ್ಲಿ ಏನು ಬಂತು ರಾಜೀನಾಮೆಗೆ ಮುಖ್ಯವಾದ ಕಾರಣ ಸರ್ಕಾರವೇ. ಸರ್ಕಾರದ ಧೋರಣೆಯಿಂದಾಗಿ ರಾಜೀನಾಮೆ ಕೊಡತಕ್ಕಂಥ ಪರಿಸ್ಥಿತಿ ಬಂತು ಎನ್ನುವಂಥದ್ದು. ಹಾಗಾದರೆ ಲೋಕಾಯುಕ್ತರು ಯಾರು ಸ್ವಾಮಿ ? ಲೋಕಾಯುಕ್ತ ರಾಜ್ಯ ಸರ್ಕಾರ ಒಂದು ಕಾನೂನಿನ ಚೌಕಟ್ಟಿನಲ್ಲಿ ರಚಿಸಿದಂಥ ಒಂದು ಸಂಸ್ಥೆ. ನಾವು ಮಾಡಿರತಕ್ಕಂಥದ್ದು ಈ ದೇಶದಲ್ಲಿ, ಈ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ಹತ್ತಿಕ್ಕಬೇಕು, nepotism ಅನ್ನು ಹೊರ ತೆಗೆಯಬೇಕು. ಅದರ ಮೇಲೆ public servants ಯಾರೇ ಆಗಲಿ public servant ಅಂದರೆ, ಮುಖ್ಯಮಂತ್ರಿಗಳು ಸಹ public servant ಹಾಗೂ ಈ ರಾಜ್ಯದಲ್ಲಿ ಕೆಲಸ ಮಾಡತಕ್ಕಂಥ ಕಟ್ಟಕಡೆಯ ನೌಕರ ಕೂಡ public servant. ಅವರ ಮೇಲೆ action ತೆಗೆದುಕೊಳ್ಳಲಿಕ್ಕೆ ನಾವು ನಿಯಮಾವಳಿಗಳನ್ನು ಮಾಡಿದ್ದೇವೆ. ಆ ನಿಯಮಾವಳಿಗಳನ್ನು ಮಾಡಿದಂಥ ಸಂದರ್ಭದಲ್ಲಿ ಲೋಕಾಯುಕ್ತರ ವರದಿಯನ್ನು ಇಟ್ಟು ಚರ್ಚೆ ಮಾಡಬೇಕಾದಾಗ ನಾವು ಮಾಧ್ಯಮದಲ್ಲಿ ಬಂದಿರುವುದನ್ನು ಆಧರಿಸಿ Act ನಲ್ಲಿ ಏನಿದೆ ಎಂಬುದನ್ನು ಕೂಡ ನೋಡಬೇಕಾಗುತ್ತದೆ. ಬಹುಶಃ ಅಧ್ಯಕ್ಷರೇ, Lokayukta Act ಪ್ರಕಾರ ಲೋಕಾಯುಕ್ತದಲ್ಲಿರತಕ್ಕಂಥ ಅಧಿಕಾರ ಏನು ಎಂದು ಹೇಳಿದರೆ, "Lokayukta may investigate." investigate ಮಾಡತಕ್ಕಂಥ ಜವಾಬ್ದಾರಿಕೆ ಮಾತ್ರ ಅದರದು

ಅದನ್ನು Section 7 ರ ಪ್ರಕಾರ, Section 12 ರ ಪ್ರಕಾರ ಲೋಕಾಯುಕ್ತ ಕೊಟ್ಟಂಥ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದಾಗ ಸರ್ಕಾರ ಒಪ್ಪಬಹುದು, ಬಿಡಬಹುದು. ಸರ್ಕಾರ ಒಪ್ಪಿದರೆ ಅದೊಂದು ತರಹ. ಒಪ್ಪದಿದ್ದರೆ ಅದನ್ನು ಮೂರು ತಿಂಗಳುಗಳ ನಂತರ ಲೋಕಾಯುಕ್ತರು ರಾಜ್ಯಪಾಲರಿಗೆ ವರದಿ ಮಾಡಬೇಕು. ಇದು ಲೋಕಾಯುಕ್ತದಲ್ಲಿರತಕ್ಕಂಥ ಅಧಿಕಾರ ಅಷ್ಟೇ. ಈಗ ಅದನ್ನು ಏನು ಮಾಡಿದರು ? ಲೋಕಾಯುಕ್ತರು investigate ಮಾಡಿ ಅದನ್ನು ಯಾರ ಮುಂದೆ ಇಟ್ಟರು ಎಂದು ಹೇಳಿದರೆ ಅದನ್ನು ಸರ್ಕಾರದ ಮುಂದೆ ಇಟ್ಟರು. ಸರ್ಕಾರಕ್ಕೆ ವರದಿಯನ್ನು ಕೊಟ್ಟರು. ಸರ್ಕಾರಕ್ಕೆ ವರದಿಯನ್ನು ಕೊಟ್ಟಾಗ್ಯೂ ಕೂಡ ಯಾವುದೇ ತರಹವಾದ..

ಮಾನ್ಯ ಅಧ್ಯಕ್ಷರೇ ನೋಡಿ, ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಪ್ಲೀಸ್, ಪಾಟೀಲರೇ, ಏನು ? ಸದನದಲ್ಲಿ ನೀವು ನೀವೇ ಅಲ್ಲಿ ಚರ್ಚೆ ಮಾಡುವುದಾದರೆ ಸಭೆ ಏಕೆ ನಡೆಸುವುದು ? ಆಗಿನಿಂದ ನೋಡುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ಸಿ.ಸಿ. ಪಾಟೀಲರು ಪಾರ್ಲಿಮೆಂಟರಿ ಸೆಕ್ರೆಟರಿ ಆಗಿರುವವರು ನೀವು ಹೀಗೆ ಮಾಡಿದರೆ ಹೇಗೆ, ಬೇರೆ ವಿಷಯವಿದ್ದರೆ ಹೊರಗಡೆ ಹೋಗಿ ಮಾತನಾಡಿ ಸ್ವಾಮಿ. ನಮ್ಮ ಅಭ್ಯಂತರವಿಲ್ಲ.

ಅಧ್ಯಕ್ಷರು : ಆಯಿತು. ಇನ್ನು ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಸಿ.ಸಿ. ಪಾಟೀಲ್ : ರೋಷನ್‌ಬೇಗ್‌ರವರೇ, ಇನ್ನು ಸ್ವಲ್ಪ ದಿವಸದಲ್ಲಿ ಉತ್ತರವನ್ನು ನಿಮಗೂ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಲೋಕಾಯುಕ್ತ ವರದಿ ಅಂದ ಮೇಲೆ ಅದರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಇರುವುದು ಸರ್ಕಾರಕ್ಕೆ. ಇವತ್ತು ಚೆಂಡು ಯಾರ ಮುಂದೆ ಇದೆಯೆಂದರೆ ಸರ್ಕಾರದ ಮುಂದೆ ಇದೆ. ಅದು ಮುಖ್ಯವಾಗಿರತಕ್ಕಂಥ ವರದಿಯನ್ನು ಕೊಟ್ಟಿರುವಂಥದ್ದು. ಲೋಕಾಯುಕ್ತರು ಏನು ವರದಿಯನ್ನು ಕೊಟ್ಟರು ? ಅದರ ಶಿಫಾರಸ್ಸುಗಳೇನು ಎಂಬ ಬಗ್ಗೆ ನಾನು ಸೂಕ್ಷ್ಮವಾಗಿ ಮಾತ್ರ ಪ್ರಸ್ತಾಪ ಮಾಡಲಿಕ್ಕೆ ಹೋಗುತ್ತೇನೆ. "The report will comment on what has been noticed by me and by my team during the inspection of the areas visited by us. Though, the type of shortcomings, illegalities and irregularities are likely to be common in other areas also, the more detailed report in this regard to those areas and mines to which

no reference has been made in this report will be made separately. In the next report which would also be convered ..." ಎಂದು ಏನೋ ಹೇಳಿಕೊಂಡಿದ್ದಾರೆ. ಏನೆಂದರೆ ಈಗಾಗಲೇ ಕೆಲವನ್ನು ತಪಾಸಣೆ ಮಾಡಿ ಕೊಟ್ಟಿರತಕ್ಕಂಥ ವರದಿ ಅಂತಿಮ. ಆದರೆ, ಇನ್ನೂ ಕೆಲವು area ಗಳಲ್ಲಿ ಅವರು ತಪಾತಣೆ ಮಾಡುವುದಕ್ಕೆ ಆಗಿಲ್ಲ. ಅದಕ್ಕೆ ಬೇರೆ ವರದಿ ಕೊಟ್ಟಿದ್ದೇವೆ ಎಂದು ಹೇಳಿದರು. ಅಂದ ಹಾಗೆ ಕೊಟ್ಟಿರತಕ್ಕಂತಹ ವರದಿ ಏನೆಂದರೆ, action to be taken. ನೀವು action ಅನ್ನು investigate ಮಾಡಿಕೊಟ್ಟಿರತಕ್ಕಂತಹದ್ದನ್ನು action ತೆಗೆದುಕೊಳ್ಳುವುದಕ್ಕೋಸ್ಕರ ನಿಮಗೆ ಕಳುಹಿಸಿಕೊಟ್ಟರು. ಅದರಲ್ಲಿ ಒಂದಲ್ಲ, ಹತ್ತಾರು ವಿಚಾರಗಳಿದೆ. illegality and irregularity in the grant of leases. Mining leases ಅನ್ನು ಮಂಜೂರು ಮಾಡಿದ್ದಾರೆ. ಅದೆಲ್ಲದಕ್ಕಿಂತ ಮುಂಚಿತವಾಗಿ ನಾನು ಒಂದು ವಿಚಾರವನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. Mining ದಂಧೆ ಎನ್ನುವುದು ಇವತ್ತಿನಿಂದ ಅಲ್ಲ, ಮೊದಲಿನಿಂದಲೂ ಕೂಡ ಇದೆ. ಬಹಳ ವರ್ಷಗಳಿಂದಲೂ ಕೂಡ ಇದೆ. ನಮ್ಮಲ್ಲೂ ಕೂಡ ಸ್ಟೀಲ್ ಕಾರ್ಖಾನೆಗಳು ಸಾಕಷ್ಟು ಇವೆ. ಸಣ್ಣ ಮಟ್ಟದಲ್ಲಿ ಹಾಗೂ ದೊಡ್ಡ ಮಟ್ಟದಲ್ಲಿ ಇವೆ. ಆದರೆ, ಆ ಕಾರ್ಖಾನೆಗಳಿಗೋಸ್ಕರ Mining lease ಒಂದು bases. Mining lease ಗಳಿವೆ, ನಡೆಯುತ್ತಿವೆ. ಆದರೆ, mining leases ನಲ್ಲಿ ಅದಿರನ್ನು ತೆಗೆಯತಕ್ಕಂತಹ ಕೆಲಸವನ್ನು ಮಾಡಿದರೆ ಅದು illegal ಅಲ್ಲ Illegal ಎಂದರೆ ಯಾವುದು ಎಂದರೆ, mining lease ಅನ್ನು ತೋರಿಸುವುದು ಒಂದು lease. ಅದರಲ್ಲಿ permit ಅನ್ನು ಪಡೆಯತಕ್ಕಂತಹದ್ದು. ಆ mining lease ಕೆಲಸ ಮಾಡದೇ ಇದ್ದರೂ ಕೂಡ, ಅದರಲ್ಲಿ ಅದಿರು ಇಲ್ಲದಿದ್ದರೂ ಕೂಡ ಅದರ ಹೆಸರಿನಲ್ಲಿ ಸುಳ್ಳು permit ಅನ್ನು ಪಡೆದು, ಇವತ್ತು ವಿಶೇಷವಾಗಿ ನಾವು ಕಬ್ಬಿಣದ ಅದಿರನ್ನು ಕಾಣತಕ್ಕಂತಹದ್ದು ಅರಣ್ಯ ಪ್ರದೇಶದಲ್ಲಿ, ಅಲ್ಲಿಂದ ಇವತ್ತು ಇದನ್ನು ಸಾಗಾಣಿಕೆ ಮಾಡಿ, ಇವತ್ತು ಆ ದಂಧೆ ಆಗುತ್ತಿದೆ ಎನ್ನುವುದು ವಿಚಾರ. ಇದನ್ನು ಲೋಕಾಯುಕ್ತರು ಇವತ್ತು ವರದಿ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ, ಅವರು ಹೇಳಿರತಕ್ಕಂತಹ ಎಲ್ಲಾ ಮಾತುಗಳನ್ನು ಸಹ ನಾನು ಹೇಳುವುದಕ್ಕೆ ಹೋಗುವುದಿಲ್ಲ. 'There are cases where mining applications are made without even knowing the existence of the areas sought for the mining lease, the leases are sought only with a view to hold the mining leases and then to misuse the same by using the said document for doing illegal mining elsewhere. This type of non-verified grant of mining

leases gives raise to an illegal mining in gomal, forest and it also gives dispute between the lease holders.' ಇದು ಮುಖ್ಯವಾಗಿರತಕ್ಕಂಥಹದ್ದು ಏಕೆ illegal mining ಆಯಿತು ಎನ್ನುವುದಕ್ಕೆ ಒಂದು ದೊಡ್ಡ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ನಾನು ಎಲ್ಲದನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ವಿಶೇಷವಾಗಿ ಇವತ್ತು ಅರಣ್ಯದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಅಲ್ಲಿ ಹೇಗೆ ಗಣಿಗಾರಿಕೆ ನಡೆಯುತ್ತಿದೆ ಎನ್ನುವುದನ್ನು ನಾನು ಮುಂದೆ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. 'In many cases where the holder of a mining lease or even others who do not any mining lease indulge in mining in forest areas the officials concerned have have not taken any steps to prevent the illegal activities, such officials should be taken to task. I have also noticed apart from the illegal mining activities in forest area large extent of forest lands is also used for construction of roads and for dumping of the mineral waste. This especially happens when the mining leases are granted near the vicinity of the forest area' ಅದರ ಜೊತೆಗೆ ಲೋಕಾಯುಕ್ತರು ವರದಿ ಮಾಡಿರುವುದು, Grant of stockyard licenses. ಸ್ಟಾಕ್‌ಅನ್ನು ಮಾಡಿಕೊಳ್ಳುವುದಕ್ಕೋಸ್ಕರ licenses ಅನ್ನು ಕೊಟ್ಟಿದ್ದಾರೆ. ಅವರಿಗೆ ಕೊಡಬೇಕಾದಾಗ ಅದಿರು ಇದೆಯೋ ಅಥವಾ ಇಲ್ಲವೋ ಎಂದು ಯಾರಾದರೂ verify ಮಾಡಿದ್ದಾರಾ, ಮಾಡಿಲ್ಲ. Deputy Commissioner ಅಲ್ಲಿ ಒಂದು ಅರ್ಜಿ ಹಾಕುತ್ತಾರೆ. ಅರ್ಜಿ ಆಧಾರದ ಮೇಲೆ stock yard ಗೆ license ಕೊಡುತ್ತಾರೆ. stock yard ಗೆ Licednse ಕೊಟ್ಟು ಏನು ಮಾಡುತ್ತಾರೆ ಎಂದರೆ, ಅರಣ್ಯದಲ್ಲಿ ಇರತಕ್ಕಂತಹ ಮಾಲನ್ನು ಇವತ್ತು stock yard ಗೆ ತಂದು ಹಾಕಿ ಅದನ್ನು ಯಾವುದೋ ಬೇರೆ permit ನಿಂದ ಇವತ್ತು sale ಮಾಡುವುದು. ಅದಕ್ಕೆ ಆ yard licenses ಅನ್ನು cancel ಮಾಡಿ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಜೊತೆಗೆ ಯಾವ್ಯಾವುದು ಎಂದು ಹೇಳಿದ್ದಾರೆ. Lakshmi Minerals, Muneer Enterprises, Kinetha Minerals, Krishna Minerals ಇವರೆಲ್ಲರದೂ ಕೂಡ ನಾನು details ಕೊಡುವುದಕ್ಕೆ ಹೋಗುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಬಹುಶಃ ಇವತ್ತು ಅಕ್ರಮ ಗಣಿಗಾರಿಕೆ ವಿಚಾರವನ್ನು ನಾವು ಬೇರೆ ನಿಯಮದಡಿಯಲ್ಲಿ ಪ್ರಸ್ತಾಪ ಮಾಡಬೇಕೆಂದು ಇದ್ದೆವು. ಆದರೆ, ಲೋಕಾಯುಕ್ತರು ಕೊಟ್ಟಿರತಕ್ಕಂತಹ ರಾಜೀನಾಮೆ ಹಿನ್ನೆಲೆಯಲ್ಲಿ ಅದು

ಮುಖ್ಯವಾದಂತಹ ಕಾರಣವಾಗಿರುವುದರಿಂದ ಪ್ರಸ್ತಾಪ ಮಾಡುತ್ತೇವೆ. ಅದರ details ಗೆ ಹೋಗುವುದಾದರೆ ಸಾಕಷ್ಟು ರೀತಿಯಲ್ಲಿ ನಾವು ಚರ್ಚೆ ಮಾಡುವುದಕ್ಕೆ ಅವಕಾಶವಿದೆ. Illegality in transportation of minerals, ಅದರಿಂದ ಪರಿಸರಕ್ಕೆ ಏನು ಹಾನಿಯಾಗಿದೆ, ರಸ್ತೆಗಳು ಏನಾಗಿದೆ, ಹತ್ತಿರವಿರುವ ಹಳ್ಳಿಗಳ ಸ್ಥಿತಿಗತಿಗಳು ಏನಾಗಿದೆ ಎನ್ನುವುದನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲ. ಅನುಭವಿಸುತ್ತಾ ಇರತಕ್ಕಂತಹ ಜನಗಳಿಗೆ ಗೊತ್ತೇ ವಿನಃ ಬೇರೆ ಯಾರಿಗೂ ಗೊತ್ತಿಲ್ಲ. ಅದನ್ನು ಸಂಕ್ಷಿಪ್ತವಾಗಿ, ಸಂಪೂರ್ಣವಾಗಿ ಪರಿಶೀಲನೆ ಮಾಡಿ ಲೋಕಾಯುಕ್ತರು ವರದಿ ಮಾಡಿದ್ದಾರೆ. ಏನು ಸಲಹೆ ಕೊಟ್ಟಿದ್ದಾರೆ ಎಂದರೆ, 'Introduction of new transport permit system' ಹೊಸದಾಗಿ permit ಗಳನ್ನು ನೀವು ಮಾಡಿ ಎಂದು ಕೊಟ್ಟಿದ್ದಾರೆ. permit ಗಳನ್ನು ಕೊಡಬೇಕಾದಾಗ ಇದನ್ನು ಯಾವಾಗ ಕೊಟ್ಟಿರುವುದು ಎಂದರೆ, ಈಗಾಗಲೇ ವರದಿ ಕೊಟ್ಟು ಒಂದು ವರ್ಷ ಏಳು ತಿಂಗಳುಗಳಾಯಿತು. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಅವರು ಕೊಟ್ಟಿರತಕ್ಕಂತಹ ವರದಿಯಲ್ಲಿ ಏನಾದರೂ ಸ್ವಲ್ಪಮಟ್ಟಿಗೆ ನೀವು ಸಚಿವ ಸಂಪುಟದ ಸಹೋದ್ಯೋಗಿಗಳು, ಇಲಾಖೆಯವರು ಪರಿಶೀಲನೆ ಮಾಡಿದ್ದರೆ ಬಹುಶಃ ಇವತ್ತು ಚರ್ಚೆ ಮಾಡತಕ್ಕಂತಹ ಸಂದರ್ಭ ಬರುತ್ತಿರಲಿಲ್ಲ. ಸಾವಿರಾರು ಟನ್ fake permit ಗಳು ಇವತ್ತು ಬರುತ್ತಿದೆ. fake permit ಗಳು ಹೇಗೆ ಬರುತ್ತದೆ ಎನ್ನುವುದನ್ನು ಮುಂದೆ ನಾನು ಬೇಲೇಕೇರೆ ವಿಷಯ ಬಂದಾಗ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಅದಕ್ಕೆ ಲೋಕಾಯುಕ್ತರು recommendation ಮಾಡುತ್ತಾರೆ. 'I recommend the necessary steps to be taken to the Government to move the court for vacation of the stay order and introduced full prood to permit system' Court ಗೆ ಹೋಗಿ ಎಲ್ಲಾ stay ತರುತ್ತಾರೆ. ಕೋರ್ಟ್‌ಗೆ ಹೋಗಿ ಏನಾದರೂ ಸ್ಟೇ vacate ಮಾಡುವುದಕ್ಕೆ ಏನು action ತೆಗೆದುಕೊಂಡಿದ್ದೇವೆ. ಎಂದರೆ ಏನೇನು action ತೆಗೆದುಕೊಂಡಿಲ್ಲ. ಇವತ್ತು ಒಂದು ಮುಖ್ಯವಾದ ವಿಚಾರ ಎಂದರೆ, 'Economics of mining in Karnataka', ಅದು ಒಂದು ಮುಖ್ಯವಾಗಿರುವುದು. ಈ ರಾಜ್ಯದಲ್ಲಿರತಕ್ಕಂತಹ ಅದಿರು ಅವರು ಅಂದಾಜು ಮಾಡಿರುವ ಪ್ರಕಾರ ಸುಮಾರು 30-40 ವರ್ಷ ಬರಬಹುದು. ಅದರ ಮೇಲೆ ಅದಿರು ಇರುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಅವರ ಅಂಕಿ-ಅಂಶ ಆಧಾರಗಳನ್ನು ನೋಡಿ ಆ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಾಗಿದೆ ಎನ್ನುವುದನ್ನು ನಾನು ಹೇಳುತ್ತೇನೆ. ಆದರೆ, ಇಷ್ಟು ಕಡಿಮೆ ಇರತಕ್ಕಂತಹ ನಮ್ಮ ಅದಿರನ್ನು ನಮ್ಮಲ್ಲೇ ಇರತಕ್ಕಂತಹ ಕೈಗಾರಿಕೆಗಳು, ನಮ್ಮಲ್ಲಿ ಸಾಕಷ್ಟು ರೀತಿಯಲ್ಲಿ ಕೈಗಾರಿಕೆಗಳು ಬಂದಿವೆ. ಆ ಕೈಗಾರಿಕೆಗಳಿಗೆ value

addition ಗೋಸ್ಕರ ಇವತ್ತು ಅದಿರನ್ನು ಶೇಖರಿಸಿಡಬೇಕು, ಸಂಗ್ರಹಿಸಿಡಬೇಕು. ಅವರಿಗೋಸ್ಕರ ಮೀಸಲಿಡಬೇಕು ಎನ್ನುವ ತೀರ್ಮಾನ. ಅದಕ್ಕೆ ಇವತ್ತು ಒಂದು ಪಾಲಿಸಿಯನ್ನು ಕೂಡ ತಂದಿದ್ದೀರಿ. ಆ ಪಾಲಿಸಿಯಡಿಯಲ್ಲಿ value addition ಗೆ ಒತ್ತನ್ನು ಕೊಡಬೇಕು ಎನ್ನುವ ಮಾತನ್ನು ನೀವು ಹೇಳುತ್ತಿದ್ದೀರಿ. ನಾನು ಅದನ್ನು ಒಪ್ಪುತ್ತೇನೆ, ನಾನು ಅದನ್ನು ಸ್ವಾಗತಿಸುತ್ತೇನೆ. ಆದರೆ, value addition ಗೆ ನೀವು ಆ ದಿಸೆಯಲ್ಲಿ ಎಷ್ಟರಮಟ್ಟಿಗೆ action ಅನ್ನು ತೆಗೆದುಕೊಂಡಿದ್ದೀರಿ ? ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮೊನ್ನೆ investors meet ಆಯಿತು. ಬಹಳ ಚೆನ್ನಾಗಿ ಆಯಿತು. ನಾನು ಕೂಡ ಅಲ್ಲಿ ಒಂದು ಗಂಟೆ ಬಂದು ಏನು ನಡೆಯಿತ್ತಿದೆ ಎಂದು ನೋಡಿದೆ. ಪತ್ರಿಕೆ ವರದಿಯಲ್ಲಿನ ನನ್ನ ಹತ್ತಿರ ಇವರು ಮಾಹಿತಿ ಪ್ರಕಾರ ನಮ್ಮ ರಾಜ್ಯಕ್ಕೆ investment ಗೆ ಬರದೇ ಇರುವವರು ಯಾರು ಎಂದರೆ, ಕೇವಲ mining ನಲ್ಲಿ, cement ನಲ್ಲಿ, ಇದ್ದಾರೆ. ಬೇರೆಯದರಲ್ಲಿ ಇಲ್ಲವೆಂದು ಅಲ್ಲ. ಆದರೆ, ಬಹುತೇಕ ಸುಮಾರು 4 ಲಕ್ಷ 69 ಸಾವಿರ ಕೋಟಿ ರೂ.ಗಳು ಎಂದು ಏನು ಹೇಳಿದ್ದೀರಿ, ಅದಕ್ಕೆ ಸರಿಸುಮಾರು 3 ಲಕ್ಷ ಕೋಟಿ ರೂ.ಗಳು mining sector ನಲ್ಲಿ ಬಂದಿದೆ. ಎಲ್ಲಿಂದಲೋ ಆರ್ಸೆಲ್ಲಾರ್ ಬರುತ್ತಾರೆ. ಮಿತ್ತೆಲ್ ಬರುತ್ತಾರೆ. ಬೇರೆ ಬೇರೆಯವರು ಎಲ್ಲರೂ ಬರುತ್ತಿದ್ದಾರೆ. ಅವರು ನಮ್ಮಲ್ಲಿರತಕ್ಕಂತಹ ಅದಿರನ ಮೇಲೆ ಕಣ್ಣಿಟ್ಟು ಬರುತ್ತಿದ್ದಾರೆ. ಅವರು ಎಷ್ಟರಮಟ್ಟಿಗೆ ಕೈಗಾರಿಕೆಗಳನ್ನು ಮಾಡುತ್ತಾರೆ ಎನ್ನುವ ಬಗ್ಗೆ ಎಚ್ಚರಿಕೆ ನಿಮ್ಮ ಕೈಯಲ್ಲಿರಲಿ ಎನ್ನುವ ಮಾತನ್ನು ಹೇಳುವುದಕ್ಕೋಸ್ಕರ ಇವತ್ತು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಕರ್ನಾಟಕದಲ್ಲಿರತಕ್ಕಂತಹ ಅದಿರಿನ ಬಗ್ಗೆ ಎಲ್ಲರಿಗೂ ಏಕೆ ಇಷ್ಟೊಂದು ಕಣ್ಣು ಇದೆ ಎಂದರೆ, ಇಡೀ ಪ್ರಪಂಚದಲ್ಲಿ ಕಬ್ಬಿಣದ ಅದಿರು ಸಿಗುವುದು ಕೆಲವೇ ದೇಶಗಳಲ್ಲಿ ಮಾತ್ರ. ಈ ದೇಶದಲ್ಲಿ ಎಲ್ಲಿ ಎಂದರೆ, ಕರ್ನಾಟಕ, ಛತ್ತೀಸ್‌ಘಡ ಮತ್ತು ಉತ್ತರ ಕಡೆಯ ಇನ್ನೊಂದೆರಡು ರಾಜ್ಯಗಳಲ್ಲಿ ಬಿಟ್ಟರೆ ಬೇರೆ ಎಲ್ಲಿಯೂ ಸಿಗುತ್ತಿಲ್ಲ. 65 ಗ್ರೇಡ್ ಹೆಚ್ಚಿಗೆ ಸಿಗುವಂಥದ್ದು ಬಹುಶಃ ಕರ್ನಾಟಕದಲ್ಲೇ ಮೊದಲು, ಆ ಕಾರಣಕ್ಕೋಸ್ಕರ, ನಮ್ಮ ಗ್ರೇಡ್ ನೋಡಿ ಇವತ್ತು ಎಲ್ಲರೂ ಬರುತ್ತಿದ್ದಾರೆ. ಇದನ್ನು ನಾವು value addition ಮಾಡಬೇಕು. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾದರೆ ಅದಕ್ಕೆ leases ಅನ್ನು ಕೊಡಿ. ಕೈಗಾರಿಕೆಗಳು ಬರಲಿ, ಅದನ್ನು ನಾನು ಒಪ್ಪುತ್ತೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳೆ, ತಾವು ಅಧಿಕಾರಕ್ಕೆ ಬಂದಾಗ, ನಾವು ಬೆಳಗಾಂನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆವು, ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ನನ್ನ ಕಾಲದಲ್ಲಿ ಒಂದೇ ಒಂದೂ lease ಅನ್ನು ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದಿರಿ. ಕೊಡಬಾರದೆಂದು ಎಲ್ಲಿಯೂ ಇಲ್ಲ. ಆದರೆ ನೀವು lease ಕೊಟ್ಟಿರುವುದು ಯಾರಿಗೆ? ನೂರಾರು leases renewal ಮಾಡಿದಿರಿ. ಆದರೆ ಕೈಗಾರಿಕೆಗಳಿಗೆ ಎಷ್ಟು ಕೊಟ್ಟಿದ್ದೀರಿ ? ನನಗೆ ಗೊತ್ತಿರುವ

ಪ್ರಕಾರ 4–5, 10 ಕೈಗಾರಿಕೆಗಳಿಗೆ ಕೊಟ್ಟಿರಬಹುದು, ಆದರೆ ನೀವು ಎಲ್ಲೋ ಒಂದು ಕಡೆ renewal ಮಾಡಬೇಕಾದಾಗ ಅದನ್ನು stop ಮಾಡಿ, ಕೈಗಾರಿಕೆ ಮಾಡಿ ಅವರಿಗೆ ಮಾತ್ರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರೆ ಕೈಗಾರಿಕೆಗಳಿಗೆ ಉತ್ತೇಜನ ಸಿಗುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ (ಸನ್ಮಾನ್ಯ ಮುಖ್ಯಮಂತ್ರಿಗಳು) : ಒಂದು ಅಂಶವನ್ನು ಗಮನಿಸಬೇಕಾಗುತ್ತದೆ. ನಾನು ಬಂದ ಮೂರ್ನಾಲ್ಕು ತಿಂಗಳಿಗೆ ಈ ಗಣಿಗಾರಿಕೆ ಬಗ್ಗೆ Value added ಗೆ ಮಾತ್ರ ನಾನು ಕೊಡುವಂಥದ್ದು, export ಗೆ ಕೊಡುವುದಿಲ್ಲ ಎಂದು ತೀರ್ಮಾನ ತೆಗೆದುಕೊಂಡಿದ್ದೆ, ಯಾವುದು ಕೇಂದ್ರದಿಂದ ಈಗಾಗಲೇ ಅನುಮತಿ ಕೊಟ್ಟು, renewal ಗೆ ಬರುತ್ತದೆ ಅದನ್ನು ತಡೆಯುವಂಥ ಅಧಿಕಾರ ನನಗೆ ಇಲ್ಲ. ದಯಮಾಡಿ ಕೇಳಿ. ತಕ್ಷಣ ಅವರು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಾರೆ. ಇಡೀ ದೇಶದಲ್ಲಿ ಈಗಿರುವಂಥ ಕೇಂದ್ರದ ನಿಯಮಾವಳಿಗಳ ಪ್ರಕಾರ ನಾನು ಅದನ್ನು ತಡೆಯುವುದಕ್ಕೆ ಬರುವುದಿಲ್ಲ. ಆದರೆ ನಾನು ಏನು ಮಾಡಿದೆಯೆಂದರೆ, ಅಧಿಕಾರಕ್ಕೆ ಬಂದ ಮೇಲೆ ಕಾನೂನು ಚೌಕಟ್ಟಿನಲ್ಲಿ ಹೌದೋ ಇಲ್ಲವೋ ಗೊತ್ತಿಲ್ಲ, ಅದರಲ್ಲಿ ಯಾವ ಕಾರಣಕ್ಕೂ ಸಹಾ Value Added ಬಿಟ್ಟು ಬೇರೆಯವರಿಗೆ ಅನುಮತಿ ಕೊಡುವುದಿಲ್ಲವೆಂದು ರೆಕಾರ್ಡ್ ಮಾಡಿ, ಇಲ್ಲಿಯ ಕೈಗಾರಿಕೆಗಳಿಗೆ supply ಮಾಡಿದರೆ ಮಾತ್ರ ಅದು ಜಾರಿಗೆ ಬರುತ್ತದೆ ಎಂದು condition ಹಾಕಿ ನಾನು license ಕೊಟ್ಟಿದ್ದೇನೆ. ಬೇರೆ ಯಾರಿಗೂ ಕೊಟ್ಟಿಲ್ಲ. ಇದು ಮೊದಲನೆಯದು. ಎರಡನೆಯದು ಮಾನ್ಯ ಜಯಚಂದ್ರರವರೆ, ಇದು ಗಂಭೀರವಾಗಿ ಲೋಕಸಭೆಯಲ್ಲಿಯೂ ಚರ್ಚೆಯಾಗಬೇಕು. At least, ಇದು ಸರಿಯೋ ತಪ್ಪೋ, ಇವತ್ತು ಇಷ್ಟೊಂದು ಸುದೀರ್ಘವಾಗಿ ಕರ್ನಾಟಕದಲ್ಲಿ ಚರ್ಚೆಯಾಗುತ್ತಿರಬೇಕಾದರೆ, ನಮ್ಮ ಖನಿಜ ಸಂಪತ್ತುಗಳನ್ನು ಉಳಿಸುವುದಕ್ಕೋಸ್ಕರವಾದರೂ, ನಾವು ಒತ್ತಾಯವನ್ನು ತಂದು Parliament ನಲ್ಲಿ ಸ್ವಲ್ಪ debate ಮಾಡಿ, export ಅನ್ನು ನಿಲ್ಲಿಸಿದರೆ ಬಹಳ ದೊಡ್ಡ ಲಾಭವಾಗುತ್ತದೆ. ಮೂರನೆಯದು, ಮೊನ್ನೆ ನಡೆದಂಥ Global Investors Meet ಬಗ್ಗೆ ಹೇಳುವುದಾದರೆ, ಈ ತರಹ ಆ field ನಲ್ಲಿರುವಂಥ ಅತ್ಯುತ್ತಮರಾದವರು ಬೆಂಗಳೂರಿಗೆ ಏಕೆ ಬಂದರು, ಕರ್ನಾಟಕಕ್ಕೆ ಏಕೆ ಬಂದರು, ಬಳ್ಳಾರಿಗೆ ಏಕೆ ಹೋಗುತ್ತಿದ್ದಾರೆಂದರೆ, ಇಲ್ಲಿ ನೀವು ಹೇಳಿದಂತೆ rich iron ore ಸಿಗುತ್ತದೆ ಮತ್ತೆ ಇನ್ನು ಮುಂದೆ ಅದು export ಆಗುವುದಿಲ್ಲ. ಅದಕ್ಕಾಗಿ ನಾವು ಇಲ್ಲೇ ಕೈಗಾರಿಕೆ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಅವರೆಲ್ಲರೂ ಬಂದಿದ್ದಾರೆ ಅದಕ್ಕಾಗಿ ಅವರಿಗೆ ಬೇಕಾಗುವ ಎಲ್ಲಾ ಅನುಕೂಲಗಳನ್ನು ನಾವು ಮಾಡಿಕೊಡುತ್ತಿದ್ದೇವೆ. The process already on. ಇನ್ನು ನಮ್ಮ factory ಗಳು, ಇಂತಹವು ಏನಿವೆ ವ್ಯವಸ್ಥಿತವಾಗಿ ಅವರು ಕೊಡಲಿಲ್ಲ. ಬೇರೆಯವರು ಏನಿದ್ದರೂ ಅವರು ಹೈಕೋರ್ಟ್, ಸುಪ್ರೀಂಕೋರ್ಟ್‌ವರೆಗೂ

ಹೋಗಿ ಅವರಿಗೆ ಕೊಡಿಸದಂತೆ ಮಾಡಿಸುತ್ತಿದ್ದರು. ಈಗ ನಾನು ಸ್ಪಷ್ಟ ನಿಲುವು ತೆಗೆದುಕೊಂಡಿದ್ದೇನೆ. ಅದು ಭದ್ರಾವತಿಯಿಂದ ಹಿಡಿದು ಯಾವುದೇ ನಮ್ಮ industries ಇರಬಹುದು, ಅದಕ್ಕೆ license ಕೊಡಬೇಕು, ಗಣಿಗಾರಿಕೆಗೆ ಆದ್ಯತೆ ಕೊಡಬೇಕೆಂದು ಮಾಡಿದ್ದೇನೆ. ಅದನ್ನು ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳೆ, ತಮ್ಮ ಕಳಕಳಿಯನ್ನು, ಉದ್ದೇಶವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಕೆಲವು ಎಚ್ಚರಿಕೆ ಮಾತುಗಳನ್ನು ಹೇಳಬೇಕಾಗುತ್ತದೆ ಏಕೆಂದರೆ, ನಮ್ಮಲ್ಲಿ ಒಳ್ಳೆಯ ಗ್ರೇಡ್ material ಇರುವುದರಿಂದ ಇವತ್ತು ಬೇರೆ ಬೇರೆ ಕಡೆಗಳಿಂದಲೂ ಜನರು ಬರುತ್ತಾರೆ. ಆದರೆ ಅವರು ನಿಜವಾಗಿಯೂ ಕೈಗಾರಿಕೆಗಳನ್ನು ಮಾಡುತ್ತಾರೋ ಇಲ್ಲವೋ ಎನ್ನುವ ದೃಷ್ಟಿ ಇಡಬೇಕು. ಅದಕ್ಕಿಂಥ ಮುಖ್ಯವಾಗಿ rich material ಇರುವಂಥದ್ದು ಮೂರೇ ಜಿಲ್ಲೆಗಳಲ್ಲಿ, ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು. ನನ್ನ ಹಳೆ ಕ್ಷೇತ್ರದಲ್ಲಿಯೂ ಕೂಡ ವ್ಯಾಪಕವಾಗಿ ಇರುವಂಥ mines ಇದೆ. Mines ನ ದಂಧೆ ನಡೆಯುತ್ತದೆ. ಆ ಹಿನ್ನಲೆಯಲ್ಲಿ ನಾನು ಇವತ್ತು ಮಾತನಾಡುತ್ತಿದ್ದೇನೆ ವಿನಹಃ ನಾನು ಇವತ್ತು ಬೇರೆಯದಕ್ಕಿಂಥ ನನ್ನ ಅನುಭವದ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಚಿಕ್ಕನಾಯಕನಹಳ್ಳಿಗೆ ಬನ್ನಿ ಸ್ವಾಮಿ, ಚಿಕ್ಕನಾಯಕನಹಳ್ಳಿಯಲ್ಲಿ ಎಂತಹ ಪರಿಸರ ಇತ್ತು ಎಂತಹ ವಾತಾವರಣ ಇತ್ತು, ತೀ.ನಂ. ಶ್ರೀಕಂಠಯ್ಯನವರ ಊರು, ತೀ.ನಂ. ಶ್ರೀಕಂಠಯ್ಯನವರ ಊರಿಗೆ ಏನಾದರೂ ಹೋಗಿಬಿಟ್ಟರೆ ನಮಗೆ ಬಹಳ ಬೇಸರವಾಗುತ್ತದೆ. ಅಲ್ಲಿ ಗುಡ್ಡಗಳೆಲ್ಲಾ ನಿರ್ನಾಮವಾಗಿಬಿಟ್ಟಿವೆ. ಊರಿಗೆ ಹೋಗುವುದಕ್ಕೇ ದಾರಿಯಿಲ್ಲ. ಒಂದು ರೀತಿಯಲ್ಲಿ ಹೇಳಬೇಕೆಂದರೆ, ಆ ಗುಡ್ಡಗಳು ಯಾವ ರೀತಿ ಇದ್ದವು ಎಂದರೆ, ಹಸಿರು ಕ್ರಾಂತಿಯನ್ನು ಬೀರುವಂತಹ ರೀತಿಯಲ್ಲಿ ಇದ್ದಂಥ ಗುಡ್ಡಗಳು ಈಗ ಒಂದು ರೀತಿಯಲ್ಲಿ ಹೇಗೆ ಕಾಣುತ್ತಿವೆ ಎಂದರೆ, ತೊನ್ನು ಹತ್ತಿರುವ ನಾಯಿಯಂತೆ ಕಾಣುತ್ತವೆ. ಇದು ಪರಿಸ್ಥಿತಿ ಇರತಕ್ಕಂಥದ್ದು. ಆ ಹಿನ್ನೆಲೆಯಲ್ಲಿ ಪರಿಸರಕ್ಕೆ ಏನು ಹಾನಿಯಾಗಿದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ಒಪ್ಪುತ್ತೇನೆ. ಇವತ್ತು Value Addition ಗೆ ಸ್ಥಳೀಯವಾಗಿರತಕ್ಕಂಥ ಕೈಗಾರಿಕೆಗಳಿಗೆ, ನಾನು ಇನ್ನೊಂದು ಮುಖ್ಯವಾದ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನನ್ನ ಮತ ಕ್ಷೇತ್ರದಲ್ಲಿಯೂ ಒಂದು ಕೈಗಾರಿಕೆ ಇದೆ. ಏಕೆಂದರೆ ತಾವು ವಿದ್ಯುಚ್ಛಕ್ತಿಗೋಸ್ಕರ ಬಹಳ ಮಾತನಾಡುತ್ತಿದ್ದೀರಿ. ಇವತ್ತು ಒಂದು technology ಇದೆ. ಬಹುಶಃ ಈ ದೇಶದಲ್ಲಿ ಯಾರೂ ಆ technology ತಂದಿಲ್ಲ. ನನ್ನ ಮತ ಕ್ಷೇತ್ರದಲ್ಲಿರುವಂಥ ಒಂದು ಕೈಗಾರಿಕೆ, ಏನು ಪರಿಸರಕ್ಕೆ ಹೋಗುತ್ತಿದ್ದ heat ಅನ್ನು convert ಮಾಡಿ ಅದರಲ್ಲಿ electricity ಮಾಡುತ್ತಿದ್ದಾರೆ, 10 ಮೆಗಾ ವ್ಯಾಟ್ ವಿದ್ಯುಚ್ಛಕ್ತಿಯನ್ನು ತಯಾರು

ಮಾಡಿ ನಿಮಗೆ ಕೊಡುತ್ತಿದ್ದಾರೆ. ಆರು ತಿಂಗಳಿನಿಂದ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ. ಅವರಿಗೆ ಇನ್ನೂ ನೀವು Power Purchase Agreement ಮಾಡಲಿಲ್ಲ. ನಾವು ಏಕಾದರೂ ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದೆವೋ ಎಂದು ಕುಳಿತಿದ್ದಾರೆ. ನಿಮಗೆ supply ಮಾಡಿದ್ದಾರೆ. ಅವರಿಗೆ ಬೇಕಾದಂತಹ ವಿದ್ಯುಚ್ಛಕ್ತಿಯನ್ನು ಮಾಡಿಕೊಂಡು, captive unit ಆಗಿ ಬಳಸಿಕೊಂಡು K.E.B. ಗೆ ಕೊಡುತ್ತಿದ್ದಾರೆ. ಬಹುಶಃ ಈ technology ಅನ್ನು ಯಾವ industries ಮಾಡಲಿಲ್ಲ. ಅದನ್ನು ನನ್ನ ಮತಕ್ಷೇತ್ರದಲ್ಲಿರತಕ್ಕಂಥ ಕೈಗಾರಿಕೆಗಳವರು ಮಾಡಿದ್ದಾರೆ. ಅದನ್ನು ನೋಡಿದರೆ ನಿಜವಾಗಿಯೂ ಕೂಡ ಆಶ್ಚರ್ಯವಾಗುತ್ತದೆ. ಎಲ್ಲಾ ಕೈಗಾರಿಕೆಗಳು ಈ technology ಯನ್ನೇ adopt ಮಾಡಿಕೊಳ್ಳಿ ಎಂದು ಏಕೆ ತಾವು ಯೋಚನೆ ಮಾಡಬಾರದು ? ಇದರಿಂದ ವಿದ್ಯುಚ್ಛಕ್ತಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ನಾನೂ ಕೂಡ ಇವತ್ತು ಕೈಗಾರಿಕೆಗಳ ಹತ್ತಿರ ಮಾತನಾಡಿದ ಪ್ರಕಾರ, ಒಂದು ಸಾವಿರ ಮೆಗಾ ವ್ಯಾಟ್‌ಗೂ ಹೆಚ್ಚು ವಿದ್ಯುತ್‌ಅನ್ನು ಈ ರೀತಿ ಮಾಡುವುದಕ್ಕೆ ಸಾಧ್ಯವಿದೆ. ಅದರ ಬಂಡವಾಳವನ್ನು ಅವರು ಹಾಕಲಿ, ಅದನ್ನು ತಯಾರು ಮಾಡಲಿ, ಏಕೆ ಇಂತಹ Technologies ಅನ್ನು ತರಬಾರದು ? ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿರುವುದೇನೆಂದರೆ, ಈ ದೃಷ್ಟಿಯಲ್ಲಿ ತಾವು ಯೋಚನೆ ಮಾಡಿ. inutiactivities ವಿದ್ಯುಚ್ಛಕ್ತಿಗೆ ಸಹಾಯವಾಗುವಂಥದ್ದು, ಅದರ ಕಡೆಗೆ ನಿಮ್ಮ ಗಮನವಿರಲಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಇನ್ನೊಂದು, ಸಾಮಾಜಿಕವಾಗಿ ಯಾವ ರೀತಿ ಅನಾಹುತವಾಗಿದೆ ಎಂದರೆ, mines ಎನ್ನುವಂಥ ಒಂದು ದಂಧೆ, ಹಳ್ಳಿಗಳಲ್ಲಿಯೂ ಕೂಡ ಅದರ ಒಂದೊಂದು ದಂಧೆ ಶುರುವಾಗುತ್ತಿದೆ. ಹಳ್ಳಿಗಳಲ್ಲಿ ಉದ್ಯೋಗ ಮಾಡತಕ್ಕಂಥವರು ಎಲ್ಲರೂ ಬಿಟ್ಟು, ಎಲ್ಲರೂ ಕೂಡ ಈ transportation ನಲ್ಲಿ involve ಆಗಿರುವಂಥವರು. ಇವತ್ತು goondaism ಜಾಸ್ತಿಯಾಗಿದೆ. ಎಲ್ಲೆಲ್ಲ goondaism ಇದೆ ? ಇಂತಹ ಕಡೆ ಇದೆ ಎನ್ನುವುದಲ್ಲ. ನಮ್ಮ ಕಡೆಯಲ್ಲೇ ಇದೆ ಎಂದರೆ ಬಳ್ಳಾರಿ ಪರಿಸ್ಥಿತಿ ಹೇಳುವುದಕ್ಕಾಗುವುದಿಲ್ಲ. ಬಳ್ಳಾರಿಯಲ್ಲಿ ಎಷ್ಟರಮಟ್ಟಿಗೆ goondaism ಇದೆ ಎನ್ನುವುದನ್ನುತಾವು ಅರ್ಥ ಮಾಡಿಕೊಳ್ಳಬೇಕು. ಇದು mining ನಿಂದ ಸಾಮಾಜಿಕವಾಗಿ ಆಗಿರುವ ಪರಿಣಾಮ. Illegal transportation, Illegal mining ನಿಂದ ಇದು ಬಂದಿರತಕ್ಕದ್ದು. ಹಾಗಾಗಿ ನಮಗೆ ಇವತ್ತು ಲೋಕಾಯುಕ್ತರು ಏನು ಹೇಳುತ್ತಾರೆಂದರೆ, illegal mining ಎಷ್ಟಾಗಿದೆ, ಏನಾಗಿದೆ ಎನ್ನುವ ಮಾತನ್ನು ಹೇಳಬೇಕಾದಾಗ, ಅದನ್ನು ತಪ್ಪಿಸುವುದಕ್ಕೋಸ್ಕರ ಏನೇನು steps ಅನ್ನು ತೆಗೆದುಕೊಳ್ಳಬೇಕೆನ್ನುವುದನ್ನೂ ಹೇಳಿದ್ದಾರೆ. ಇನ್ನೊಂದು ಮುಖ್ಯವಾಗಿ ಲೋಕಾಯುಕ್ತರ

ಮನಸ್ಸನ್ನು ಬಹಳ ಕೆರಳಿಸಿರುವ ವಿಚಾರವೇನೆಂದರೆ, MML (Mysore Minerals Limited) ಅನ್ನು ರೆವ್ಯೂ ಮಾಡುವಂಥ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಸುಮಾರು 10–12 ಜನ ಐ.ಎ.ಎಸ್. ಅಧಿಕಾರಿಗಳ ಮೇಲೆ action ತೆಗೆದುಕೊಳ್ಳಬೇಕು, ಅವರ ಕಾಲದಲ್ಲಿ ಆಗಬಾರದ ಅನ್ಯಾಯವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಬಹುಶಃ ಲೋಕಾಯುಕ್ತರು ಒಬ್ಬರೇ ಹೇಳಲಿಲ್ಲ. ನಿಮ್ಮ ಪಕ್ಷದ ಸದಸ್ಯರಾದಂತಹ ಮಾನ್ಯ ಅರಗ ಜ್ಞಾನೇಂದ್ರ ಅವರೂ ಕೂಡ ಸಾರ್ವಜನಿಕ ಉದ್ಯಮಗಳ ಸಮಿತಿಯ ಮುಖೇನ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ಏನು ಹೇಳಿದ್ದಾರೆಂದರೆ, ದಿನಾಂಕ : 2–11–2006 ರಿಂದ 6–6–2007 ರವರೆಗೆ ನಡೆದ ಸಮಿತಿಯ ಸಭೆಗಳಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯವರು ಸಲ್ಲಿಸಿರುವ ಉತ್ತರಗಳನ್ನು ಇಲಾಖೆ ಹಾಗೂ ನಿಗಮದ ಅಧಿಕಾರಿಗಳೊಡನೆ ಚರ್ಚಿಸಿ, ಸಂಬಂಧಪಟ್ಟ ಗುತ್ತಿಗೆದಾರರಿಂದ ಹೇಳಿಕೆ ಪಡೆದು ನಂತರ ಸಮಿತಿಯ ಸದಸ್ಯರುಗಳು ಪರಸ್ಪರ ವಿಮರ್ಶಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಸಮಿತಿಯ ಇತಿಹಾಸದಲ್ಲೇ ಇಷ್ಟೊಂದು ಸುದೀರ್ಘವಾಗಿ ಒಂದೇ ನಿಗಮದ ಮೇಲಿನ ವರದಿಯ ಮೇಲೆ ಚರ್ಚಿಸಿರುವುದು ಇದೇ ಪ್ರಥಮ.' ನಿಮ್ಮ ಪಕ್ಷದವರೇ ಇವತ್ತು ಅಧ್ಯಕ್ಷರಾಗಿರುವಂಥ COPU ಸಮಿತಿಯಿಂದ ಒಂದು ವರದಿ ಬಂದಿದೆ. ಅದಾದ ಮೇಲೆ ಲೋಕಾಯುಕ್ತರ ವರದಿ ಬಂದಿರುವುದು.

ಅದು ನಿರ್ದಿಷ್ಟವಾಗಿ ಅಧಿಕಾರಿಗಳ ಮೇಲೆ action ತೆಗೆದುಕೊಳ್ಳಿ ಎಂದು ಹೇಳಿದ್ದರೂ ಕೂಡ, ನೀವು ಏನು action ತೆಗೆದುಕೊಂಡಿದ್ದೀರಿ ? ಎಂಬುದು ದೊಡ್ಡ ಪ್ರಶ್ನೆಯಾಗಿದೆ. ನೀವು ಏನು action ತೆಗೆದುಕೊಳ್ಳಬೇಕು ಎನ್ನುವುದನ್ನೂ ಸಹ ಅವರು ಹೇಳಿದ್ದಾರೆ. ನೀವು criminal case ಹಾಕಿ recovery proceedings ಮಾಡಿ, I have just named them. But in many cases there are subordinate officers who have under the mandatory directions of the Higher Authoritities have obeyed their directions and thereby caused loss to the State. In such cases I thought fit the only officers who have involvement in direct various acts of commission and omission to be named it may not be proper to name their subordinates. ಅಂದರೆ ಲೋಕಾಯುಕ್ತರು investigate ಮಾಡಿ, ಚೆಂಡನ್ನು ನಿಮ್ಮ ಮುಂದಿಟ್ಟಿದ್ದಾರೆ. ಈ basis ಮೇಲೆ ನೀವು action ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. Recommendation under the Section 12 (3) of the Lokayuktha Act. ಅವರು ಯಾರ್ಯಾರ ಮೇಲೆ action ತೆಗೆದುಕೊಳ್ಳಿ ಎಂದು

ಹೇಳಿದ್ದಾರೋ, ಅದೆಲ್ಲವನ್ನೂ ಕೂಡ ಒಂದೊಂದಾಗಿ ನಾನು ವಿವರಿಸಿ ಹೇಳುವುದಕ್ಕೆ ಹೋದರೆ ಬಹುಶಃ ದಿನಗಟ್ಟಲೆಯಾಗುತ್ತದೆ. ಯು.ವಿ.ಸಿಂಗ್‌ರವರು forest area ದಲ್ಲಿ ಯಾವ ರೀತಿಯಲ್ಲಿ ಈ ದಂಧೆ ನಡೆದಿದೆ ಎನ್ನುವುದನ್ನೂ ಕೂಡ ತಮ್ಮ ಗಮನಕ್ಕೆ ತಂದಿದ್ದಾರೆ. ಯು.ವಿ.ಸಿಂಗ್ report ಅನ್ನು ಬಹುಶಃ ಸೂಕ್ಷ್ಮವಾಗಿ ಹೇಳಬೇಕಾದರೆ, ಅವರು ಸುಗ್ಗಲಮ್ಮನ ಗುಡ್ಡ, ಅಲ್ಲಿಂದ ಪ್ರಾರಂಭಗೊಂಡು ವಿಭೂತಿ ಗುಡ್ಡ, ಓಬಳಾಪುರಂ ಮೈನ್ಸ್, ಎಲ್ಲಾ ವಿಚಾರಗಳನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ನೀವು ನಿಮ್ಮ boundaries ಅನ್ನು fix ಮಾಡುವುದರಲ್ಲಿ ಏನು ತಪ್ಪಾಗಿದೆ ಎನ್ನುವುದನ್ನು ಹೇಳಿದ್ದಾರೆ. ಇದು part of ಲೋಕಾಯುಕ್ತ ವರದಿ. ಆ ವರದಿಯಲ್ಲಿ ಕೊಟ್ಟಿರತಕ್ಕ ಈ ವಿಚಾರಗಳನ್ನು ನೀವು ಪರಿಶೀಲನೆ ಮಾಡಿ ಎಂದು ಹೇಳಿದ್ದಾರೆ. ನೀವು ಅದರಲ್ಲಿ ಹೇಳುತ್ತೀರಿ. "The inter State boundary inside the Bellary Range Forest is under dispute between the two states, hence it is suggested to get the border area surveyed from the Survey of India, the Central Government Apex Body by involving the concerned officials from Andhra and Karnataka." ಇದನ್ನು ಹೇಳುವುದರ ಜೊತೆಗೆ, ಏಕೆ ಲೋಕಾಯುಕ್ತರಿಗೆ ನಿಮ್ಮ ಮೇಲೆ ಸಿಟ್ಟು ಬಂತು ಎನ್ನುವ ವಿಚಾರವನ್ನು ಹೇಳಬೇಕಾಗುತ್ತದೆ. ಸರ್ಕಾರವೇನೂ ಸುಮ್ಮನೆ ಕೂರಲಿಲ್ಲ. ನೀವು action ತೆಗೆದುಕೊಂಡಿದ್ದೀರಿ. ಏನು action ತೆಗೆದುಕೊಂಡಿದ್ದೀರಿ ? ಲೋಕಾಯುಕ್ತರಿಗೆ ವರದಿಯೊಂದನ್ನು ಕೊಟ್ಟಿರಿ. "ರಾಜ್ಯ ಸರ್ಕಾರವು ಮಾನ್ಯ ಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ಧರಿಸಲು ಸಹಕಾರಿಯಾಗುವಂತೆ ವಿವರವಾದ ವರದಿಯನ್ನು ಸಲ್ಲಿಸಲು ಉನ್ನತ ಮಟ್ಟದ ಸಮಿತಿಯನ್ನು ದಿನಾಂಕ : 1-1-2009ರ ಆದೇಶದಲ್ಲಿ ರಚಿಸಿದೆ" ಅವರ ಸಲಹೆಗಳ ಬಗ್ಗೆ ಪರಿಶೀಲಿಸಿ, ಆ committeeಯ ಮುಖೇನ ನಾವೆಲ್ಲಾ action ತೆಗೆದುಕೊಂಡಿದ್ದೇವೆಂದು ನೀವು ಲೋಕಾಯುಕ್ತರಿಗೆ ದಿನಾಂಕ : 9-7-2009ಕ್ಕೆ ಪತ್ರವೊಂದನ್ನು ಬರೆದಿರಿ. 'ಇನ್ನೇನೂ ಇಲ್ಲ, ಎಲ್ಲಾ action ತೆಗೆದುಕೊಂಡಿದ್ದೇವೆ' ಎಂದು ನೀವು ಹೇಳಿದಿರಿ. ನೀವು action ತೆಗೆದುಕೊಂಡಿರತಕ್ಕದ್ದು ಕೇವಲ ಕಾಗದದಲ್ಲಿ ಇದೆಯೋ ವಿನಃ ಅದು ನಿಜ ರೂಪದಲ್ಲಿ ಅನುಷ್ಠಾನಕ್ಕೆ ಬರಲಿಲ್ಲ. ಅವರು ಕೊಟ್ಟಂತಹ ಸಲಹೆಗಳನ್ನು ತತ್ವಶಃ ಅನುಷ್ಠಾನ ಮಾಡತಕ್ಕ ಪ್ರಾಮಾಣಿಕತೆ ನಿಮ್ಮಲ್ಲಿದ್ದರೆ ಬಹುಶಃ ಈ ದಂಧೆ ನಡೆಯಲಿಕ್ಕೆ ಸಾಧ್ಯವಿರಲಿಲ್ಲ. ಇವತ್ತು ಅರಣ್ಯ ಸಂಪತ್ತು ಲೂಟಿಯಾಗುತ್ತಿದೆ ಎನ್ನುವ ಮಾತನ್ನು ಏನು ಹೇಳುತ್ತಿದ್ದಾರೋ, ಬಹುಶಃ ಈ ಕೂಗುಗಳು ವಿಧಾನಸೌಧದಲ್ಲಿ ಬರತಕ್ಕಂಥ ಪ್ರಶ್ನೆ ಇರಲಿಲ್ಲ. ಅವರು ಹೇಳಿರತಕ್ಕದ್ದಲ್ಲಿ ಒಂದೇ ಒಂದನ್ನಾದರೂ ಸಹ

ನೀವು ಜಾರಿಗೆ ತಂದಿಲ್ಲ. ಲೋಕಾಯುಕ್ತರು ಮಾಡಿರತಕ್ಕ ಶಿಫಾರಸ್ಸುಗಳಿಗೆ 'ಅದನ್ನು ವಿಚಾರಣೆ ಮಾಡುತ್ತಿದ್ದೇವೆ', ಅದಕ್ಕೆ ಕಾರ್ಯಕ್ರಮ ಹಾಕಿದ್ದೇವೆ', 'ಕ್ರಮ ಜರುಗಿಸುತ್ತಿದ್ದೇವೆ', ಎಂಬ ಉತ್ತರಗಳನ್ನು ಕೊಟ್ಟಿದ್ದೀರಿ. ಅವರ ಎಲ್ಲಾ ಶಿಫಾರಸ್ಸುಗಳಿಗೂ ಸಹ ಕೇವಲ action ತೆಗೆದುಕೊಳ್ಳುತ್ತಿದ್ದೇವೆ' ಎಂದು ಹೇಳಿದ್ದೀರಿ. ಇನ್ನೊಂದು ವರದಿಯನ್ನು ಕೊಟ್ಟಿದ್ದೀರಿ. ಬಹುಶಃ ಅದರ ಬಗ್ಗೆ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಹೇಳಬೇಕು. ಈ toll fee, ಅದಿರು ಸಾಗಾಣಿಕೆಗೆ 1000 ರೂಪಾಯಿಗಳು, Granite ಹಾಗೂ ಮರ ಸಾಗಾಣಿಕೆಗೆ 500 ರೂಪಾಯಿಗಳು, ಮರಳು ಸಾಗಾಣಿಕೆಗೆ 200 ರೂಪಾಯಿಗಳು ಎಂದು fix ಮಾಡಿದ್ದೀರಿ. ಬಹುಶಃ ಇದೆಲ್ಲಾ ಗೊಂದಲವಾಗಿ ಅದು ಕೂಡ ಇವತ್ತು ವಸೂಲಿ ಮಾಡುತ್ತಿಲ್ಲವೆಂದು ನನಗೆ ಗೊತ್ತಾಯಿತು. ಏಕೆ ? ನೀವು ಲೋಕಾಯುಕ್ತರ ವರದಿಯ ಜಾರಿಗೆ ಸಂಬಂಧಪಟ್ಟಂತೆ ಪತ್ರ ಬರೆದಾಗ 'ನಾವು ಇದನ್ನು ವಸೂಲು ಮಾಡುತ್ತಿದ್ದೇವೆ' ಎನ್ನುವಂತಹ ಮಾತನ್ನು ಅವರಿಗೆ ಹೇಳಿದ್ದೀರಿ. ಇಲ್ಲಿಯವರೆಗೂ ಎಷ್ಟು ವಸೂಲು ಮಾಡಿದ್ದೀರಿ ? ಎನ್ನುವ ಅಂಕಿ ಅಂಶಗಳನ್ನು ತಾವು ದಯಮಾಡಿ ಉತ್ತರ ಕೊಡುವಂತಹ ಸಂದರ್ಭದಲ್ಲಿ ತಿಳಿಸಬೇಕು. ಬಹುಶಃ ನೀವೇನಾದರೂ ಕೂಡ ಅದನ್ನು ವಸೂಲಿ ಮಾಡಿದ್ದೇ ಆಗಿದ್ದರೆ, ನೀವು ಸಮಾವೇಶದಲ್ಲಿ 'ನನ್ನ ಬೊಕ್ಕಸ ತುಂಬಿದೆ' ಎಂಬ ಮಾತನ್ನೇನು ಹೇಳಿದ್ದೀರೋ, ಅದು ನಿಜ ಎಂದು ನಾವು ಭಾವಿಸುತ್ತಿದ್ದೆವು. ಆದರೆ ಆ ಕೆಲಸ ಆಗಿಲ್ಲ. 'Check post ಗಳನ್ನು ಮಾಡಿ' ಎಂಬ ಶಿಫಾರಸ್ಸಿಗೆ 'Check posts ತೆರೆಯತಕ್ಕಂಥ ಉದ್ದೇಶ ಇದೆ' ಎಂದು ಉತ್ತರ ಕೊಟ್ಟಿದ್ದೀರಿ. ಅವರು ಹೇಳಿದ ಯಾವುದೇ ಶಿಫಾರಸ್ಸಿಗೂ ನೀವು 'ಇಲ್ಲ' ಎಂದು ಹೇಳಿಲ್ಲ. ಅವರ ಎಲ್ಲಾ ಶಿಫಾರಸ್ಸುಗಳನ್ನು ತತ್ವಶಃ ಒಪ್ಪಿ 'ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ'. ನಾವು ಅದನ್ನು ಮಾಡುತ್ತಿದ್ದೇವೆ'. 'ನಾವು ಇದನ್ನು ಮಾಡುತ್ತಿದ್ದೇವೆ', 'ಆಧುನೀಕರಣಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ' ಮುಂತಾಗಿ ಹೇಳಿದ್ದೀರಿ. ಶಿಫಾರಸ್ಸುಗಳ ಬಗ್ಗೆ ನೀವು ಏನೇನು ಹೇಳಿದ್ದೀರಿ ಎನ್ನುವುದನ್ನು ನೀವು ತೆಗೆದು ನೋಡಿ. ಪ್ರತಿಯೊಂದಕ್ಕೂ 'ನಾವು action ತೆಗೆದುಕೊಂಡಿದ್ದೇವೆ' ಎನ್ನುವಂತಹ ಮಾತನ್ನು ಹೇಳಿದ್ದೀರಿ. ಲೋಕಾಯುಕ್ತರಿಗೆ ಬಹುಶಃ ಎಲ್ಲೋ ಯೋಚನೆ ಆಗಿರಬೇಕು. ನಾನು ವರದಿ ಕೊಟ್ಟಿದ್ದರೂ ಕೂಡ ಮಾಧ್ಯಮಗಳಲ್ಲಿ ಅದಿರು ಕಳ್ಳ ಸಾಗಾಣಿಕೆ ಸಾರಾಸಗಟಾಗಿ ನಡೆಯುತ್ತಿದೆ ಎಂದು ವರದಿಯಾದಾಗ ಅದು ಇಷ್ಯೂ ಆಗುತ್ತಿದೆಯೇ ? ಬಹುಶಃ ನಾನು ಕೊಟ್ಟಂತಹ ವರದಿಯನ್ನು ಅನುಷ್ಠಾನಕ್ಕೆ ತರಲಿಲ್ಲ ಎನ್ನುವ ಕಾರಣಕ್ಕೋಸ್ಕರ ರಾಜೀನಾಮೆ ಕೊಟ್ಟರು. ನಂತರ ರಾಜೀನಾಮೆ ಕೊಟ್ಟಿದ್ದನ್ನು ವಾಪಸ್ ಪಡೆಯತಕ್ಕ ಕೆಲಸವೂ ಸಹ ಆಗಿದೆ. ಅದರ ಬಗ್ಗೆ ನಾನು ಮತ್ತು ಮಾನ್ಯ ಸಿದ್ದರಾಮಯ್ಯನವರು ಇಬ್ಬರೂ ಕೂಡ ಮಾನ್ಯ ಲೋಕಾಯುಕ್ತರನ್ನು ಭೇಟಿ ಮಾಡಲು ಹೋಗಿದ್ದೆವು. ಇಡೀ ರಾಜ್ಯದ ಮೂಲೆ

ಮೂಲೆಯಿಂದ ಜನ 'ಅಯ್ಯೋ! ಸಂತೋಷ್ ಹೆಗ್ಡೆಯವರು ರಾಜೀನಾಮೆ ಕೊಡಬಾರದಿತ್ತು. ಈ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ಹತ್ತಿಕ್ಕುವುದರಲ್ಲಿ ಅತ್ಯಂತ ಪ್ರಮುಖವಾದಂತಹ ಜವಾಬ್ದಾರಿಕೆಯನ್ನು ಹೊತ್ತು ಅವರು ಕೆಲಸ ಮಾಡುತ್ತಿದ್ದಾರೆ' ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದರು. ಆ ಜನಗಳ ಭಾವನೆ ಹಿನ್ನೆಲೆಯಲ್ಲಿ, ಸಂಘ-ಸಂಸ್ಥೆಗಳು, ಸಾಹಿತಿಗಳು, ಬರಹಗಾರರು, ಹೋರಾಟಗಾರರು ಎಲ್ಲರೂ ಕೂಡ ಬೀದಿಗೆ ಬರುವಂತಹ ಸಂದರ್ಭ ಬಂದಾಗ ಬಹುಶಃ ಈ ಸದನ ಅದರ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಜನಗಳ ಭಾವನೆ ಹಿನ್ನೆಲೆಯಲ್ಲಿ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ವಿರೋಧ ಪಕ್ಷದವರಾದ ನಾವು ತುದಿಗಾಲಲ್ಲಿ ನಿಂತಿದ್ದೆವು.

ಅಧ್ಯಕ್ಷರೆ, ಈ ಸಭೆ ಕೇವಲ 224 ಜನ ಇರತಕ್ಕ ಸದಸ್ಯರದ್ದಲ್ಲ. It is a trust of 6 crore people of Karnataka. 6 ಕೋಟಿ ಜನರು ರಚಿಸಿದಂತಹ ಟ್ರಸ್ಟ್ ಇದಾಗಿದೆ. ಈ ಟ್ರಸ್ಟ್ ಯಡಿಯೂರಪ್ಪನವರು ಮತ್ತು ಅವರ ಕೆಲವೇ ಸ್ನೇಹಿತರುಗಳಿಗೆ ನಿರ್ವಹಣೆ ಮಾಡುವುದಕ್ಕೆ ಕೊಟ್ಟಿರತಕ್ಕ ಜವಾಬ್ದಾರಿಕೆ ಮಾತ್ರವೇ ಆಗಿದೆ. ಈ ಸದನದ creature ಇವತ್ತು ಯಡಿಯೂರಪ್ಪನವರು. ಮಂತ್ರಿಮಂಡಲ ಕೂಡ ಇವತ್ತು creature ಅಷ್ಟೇನೇ. ಎಲ್ಲದರಲ್ಲೂ ಸಂಪೂರ್ಣವಾಗಿ ನಿಮ್ಮದೇ ತೀರ್ಮಾನ ಅನ್ನತಕ್ಕದ್ದಲ್ಲ. ನೀವೇನೇ ಮಾಡಬೇಕಾಗಿದ್ದರೂ ಕೂಡ ಜನಗಳ ಭಾವನೆಗೆ ತಕ್ಕನಾಗಿ ಇವತ್ತು ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದೇ ಒಂದು constitution provision ಅನ್ನು ತರಲಿಕ್ಕೆ ಇಚ್ಛೆಪಡುತ್ತೇನೆ. ನಾನು ಅನೇಕ ಸಂದರ್ಭದಲ್ಲಿ ಇದನ್ನು ಹೇಳಿದ್ದೇನೆ. Directive Principles of State Policy. ಆ Directive principleನಲ್ಲಿ Article 39ನಲ್ಲಿ certain principles of the policy to be followed by the State. Article 39(c) "the operation of the economic system does not result in the concentration of wealth and means of production to the common detriment;" ಏನು ಇವತ್ತು ಅವ್ಯಾಹತವಾಗಿ ಗಣಿಗಾರಿಕೆ ನಡೆಯುತ್ತಿದೆ, ಗಣಿಗಾರಿಕೆ ಹೆಸರಿನಲ್ಲಿ ಕೆಲವೇ ಜನ ದುಡ್ಡು ಮಾಡುತ್ತಿದ್ದಾರಲ್ಲಾ, ಅದನ್ನು ಮಾಡಬಾರದು ಎಂಬುದು ಸಂವಿಧಾನದ ಆಶಯವಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ 6 ಕೋಟಿ ಜನರನ್ನು ಪ್ರತಿನಿಧಿಸತಕ್ಕವರಾಗಿದ್ದಾರೆ. you are the executive head of the State. You are the Chief Minister. ಆಡಳಿತ ಯಂತ್ರ ನಿಮ್ಮ controlನಲ್ಲಿದೆ. ನಿಮ್ಮ ಜವಾಬ್ದಾರಿಕೆ ಇದು. ನಿಮ್ಮ ಹೊಣೆಗಾರಿಕೆ ಇದೆ. ನೀವು

ಪ್ರಮಾಣ ವಚನವನ್ನು ಸ್ವೀಕರಿಸಿ ಮುಖ್ಯಮಂತ್ರಿಗಳಾಗಿ ಈ ಪೀಠವನ್ನು ಅಲಂಕರಿಸಿದ್ದೀರಿ. ನಿಮ್ಮ ಜವಾಬ್ದಾರಿಕೆ ಇದೆ. ನೀವು ಸಂವಿಧಾನವನ್ನು ಎತ್ತಿ ಹಿಡಿಯಬೇಕು. ಸಂವಿಧಾನವನ್ನು ಎತ್ತಿ ಹಿಡಿಯುತ್ತೇನೆಂದು ಪ್ರಮಾಣ ವಚನ ಸ್ವೀಕರಿಸಿ, ಇವತ್ತು ಅವರು ಹೇಳಿರತಕ್ಕದ್ದನ್ನು ಪಾಲಿಸದಿದ್ದಾಗ, ಆ ಲೋಪ ಮುಖ್ಯಮಂತ್ರಿಗಳದ್ದಲ್ಲವೇ? ಅದೆಲ್ಲಕ್ಕಿಂತ ಹೆಚ್ಚಾಗಿ ಇನ್ನೊಂದು ಮುಖ್ಯವಾಗಿ Article 256. "Article 256. Obligation of States and the Union. The Executive power of every State shall be so exercised as to ensure compliance with the laws made by Parliament and any existing laws which apply in that State, and the executive power of the Union shall extend to the giving of such directions to a State as may appear to the Government of India to be necessary for that purpose." ಅಂದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಜಂಟಿ ಜವಾಬ್ದಾರಿಕೆ, ಕಾನೂನು ಮಾಡುವ ಸಂದರ್ಭದಲ್ಲಿ, ಕಾನೂನು ಪರಿಪಾಲನೆ ಮಾಡುವ ಸಂದರ್ಭದಲ್ಲಿ ಇವತ್ತು ಆ ಜವಾಬ್ದಾರಿಕೆ ಇರುತ್ತದೆ. ಆ ಜವಾಬ್ದಾರಿಕೆ ಎಷ್ಟರ ಮಟ್ಟಿಗೆ ಪರಿಪಾಲನೆಯಾಗಿದೆ, ಕೇಂದ್ರ ಸರ್ಕಾರದ ಈ ವಿಚಾರದಲ್ಲಿ ನೀವು ಏನು ಮಾಡಿದ್ದಾರೆ ಎನ್ನತಕ್ಕದ್ದು. ನಾನು ನಿನ್ನೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದೆ, ಈಗಾಗಲೆ ಕೇಂದ್ರ ಗಣಿಮಂತ್ರಿಗಳು ನಿಮಗೆ ಪತ್ರವನ್ನು ಬರೆದಿದ್ದಾರೆ ಎಂದು ಹೇಳಿದ್ದಕ್ಕೆ, ನೀವು, ನನಗೆ 2 ಪತ್ರ ಬಂದಿದೆ ಇನ್ನೊಂದು ಪತ್ರ ಬರಬಹುದೆನ್ನುವ ಮಾತನ್ನು ಹೇಳಿದಿರಿ. ನಾನು ನಿನ್ನೆ ಯಾವುದೊ ಒಂದು ಸಭೆಗೆ ಹೋಗಬೇಕಾದ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳನ್ನು ಕೂಡ ಭೇಟಿ ಮಾಡಿ, ಚರ್ಚೆ ಮಾಡಿ ಮಾಹಿತಿಯನ್ನು ಕೂಡ ಪಡೆದಿದ್ದೇನೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕೇಂದ್ರ ಸರ್ಕಾರ, ಯಾವ ಮಟ್ಟಕ್ಕೆ ಹೋಗಿ ರಾಜ್ಯ ಸರ್ಕಾರಕ್ಕೆ ಸಹಕಾರ ಕೊಡುವುದಕ್ಕೆ ಮುಂದೆ ಹೋಗಿತ್ತು, ಅದರ ಪ್ರಯೋಜನವನ್ನು ತಾವು ಮುಖ್ಯಮಂತ್ರಿಗಳಾಗಿ ಎಷ್ಟರ ಮಟ್ಟಿಗೆ ಪ್ರಯೋಜನ ಪಡೆದುಕೊಳ್ಳಲು ಪ್ರಯತ್ನ ಪಟ್ಟೀರಿ, ಇಲ್ಲಿ ನಾನು ನಿಮ್ಮ intentions ಅನ್ನು ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಪತ್ರ ಬರೆದರು, ಯಾವಾಗ ಎಂದರೆ, ನವೆಂಬರ್ 16ಕ್ಕೆ ಬರೆದಿದ್ದಾರೆ, ಅದರ ಒಂದು ಒಕ್ಕಣೆಯನ್ನು ಹೇಳುತ್ತೇನೆ, It would be necessary to investigate the complaints in general and the findings of the Lokayuktha in particular by a special investigation team so that the culprits are brought to book immediately and such action be taken with solitary effect on regulating the controlling the sector in

the best interest of the State and the Country. I shall be happy to offer you all possible assistance from my Ministry and if the State would require the services of CBI also" ಎನ್ನುವ ಮಾತನ್ನು ಹೇಳುತ್ತಾರೆ. ನವೆಂಬರ್ 16ರಲ್ಲಿ ಒಂದು ಕಾಗದವನ್ನು ಬರೆದರು, ಅದಾದ ಮೇಲೆ 30 ಮಾರ್ಚ್ 2010ಕ್ಕೆ ಮತ್ತೊಂದು ಪತ್ರವನ್ನು ಬರೆಯುತ್ತಾರೆ, "one of the most common causes of increase of illegal mining has been attributed to the absence of boundary pillars demacrating the lease hold areas. This has been corroborated by the Lokayuktha report. You may appreciate there are basic administrative measures which if neglected can lead to an absolute collapse of the regulatory system at the field level. The State Government has also been advised to prepare an action plan to comprehensively address the issue of illegal mining which included inter-alia use of modern technology like satellite imagery, DGPS for boundary demarcation, use of holograms on transport permits, identifying trigger points like prices of minerals, excess production etc., Some of these measures were directly needed to increase the efficiency of the State Government to curb the illegal mining. However, it is not yet clear whether the State Government has been able to use these mechanisms to effectively take action in the cases reported by the State Government." ನಿಮಗೆ ಪತ್ರ ಬರೆಯುವಾಗ ರಾಜ್ಯ ಸರ್ಕಾರಕ್ಕೆ ಏನೇನು ಕರೆಸ್ಪಾಂಡೆನ್ಸ್ ಮಾಡಿದೆ ಎಂದು ಒಂದು ಅನೆಕ್ಷರ್ ಅನ್ನು ಕಳುಹಿಸಿದರು. ಅದು ಮುಖ್ಯಮಂತ್ರಿಗಳ ಗಮನಕ್ಕೆ ಹೋಗಿದೆ ಎಂದು ನಾನು ಭಾವಿಸುತ್ತೇನೆ, ಏಕೆಂದರೆ, ಮುಖ್ಯಮಂತ್ರಿಗಳಿಗೆ ಎಲ್ಲಾ ವಿಚಾರಗಳು ಗೊತ್ತಾಗುತ್ತದೆ ಎಂದಲ್ಲ, ಅವರ ಬ್ಯುಸಿ ಶೆಡ್ಯುಲ್‌ನಲ್ಲಿ ತಪ್ಪಾಗಬಹುದು, ನಿಮ್ಮ ಗಮನಕ್ಕೆ ತರುವುದಕ್ಕೋಸ್ಕರ ಈ ಸದನವಿರುವುದು. ಕೇಂದ್ರ ಸರ್ಕಾರ 17 ಪತ್ರಗಳನ್ನು ಬರೆದಿದೆ, ಅದ್ಯಾವ ದಿನಾಂಕದ್ದು ಎನ್ನುವುದನ್ನು ನಾನು ಕೊಡುತ್ತೇನೆ. 17 ಪತ್ರಗಳನ್ನು ಬರೆದು, ತದನಂತರ 3 ಪತ್ರಗಳನ್ನು ಕೇಂದ್ರದ ಮಂತ್ರಿಗಳು ಬರೆಯುತ್ತಾರೆ, 17 ಪತ್ರಕ್ಕೆ ನೀವೇನು ಉತ್ತರವನ್ನು ಕೊಡಲಿಲ್ಲ, 17 ಪತ್ರಗಳಲ್ಲಿರುವ ಪ್ರಮುಖವಾದ ವಿಚಾರಗಳೆಂದರೆ,

ಒಂದೆರಡು ಮಾತ್ರ ಹೇಳುತ್ತೇನೆ, "encroachment in ironore mining area reserved in favour of the State Trading Corporation of Government of India by H.R.G. Swamimalai Mines in Kumaraswamy Reserve Forest, Bellary District." ಇದೊಂದು ವಿಚಾರ, ದಿ: 11.7.2007 ರಿಂದ, ತದನಂತರ the arrangement of the Deputy Commissioner to visit Aligudda Bychkal site to seize the illegal stock of iron ore from the Ministry of Steel. ಅದು ಬಿಡಿ. Encroachment of mining lease area of Obalapuram Mining Company, ಈ ರೀತಿಯಾಗಿರುವುದು, illegal mining activities of Rathnaiah, Bellary. Request for the stopping of the illegal activities by the Bellary Range Forest. ಅದರಲ್ಲಿ nationalization of mines to ban exporting of mines. That is also one of the issue. ಈ ರೀತಿಯಾಗಿ 17 ರಿಮೈಂಡರ್‌ಗಳನ್ನು ಹಾಕಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಪತ್ರಗಳನ್ನು ಬರೆದರು ಯಾವುದಕ್ಕೂ ಬರದಲೇ ಜುಲೈ 1 ರಂದು ಕೊನೆಯದಾಗಿ ಒಂದು ಪತ್ರವನ್ನು ಬರೆದರು, ಅದು ಮುಖ್ಯಮಂತ್ರಿಗಳಿಗೆ ಬಂದಿದೆ ಎಂದನಿಸುತ್ತದೆ, ಏಕೆಂದರೆ, 6 ದಿವಸಗಳಾಯಿತು, ಅದನ್ನು ಮತ್ತೆ ನಾನು ಓದಬೇಕಾದ ಅವಶ್ಯಕತೆ ಇಲ್ಲ. ಬಹುಶಃ ಅದರಲ್ಲಿ ಹೇಳಿರುವುದೆಲ್ಲವೂ ಕೂಡ, ಯಾವ ರೀತಿ ಲೋಪವಾಗಿದೆ ಎನ್ನುವ ಮಾತನ್ನು ಹೇಳಿ, ಇವತ್ತು ನೀವು ಇದಕ್ಕೆ ಕ್ರಮ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳುತ್ತಾರೆ. ಮುಖ್ಯಮಂತ್ರಿಗಳೆ, ಇವತ್ತು ಅವರು ಒಂದು ಮಾತನ್ನು ಹೇಳುತ್ತಾರೆ. I am enclosing herewith media reports ಏಕೆಂದರೆ, ನಾಳೆ ಪಾರ್ಲಿಮೆಂಟ್ ನಡೆಯುವ ಸಂದರ್ಭದಲ್ಲಿ ಅಲ್ಲಿ ಕೂಡ ರೈಸ್ ಆಗಬಹುದು, ಅವಾಗ ಮುಖ್ಯಮಂತ್ರಿಗಳಾದವರು ಉತ್ತರ ಕೊಡಬೇಕಾಗುತ್ತದೆ, ಈ ಚರ್ಚೆಯಲ್ಲಿ ಅಧಿಕೃತ ವಿರೋಧಪಕ್ಷದ ನಾಯಕರಾದ ಶ್ರೀಮತಿ ಸುಷ್ಮಸ್ವರಾಜ್ ಅವರೆ ಇರುತ್ತಾರೆ, ಬಹುಶಃ ಅವರೇ ಮಾಡುತ್ತಾರೋ ಅಥವಾ ಬೇರೆಯವರು ಪ್ರಸ್ತಾಪ ಮಾಡುತ್ತಾರೊ ಗೊತ್ತಿಲ್ಲ. ಅವರ ಪತ್ರದ ಒಕ್ಕಣೆ ಈ ರೀತಿ ಇದೆ ನೋಡಿ, "I am enclosing herewith media reports which are appearing almost on all daily basis regarding large scale illegal mining and transportation of iron ore in Karnataka. You will agree that these reports even if it is not entirely correct present a very poor image of the State administration in general, and the mineral sector in particular. It

has endangered the image of the Government. The Central Government is not only concerned about the matters in terms of poor enforcement of Mines and Mineral Development Regulation Act of 1957, the rules framed there under, the fact that reports create a very unfavourable investment condition in this sector and also because the developments are likely to have a multi sectoral ramification with regard to the quality of governance. ಇದಕ್ಕೆ the State Government Officials have been assuring the Ministry that sufficient action has been taken to control the illegal mining. The latest newspapers report that the theft and the export of iron ore utter disregard for the law of the land, shows that the illegal mining mafia in Karnataka needs to be tackled without any further delay in order to avoid a complete break down in the regulatory system at the field level in our Government. I would therefore reiterate my earlier offer of Central Government assistance for investigation into the various incidents of illegal mining." 20 ಕಾಗದಗಳು, ರಿಮೈಂಡರ್ಸ್ ಬಂತು, ಇವತ್ತು ಪತ್ರಿಕೆಗಳಲ್ಲಿ ಏನೇನು ಬಂತೆಂದು ಓದಿ ಹೇಳಬೇಕಾಗಿಲ್ಲ, ದೆಹಲಿಯ ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಕಲೆಕ್ಟ್ ಮಾಡಿದೆ, Ore theft in Karnataka sparks a political storm. Karnataka shifts officers probing disappearance of seized iron ore. The Financial Express, Delhi on 29th June capturing Karnataka only market mechanism can break the vested interest in mining. Missing iron ore. Two probes overlap - CID, Lokayuktha. Illegal Mining iron ore worth Rs. *200 crores is* missing. Contempt of port. The volume of illegal mine in Karnataka demands a strong action. This is national media papers.

ಇದು ವರದಿ ಇರತಕ್ಕಂಥದ್ದು. ಇದು ಯಾವುದೇ ಸಂದರ್ಭದಲ್ಲಿ ಕೂಡ ಪಾರ್ಲಿಮೆಂಟಿನಲ್ಲಿ ರೈಸ್ ಆಗಬಹುದು. ಈ ಎಲ್ಲ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯ

ಮಂತ್ರಿಗಳು ಒಂದು ಕಾಗದ ಬರೆಯುತ್ತಾರೆ. ಎಷ್ಟು beautiful ಆಗಿ ಬರೆಯುತ್ತಾರೆ ನಾನು ಓದುತ್ತೇನೆ. ಬಹಳ beautiful ಆಗಿದೆ. ನೀವು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸಿದ್ಧರಾಮಯ್ಯನವರೇ ಅರ್ಥವಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. Dear Sri Andikji, I have received your letter of March 30th 2010 with its enclosures regarding the mining sector. The suggestion made in your aforesaid letter has been noted and I shall revert back to you at the earliest. With warm regards, yours sincerely, B.S. Yadiyurappa. This is the beautiful letter of the Chief Minister, in response to the Government of India's pro-active action to curb the illegal mining in Karnataka. ಮಾನ್ಯ ಮುಖ್ಯ ಮಂತ್ರಿಗಳು ಬರೆದಿರುವ ಪತ್ರ. ತಾವು ಯೋಚನೆ ಮಾಡಿ ಯಾವ ಹಂತದಲ್ಲಿ ಇದು ತಪ್ಪಾಗಿದೆ, ಯಾವ ಹಂತದಲ್ಲಿ ಇವತ್ತು ಲೋಕಾಯುಕ್ತರವರು ರಾಜೀನಾಮೆ ಕೊಡುವಂತಹ ಪ್ರಶ್ನೆಗೆ ಹೋಯಿತು, ಇವತ್ತು ತಾವು ಹೇಳಬಹುದು, ಲೋಕಾಯುಕ್ತರವರು ಕೊಟ್ಟಿರತಕ್ಕಂತಹ ರಾಜೀನಾಮೆ ವಾಪಸ್ ಪಡೆಯತಕ್ಕಂತಹ ರೀತಿಯಲ್ಲಿ ಆಗಿದೆ ಎಂದು ನಾನು ಆ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಲೋಕಾಯುಕ್ತರವರ ಬಳಿ ನಾನು ಮತ್ತು ಮಾನ್ಯ ಸಿದ್ಧರಾಮಯ್ಯನವರು ಹೋದಾಗ ಬಹಳ ಸಂತೋಷದಿಂದ ಇದ್ದು ನಾನು ಯಾವುದೇ ಕಾರಣಕ್ಕೂ ವಾಪಸ್ ಪಡೆಯುವುದಿಲ್ಲವೆಂದು ಹೇಳಿದರು. ನಮ್ಮ ಹಾಗೆ ಎಲ್ಲಾ political party ಗಳು ಲೋಕಾಯುಕ್ತರ ಮೇಲೆ ಒತ್ತಡ ಹಾಕಿದ ಮೇಲೆ ಸಂಘ ಸಂಸ್ಥೆಗಳ ಭಾವನೆಗಳನ್ನು ಅರ್ಥ ಮಾಡಿಕೊಂಡು ರಾಜೀನಾಮೆ ವಾಪಸ್ ತೆಗೆದುಕೊಳ್ಳುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದರೆ ಬಹಳ ಚೆನ್ನಾಗಿತ್ತು. ಆದರೆ ಅದ್ವಾನಿಯವರು ನಮ್ಮ ತಂದೆಯವರು, ಮಾನ್ಯ ಚಿದಂಬರಂರವರು ನಮ್ಮ ತಮ್ಮ ಎಂದು ಹೇಳಿದರು. ಆರು ಕೋಟಿ ಜನರ ಭಾವನೆ ಏನಾಗಬೇಕು? I don't cast aspersion. ಬಹಶಃ ಬಾಯಿ ತಪ್ಪಿ ಹೇಳಿದರೋ, ಅಥವಾ ಏನು ಮಾಡಿದರೋ ಗೊತ್ತಿಲ್ಲ. ಮತ್ತೆ ಮತ್ತೆ TV ಯಲ್ಲಿ ಬರುತ್ತಿದೆ. ಈ ಸರ್ಕಾರ ಏನು ಮಾಡುತ್ತದೆ ಎಂದು ನಾನು ನೋಡುತ್ತೇನೆ, ಏನೂ ಮಾಡದೇ ಇದ್ದರೆ ನಾನೇ ಪುನಃ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಅದು ಏನು ಕಥೆಯೋ ಅಧ್ಯಕ್ಷರೆ ಎರಡನೇ ವರದಿ ಜುಲೈ 31ಕ್ಕೆ ಕೊಡಬೇಕಾಗಿದೆ. ಇನ್ನು ಒಂದು ತಿಂಗಳೊಳಗೆ ಎರಡನೇ ವರದಿ ಕೊಡಬೇಕು. ನಾನು ಲೋಕಾಯುಕ್ತರವರಿಂದ ಬಯಸುವುದು ಅತ್ಯಂತ ಸಮಗ್ರವಾದ ವರದಿಯನ್ನು ಕೊಡುತ್ತಾರೆ ಅದು implementable ರೀತಿಯಲ್ಲಿ ಸಂಪತ್ತಿನ ಲೂಟಿ ಆಗುವುದನ್ನು ತಪ್ಪಿಸುವುದಕ್ಕೆ

ಪೂರಕವಾದ ವರದಿಯನ್ನು ಕೊಡುತ್ತಾರೆಂದು ನಾನು ಭಾವಿಸಿದ್ದೇನೆ. ಅವರು ಏನು ವರದಿ ಕೊಡುತ್ತಾರೆ ಅದು ಬಂದ ಮೇಲೆ ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಮುಖ್ಯಮಂತ್ರಿಗಳ ಅಧೀನದಲ್ಲಿ ಇವತ್ತು ಎಲ್ಲಾ ಇಲಾಖೆಗಳು ಬರುತ್ತವೆ. ಮಾನ್ಯ ಅಧ್ಯಕ್ಷರೆ ಮೊನ್ನೆ ಮೂರು ತಿಂಗಳ ಹಿಂದೆ ನಾನು ಕಾರವಾರಕ್ಕೆ ಹೋಗಿ ಬಂದೆ, ನಾನು ಮಾನ್ಯ ರೋಷನ್‌ಬೇಗ್‌ರವರು, ಮಾನ್ಯ ಶ್ರೀನಿವಾಸಪ್ರಸಾದ್‌ರವರು ಬರಲಿಲ್ಲ. Public Accounts Committee ಯವರು ಕಾರವಾರ ಹಾಗೂ ಗುಜರಾತ್ ರಾಜ್ಯಗಳಿಗೆ ಹೋಗಿ, ಎಲ್ಲೋ ಒಂದು ಕಡೆಗೆ ಸರ್ಕಾರಕ್ಕೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಪೋರ್ಟ್ಸ್‌ಗಳ ಸ್ಥಾಪನೆ ಮಾಡುವ ಬಗ್ಗೆ ಪಾಲಿಸಿ ತರಬೇಕು. ಗುಜರಾತ್ ಮಾದರಿಯನ್ನು ಅನುಸರಿಸಬೇಕು. ಗುಜರಾತ್ ರಾಜ್ಯದಲ್ಲಿ ಆಗಿರತಕ್ಕಂತಹ ದೊಡ್ಡ ಪ್ರಮಾಣದ ಬದಲಾವಣೆಯನ್ನು ಅರ್ಥ ಮಾಡಿಕೊಳ್ಳಬೇಕೆಂಬ ಕಾರಣದಿಂದ ಬಹಳಷ್ಟು ಜನ ಹೋದೆವು. ಬಹಳಷ್ಟು ಜನ BJP ಸದಸ್ಯರು ಕೂಡ ಬಂದರು. ಅದರ ವರದಿಯನ್ನು ನಾವು ಕೊಡುತ್ತಿದ್ದೇವೆ. ನಾವು ಹೋದಂತಹ ಸಂದರ್ಭದಲ್ಲಿ ಕಾರವಾರದ ಬೇಲಿಕೇರಿಯಲ್ಲಿ fishermen's ನಮಗೆ ಒಂದು ಮನವಿಯನ್ನು ಕೊಟ್ಟರು. ನಾನು ಎಲ್ಲರನ್ನೂ ಸುಮ್ಮನಿರಿಸಿ ನೋಡೋಣವೆಂದು ನಾನು ನಮ್ಮ ಕೆಲವು ಅಧಿಕಾರಿಗಳನ್ನು ಜೊತೆಗೆ ಕರೆದುಕೊಂಡು ಬೇಲಿಕೇರಿ ಏನಾಗಿದೆ ಎಂದು ನೋಡೋಣವೆಂದು ಹೋದೆ. ಮಾನ್ಯ ಸಿದ್ಧರಾಮಯ್ಯನವರು ಬೇಲಿಕೇರಿಯಲ್ಲಿ ವಿಚಾರವನ್ನು ಈಗಾಗಲೇ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಸೀಸ್ ಮಾಡಿದ್ದು ಏನಾಯಿತು, ಇನ್ನೊಂದು ಏನಾಯಿತು, ಅದರ ವಿಚಾರಕ್ಕೆ ನಾನು ಹೋಗುವುದಿಲ್ಲ. ಇದು ಒಂದು ಹೊಸ ವಿಚಾರ. ಅಂಕೋಲದ ತಹಶೀಲ್ದಾರ್ ಬೇಲಿಕೇರಿ ಗ್ರಾಮದ ಸರ್ವೇ ನಂ. 190ರಲ್ಲಿ ಸರ್ಕಾರ ಪಡೆ ಕ್ಷೇತ್ರ 5 ಎಕರೆ ಕ್ಷೇತ್ರವನ್ನು ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಯವರು ಮಾಡಿದ ಅತಿಕ್ರಮಣದ ಬಗ್ಗೆ ವರದಿ. ಮಾನ್ಯ ರೆಡ್ಡಿಯವರೆ ನಿಮಗೆ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಯವರು ಗೊತ್ತಿರಬಹುದು.

ಶ್ರೀ ಜನಾರ್ಧನ ರೆಡ್ಡಿ: ನಿಮ್ಮ ಪಕ್ಷದಿಂದ ಚುನಾವಣೆಗೆ ನಿಂತಿದ್ದರು.

ಶ್ರೀ ಟಿ.ಬಿ. ಜಯಚಂದ್ರ: ಯಾರೇ ಆಗಲಿ, ನಮ್ಮವರ ಬಗ್ಗೆಯೇ ಹೇಳುತ್ತಿದ್ದೇನೆ. ಇದನ್ನು ನಮ್ಮವರು ಮಾಡಲಿ, ನಿಮ್ಮವರು ಮಾಡಲಿ, ಮಾನ್ಯ ಸಿದ್ಧರಾಮಯ್ಯನವರು ಕೊನೆಗೆ ಒಂದು ಪದ ಬಳಸಿದರು. ಆ ಪದ ನಾನು ಮತ್ತೆ ಬಳಸುವುದಕ್ಕೆ ಹೋಗುವುದಿಲ್ಲ. ಯಾರೇ ಮಾಡಲಿ ಅದು ತಪ್ಪಾಗುತ್ತದೆ. ಇವತ್ತು ತಹಶೀಲ್ದಾರ್‌ರವರು Deputy Commissioner ರವರಿಗೆ report ಮಾಡುತ್ತಾರೆ. ಬೇಲಿಕೇರಿಯಲ್ಲಿ ಬೆಲ್ಲದ ಗುಡ್ಡ ಎಂದು ಒಂದು ಗುಡ್ಡ ಇದೆ, ಅದರ ಒತ್ತುವರಿ ಆಗಿದೆ ಎನ್ನತಕ್ಕಂಥದ್ದನ್ನು ತಹಶೀಲ್ದಾರ್‌ರವರು

ಕೋಟ್ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಮಾಹಿತಿ ಇದೆಯೋ ಇಲ್ಲವೋ ಎನ್ನುವ ಕಾರಣಕ್ಕೋಸ್ಕರ ಇದನ್ನೆಲ್ಲಾ ಹೇಳಬೇಕಾಗುತ್ತದೆ. ಅದರ ಜೊತೆಯಲ್ಲಿ ಮಾನ್ಯ ಮೀನುಗಾರಿಕಾ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ನನಗೆ ಅವರ ಹೆಸರು ಗೊತ್ತಿಲ್ಲ. ಬೇಲಿಕೇರಿಯ ವಾಣಿಜ್ಯ ಬಂದರಿನಲ್ಲಿ ಆದ ಅತಿಕ್ರಮಣದ ಬಗ್ಗೆ ಅವರಿಗೂ ಕೂಡ ವರದಿ ಕೊಟ್ಟಿದ್ದಾರೆ. ಬೇಲಿಕೇರಿಯಲ್ಲಿ ಆಗುತ್ತಿರತಕ್ಕಂತಹ illegal activity ಯಿಂದ ಆ fishermen ಗೆ ಏನು ದುಷ್ಪರಿಣಾಮ ಆಗಿದೆ ಎನ್ನತಕ್ಕಂತಹ ವಿಚಾರ ಕೂಡ ಪ್ರಸ್ತಾಪವಾಗಿದೆ. ಅದೇನು ಮಂತ್ರಿಗಳಿಗೆ ಗೊತ್ತಿಲ್ಲ ಎನ್ನತಕ್ಕಂತಹ ಪ್ರಶ್ನೆ ಅಲ್ಲ. ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ ಪ್ರೈವೇಟ್ ಲಿಮಿಟೆಡ್‌ಗೆ ಬೇಲಿಕೇರಿ ಬಂದರಿಗೆ ನೀಡಿರುವ ಜಮೀನಿನ ಲೀಸ್ ಅನ್ನು ರದ್ದುಗೊಳಿಸುವ ಬಗ್ಗೆ ಬಡ ಮೀನುಗಾರರನ್ನು ರಕ್ಷಿಸುವ ಬಗ್ಗೆ ಒಂದು ದೊಡ್ಡ ಮನವಿ ಇದೆ. ಇದನ್ನು ನಾನು ಅವರ ಹತ್ತಿರ ನೇರವಾಗಿ ಸಂಪರ್ಕ ಮಾಡಿ ಕೇಳಿ ಅವರ ಹತ್ತಿರ ಮಾಹಿತಿಯನ್ನು ಪಡೆದಿರತಕ್ಕಂಥದ್ದು, ಅವರು ಕೊಟ್ಟಿರತಕ್ಕಂತಹ ಅರ್ಜಿಗಳು ಎಲ್ಲವನ್ನೂ ಕೂಡ ಇವತ್ತು ಪ್ರಸ್ತಾಪ ಮಾಡಿದ್ದೇವೆ. ಈ ವಿಚಾರ ಇಷ್ಟಕ್ಕೇ ಬಿಡಲಿಲ್ಲ. ಅಧಿಕಾರಿಗಳು ಸರ್ಕಾರಕ್ಕೆ ಹಾಗೂ ಮಂತ್ರಿಗಳಿಗೆ ಅಷ್ಟೇ ವರದಿ ಮಾಡಲಿಲ್ಲ. Matter went to the court also. High Court and Supreme Court ನಲ್ಲಿ ಕೂಡ encroachment ಆಗಿರತಕ್ಕಂಥದ್ದನ್ನು ಯಾವುದೇ ಕಾರಣದಿಂದಲೂ ರೆಗ್ಯುಲರೈಸ್ ಮಾಡಬೇಡಿ. ಇವರನ್ನು ಒದ್ದು ಆಚೆಗೆ ಹಾಕಿ ಎಂದು ಹೈಕೋರ್ಟ್‌ನವರು ಹೇಳಿದ್ದರು. ಸುಪ್ರೀಂಕೋರ್ಟಿನವರು ರೆಗ್ಯುಲರೈಸ್ ಮಾಡಬೇಡಿ ಎಂದು ಹೇಳಿದರು. ಅಷ್ಟೆಲ್ಲಾ ಆದ ಮೇಲೂ ಕೂಡ ಸುಪ್ರೀಂ ಕೋರ್ಟಿನವರು ಏನು ಹೇಳಿದರು. The Petitioner would be at liberty to how use the 1959 jetty. ಅದನ್ನು ಉಪಯೋಗಿಸುತ್ತಿರುವವರು ಯಾರು? ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ. ಅವರು ಕಾಂಗ್ರೆಸ್‌ನವರೇ ಇರಬಹುದು. ಅವರು ಎಷ್ಟು ಎಕ್ಸ್‌ಪೋರ್ಟ್ ಮಾಡುತ್ತಾರೆಂದರೆ, ಒಂದೊಂದು ವೆಸಲ್, 31.10.2009ಕ್ಕೆ ಒಂದು ವೆಸಲ್ ಕಳುಹಿಸುತ್ತಾರೆ. 8.11.09ಕ್ಕೆ ಒಂದು ವೆಸಲ್ ಕಳುಹಿಸುತ್ತಾರೆ. ಒಂದು ಶಿಪ್‌ಮೆಂಟ್ ಅಂದರೆ 40 ರಿಂದ 50,000 ಟನ್ ನಷ್ಟು ಅದಿರನ್ನು ಕಳುಹಿಸುತ್ತಾರೆ. 3 ದಿವಸಕ್ಕೆ, ನಾಲ್ಕು ದಿವಸಕ್ಕೆ ಒಂದು ವಾರಕ್ಕೆ ಅಂತರದಲ್ಲಿ ಒಂದೊಂದು ಶಿಪ್ಪನ್ನು ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಯವರು ಕಳುಹಿಸುತ್ತಾರೆ. ಯಾವ ಯಾವ ಕಂಪನಿಯವರು ಅದರಲ್ಲಿ involve ಆಗಿದ್ದಾರೆ ಎನ್ನುವುದಕ್ಕೆ ಮೆಚಾಡೋರ್ ಅಂಡ್ ಸನ್ಸ್, ಹೀರಾಲಾಲ್ ಅಂಡ್ ಕಂಪನಿ, ತರೂಸಾ ಶಿಪ್ಪಿಂಗ್, ಮರ್ಚೆಂಟ್ ಶಿಪ್ಪಿಂಗ್, ಕೊಚ್ಚಿನ್ ಶಿಪ್ಪಿಂಗ್, ಟೂರ್ ಶಿಪ್ಪಿಂಗ್, JSC ಶಿಪ್ಪಿಂಗ್, ಬಹಳ ಇದೆ ಬಿಡಿ. ಅವರೆಲ್ಲಾ export ನಲ್ಲಿ involve ಆಗಿದ್ದಾರೆ. ಈ ದಂಧೆ ಎನ್ನತಕ್ಕಂಥದ್ದು ಕೇವಲ ಯಾರಿಗೋ

ಒಬ್ಬರಿಗೆ ಅಲ್ಲ. Starting from the mining area up to the export ಬಹಳಷ್ಟು ಅಂತರದಲ್ಲಿ ಇವತ್ತು ಇವರೆಲ್ಲರೂ involve ಆಗಿದ್ದಾರೆ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಅಧ್ಯಕ್ಷರೆ, ಬಹುಶಃ ಇದು ಸರ್ಕಾರಕ್ಕೂ ಗೊತ್ತಿರಬಹುದು. ಬಹುಶಃ ಬಿ.ಜೆ.ಪಿ. ನಾಯಕರಾದ ಯಡಿಯೂರಪ್ಪನವರು ಶ್ರೀರಾಮನ ಬಗ್ಗೆ ಬಹಳ ಅಭಿಮಾನವನ್ನು ಇಟ್ಟುಕೊಂಡಿರತಕ್ಕಂಥವರಾಗಿದ್ದಾರೆ. ಯಾವ ರೀತಿಯಾಗಿ ಶ್ರೀರಾಮ ಲಂಕಾ ಪಟ್ಟಣಕ್ಕೆ ಹೋದ ಎನ್ನತಂಕ್ಕಂಥದ್ದನ್ನು ನಾವು ಕೇವಲ ಓದಿ ತಿಳಿದುಕೊಳ್ಳುತ್ತೇವೆ. ನಾವ್ಯಾರೂ ಕಣ್ಣಾರೆ ನೋಡಿಲ್ಲ. ದಯಮಾಡಿ ನಾನು ಹೇಳುತ್ತೇನೆ, ನೀವು ಕಣ್ಣಾರೆ ಬೇಲಿಕೇರಿ ಪೋರ್ಟ್‌ಗೆ ಹೋಗಿ ನೋಡಬೇಕು. ಅಧ್ಯಕ್ಷರೆ ನೀವು ಹೋಗುವುದಕ್ಕಾಗುವುದಿಲ್ಲ. ಮೊದಲು ಏನಿತ್ತು ಎಂಬ ಬಗ್ಗೆ ಈ ಮ್ಯಾಪ್‌ನಲ್ಲಿದೆ. ನೋಡಿ ಇದೇ ಬೇಲಿಕೇರಿ ಪೋರ್ಟ್. (ಅಧ್ಯಕ್ಷರಿಗೆ ಮ್ಯಾಪ್ ತೋರಿಸುತ್ತಿದ್ದರು) ಇಲ್ಲಿರುವುದೇ ಗುಡ್ಡ. ಇದು totally revenue land. ಇದು National Highway. ಇಲ್ಲಿರತಕ್ಕಂಥ ಗುಡ್ಡಕ್ಕೆ ಈಗಿರುವುದೇನು ಎಂದು ಹೇಳಿದರೆ, ನೋಡಿ ಅವರು ಕಟ್ಟಿರುವುದು ಇದು ರಾಮ ಸೇತುವೆ. ಇದನ್ನು ನೀವು ನೋಡಬೇಕು ಇದು ಯಾವತ್ತಿಂದ ನಡೆಯುತ್ತಿದೆ? ಕೇವಲ ಇವತ್ತಲ್ಲ, ಬಹಳ ವರ್ಷದಿಂದ ನಡೆಯುತ್ತಿದೆ. ಆವತ್ತು ಯಾರು ಅಧಿಕಾರದಲ್ಲಿ ಇದ್ದರೋ ಆ ಪ್ರಶ್ನೆ ಬೇರೆ. ಅದರ ಮೇಲೆ ಏನು Action ತೆಗೆದುಕೊಳ್ಳಲಾಗಿದೆ? ಇದು ಸರ್ಕಾರಕ್ಕೆ ಬರಲಿಲ್ಲವೆ? ಮುಖ್ಯಮಂತ್ರಿಗಳ ಗಮನಕ್ಕೆ ಬರಲಿಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):– ಮಾನ್ಯ ಜಯಚಂದ್ರರವರೆ, ಈಗ ನೀವು ಹೇಳಿದಿರಲ್ಲ ರಾಮ ಸೇತುವೆ ಬಗ್ಗೆ. ಇದರ ಬಗ್ಗೆ ನನ್ನ ಗಮನಕ್ಕೆ ಬಂದು ಮೂರ್‍ನಾಲ್ಕು ದಿವಸಗಳಾಯಿತಷ್ಟೆ. ನೀವು ನನ್ನನ್ನು ತಪ್ಪು ತಿಳಿದುಕೊಂಡರೂ ನಾನೇನು ಮಾಡುವುದಕ್ಕಾಗುವುದಿಲ್ಲ. ಒಂದು ವಾರದಿಂದೀಚೆಗೆ ಇದೇ ಮ್ಯಾಪನ್ನು ತಂದುಕೊಟ್ಟವರು ನಿಮಗೂ ಇದನ್ನೇ ತಂದುಕೊಟ್ಟಿದ್ದಾರೆ. ತತ್‌ಕ್ಷಣ ಅದನ್ನು ರದ್ದು ಮಾಡುತ್ತೇನೆ. ನೀವೆಲ್ಲರೂ ಸಹಕಾರ ಕೊಡಿ. ಪತ್ರ ಬರೆಯುತ್ತೇನೆ. ಯಾವುದನ್ನೂ ಪರ್ಮಿಟ್‌ಗಿಂಥ ಹೆಚ್ಚುವರಿಯಾಗಿ ಕಾನೂನುಬಾಹಿರವಾಗಿ ಅವನು ಮಾಡಿದ್ದಾನೆ ಅದನ್ನು ಯಾವ ವರ್ಷವೇ ಕಾನೂನುಬಾಹಿರವಾಗಿ ಮಾಡಿರಲಿ, ಅವನೇ ಇಲ್ಲಿ ದೊಡ್ಡ ಲೂಟಿಯನ್ನು ಮಾಡಿರುವವನು, ಬಹಳ ಮೋಸಗಾರ, ಆ ಮೂಲಕವಾಗಿಯೇ ಇವೆಲ್ಲಾ ಹೋಗಿರುವಂಥದ್ದು, ಒತ್ತುವರಿಯಾಗಿರುವಂಥದ್ದನ್ನು ತಕ್ಷಣ ರದ್ದು ಮಾಡುತ್ತೇನೆ. ನೋಟಿಸ್ ಕೊಡುತ್ತೇನೆ. ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮುಖ್ಯಮಂತ್ರಿಗಳೆ, ಈಗಾಗಲೇ ನೋಟಿಸ್ ಕೊಟ್ಟಿದ್ದಾರೆ.

ತತ್‌ಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಜಯಚಂದ್ರರವರೆ, ನೋಟಿಸ್ ಕೊಟ್ಟ ಹಾಗೆ ಮಾಡುವುದು, ಒಳಗಡೆ ಸೇರಿಕೊಂಡು ವಸೂಲಿ ಮಾಡಿಕೊಂಡು ಸುಮ್ಮನಾಗುವುದು, ಆ ದಂಥೆ ಬೇರೆ. ಈಗ ನಾನೇನು ಮಾಡುತ್ತೇನೆ ನೋಡಿ.

ಶ್ರೀ ಟಿ.ಬಿ. ಜಯಚಂದ್ರ:- ಈಗ ಅದಲ್ಲದೇ ಅದಕ್ಕೆ ಪೂರಕವಾಗಿ ಅರಣ್ಯ ಮತ್ತು ಪರಿಸರ ಸಚಿವರು ಒಂದು ಕಾಗದವನ್ನು ಬರೆದಿದ್ದಾರೆ. ಬಹುಶಃ ನೀವು ಇದನ್ನು ಅಲ್ಲಗೆಳೆಯುವುದಿಲ್ಲವೆಂದು ಕಾಣುತ್ತದೆ. ಅದರಲ್ಲಿ ಹೇಳಿರುವ ಒಂದು ವಿಶೇಷವಾದಂಥ ಮಾತು ಇರುವುದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಈ The Forest Advisory Committee resolution issued on May 10, 2010 which clearly expressly directed that such a mining be stopped. This is a complete and to blatant contra version of the FAC Act directive, as you know FAC is the statutory committee of Government of India. ಕಮಿಟಿಯಲ್ಲಿ ತೀರ್ಮಾನ ಆಗಿರತಕ್ಕಂಥದ್ದು, I am sure you will agree with violation of the order in the matter of serious concern. ಯಾವುದು they have named. The Advisory Committee has recommended the following course of action in the matter of mining lease 2010 on which illegal extraction has been carried out by three mine owners. S.B. Minerals, Trident Minerals, VM Minerals. ಮೂರು ಜನ, ಅಷ್ಟನ್ನೇ ಹೇಳಿಲ್ಲ, ಇವರು ಇನ್ನೊಂದನ್ನು ಏನು ಹೇಳಿದ್ದಾರೆಂದರೆ ಇದು ಬಹಳ ಮುಖ್ಯವಾಗಿರತಕ್ಕಂಥದ್ದು, till the work of demarcation and survey in these mines is completed, the forest clearance of these mines i.e., M/s. S.B. Minerals, ML 2550, M/S. Trident Minerals, ML 2313, M/s. V.M. Private Limited. ML 988 will remain temporarily withdrawn. ಕಂಪ್ಲೀಟ್ ಸ್ಟಾಪ್ ಮಾಡಿ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. The withdraw will be considered to be revoked only after detail report is submitted by the karnataka Forest Department, narrating the complaints of the individuals cases. The Government of India is proactive in helping this. The Forest Department will ensure the during period no

transportation of the minerals is allowed till the removal of the withdrawal of approval. Complete stop ಮಾಡಿ ಎನ್ನುವ ಮಾತನ್ನು ಆಡಿದ್ದಾರೆ. Further responsibility should be fixed on erring officials during that period whose irregularity has taken place and case has not been concluded. ಅಂದರೆ ಫಾರೆಸ್ಟ್‌ನ್ನು ಆಕ್ಷನ್‌ನಲ್ಲಿ ಹಾಕದೇ ಇರತಕ್ಕಂಥದ್ದಕ್ಕೆ ಅವರ ಮೇಲೆ action ತೆಗೆದುಕೊಳ್ಳಿ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಇನ್ನೊಂದು ಮಾತನ್ನು ನಾನು ಬಹಳ ಸೂಕ್ಷ್ಮವಾಗಿ ಹೇಳಬಯಸುತ್ತೇನೆ. ಫಾರೆಸ್ಟ್‌ನಲ್ಲಿ ಹೇಗೆ ನಡೆಯುತ್ತೆಂದು, ಏಕೆಂದರೆ ಮುಖ್ಯಮಂತ್ರಿಗಳೆ, ನೀವೇ ಫಾರೆಸ್ಟ್ ಮಂತ್ರಿಗಳಾಗಿದ್ದೀರಿ. ಫಾರೆಸ್ಟ್ ಹೇಗೆ ಅನ್ಯಾಯವಾಗುತ್ತಿದೆ ಎಂದು ದಯವಿಟ್ಟು ನಿಮಗೆ ಗೊತ್ತಾಗಬೇಕು. ನಿಮ್ಮ ಅಧಿಕಾರಿಗಳು ನಿಮಗೆ ಹೇಗೆ ತಪ್ಪು ಮಾಹಿತಿಯನ್ನು ಕೊಡುತ್ತಾರೆ ಎಂಬುದನ್ನು ನಾನು ಧೈರ್ಯವಾಗಿ ಹೇಳಬಯಸುತ್ತೇನೆ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಫಾರೆಸ್ಟ್ ಬಗ್ಗೆ Forest Conservation Act of 1980 and Karnataka Forest Act ಎನ್ನುವ ಎರಡು ಆ್ಯಕ್ಟ್‌ಗಳಿವೆ. ಬಹುಶಃ ಇದನ್ನು ನಾವ್ಯಾರೂ ನೋಟಿಸೇ ಮಾಡಿಲ್ಲ. Forest Conservation Act is very stringent, Karnataka Forest Act is not so effective. ಬಹುಶಃ ನನಗನಿಸುತ್ತದೆ, ಇದನ್ನು ಏನಾದರೂ ಮಾಡಿ ಆ ಆ್ಯಕ್ಟ್‌ನ್ನು ರಿಫೀಲ್ ಮಾಡಿ on the lines of conservation Act ಎಂದು ನೀವು ಆ್ಯಕ್ಟ್ ತಂದರೆ ಬಹುಶಃ ಈ ದಂಧೆ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ. ಈಗ ಇವರು ಏನು ಮಾಡುತ್ತಾರೆಂದರೆ, ಇವರು ಮೆಟೀರಿಯಲ್‌ನ್ನು cease ಮಾಡುತ್ತಾರೆ, ಆಗ ಕೇಸ್ ಹಾಕುವುದು Forest Act ಪ್ರಕಾರ. ಈ Forest Act ನಲ್ಲಿ ಏನಿದೆಯೆಂದರೆ, cease ಮಾಡಿದಂಥ ಮೆಟೀರಿಯಲ್‌ನ್ನು ಯಾರಾದರೂ ಅವರಿಗೆ ವಾಪಸ್ ಕೊಡುವುದಕ್ಕೆ ಕಾನೂನು ಇದೆಯೇ ಸ್ವಾಮಿ? ನಮ್ಮ ದರಿದ್ರ ಈ Act ನಲ್ಲಿದೆ Forest Act ಪ್ರಕಾರ ವಾಪಸ್ ಕೊಟ್ಟುಬಿಡುವುದು compound ಮಾಡಿ. Compound ಮಾಡಿ ಅವರಿಗೇ ಮೆಟೀರಿಯಲ್‌ನ್ನು ವಾಪಸ್ ಕೊಟ್ಟುಬಿಡುವುದು. ಈ ರೀತಿ ಮಾಡಿದರೆ ಏನು ಭಯ ಅವನಿಗೆ ಬರುತ್ತದೆ ಹೇಳಿ. ಇಂಥ Act ಗಳನ್ನು ನಾವಿನ್ನೂ ಇಟ್ಟುಕೊಂಡಿದ್ದೇವೆ. ಏಕೆ ಇದು ನಿಮ್ಮ ಅಧಿಕಾರಿಗಳ ಗಮನಕ್ಕೆ ಬರಲಿಲ್ಲವೆ? ಅಧಿಕಾರಿಗಳು ಯಾರೂ ಕೂಡ ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಿಲ್ಲವೆ? ಇದಕ್ಕಿಂತ ಹೆಚ್ಚಾಗಿ ಇನ್ನೂ ಒಂದಿದೆ. Form No. 27, Form No 31 and Form No. 34 ಎಂದು ಒಟ್ಟು ಮೂರು ಫಾರ್ಮ್‌ಗಳಿವೆ. ದಯಮಾಡಿ ನಿಮ್ಮ ಅಧಿಕಾರಿಗಳಿಗೆ ಹೇಳಿ, ಎಷ್ಟು ಫಾರ್ಮ್ ನಂಬರ್ 27 ಅನ್ನು issue ಮಾಡಿದ್ದೀರಿ, ಫಾರ್ಮ್ ನಂಬರ್ 31 ಮತ್ತು ಫಾರ್ಮ್ ನಂಬರ್ 34

ಅನ್ನು ಒಟ್ಟು ಎಷ್ಟು issue ಮಾಡಿದ್ದೀರಿ ಎಂಬ ಬಗ್ಗೆ ಮಾಹಿತಿಯನ್ನು ತಂದಿಡಿ ಎಂದು ನಿಮ್ಮ ಅಧಿಕಾರಿಗಳಿಗೆ ಹೇಳಿ. ಆಗ ಅಧಿಕಾರಿಗಳ ಬಂಡವಾಳ ಬಯಲಾಗುತ್ತದೆ. ಅಧಿಕಾರಿಗಳು ಷಾಮೀಲಾಗಿರುವ ಬಂಡವಾಳ ಬಯಲಾಗುತ್ತದೆ. Form No. 27, ಮೈನ್‌ನಿಂದ, ಅಂದರೆ ಫಾರೆಸ್ಟ್‌ನಿಂದ ಡಂಪಿಂಗ್ ಯಾರ್ಡ್‌ಗೆ ಹೋಗಬೇಕಾದರೆ ಒಂದು ಲೈಸೆನ್ಸ್‌ನ್ನು ಕೊಡಬೇಕು. ಫಾರೆಸ್ಟ್ ಏರಿಯಾದಿಂದ ಡಂಪಿಂಗ್ ಯಾರ್ಡ್‌ಗೆ, ಸ್ಟಾಕ್ ಯಾರ್ಡ್‌ಗೆ ಹೋಗಬೇಕೆಂದರೆ Form No. 27 ಅನ್ನು issue ಮಾಡಬೇಕು. Form No. 31 ಅನ್ನು From Dumping Area to the Shipment ಗಾಗಿ ಕೊಡಬೇಕು. ಇನ್ನು Form No. 34 Stock Register ಗೆ ಸಂಬಂಧಪಟ್ಟದ್ದು. ಈ ಸ್ಟಾಕ್ ರಿಜಿಸ್ಟರ್‌ನ್ನು ನೀವು ನೋಡುವುದಕ್ಕೆ ಆಗುವುದಿಲ್ಲವೆ? ಸ್ಟಾಕ್ ರಿಜಿಸ್ಟರ್‌ನ್ನು ತರಿಸಿ ನೋಡೋಣ. ಇವರೇನು ಮಾಡಿದರು ನಿಮಗೆ ಗೊತ್ತೆ. ಇವರು Form No. 27 ಗೂ ಹೋಗಲಿಲ್ಲ. Form No. 34 ಗೂ ಹೋಗಲಿಲ್ಲ. Form 31 ಅನ್ನು way permit ಎಂದು ಇವರು ಕೊಟ್ಟುಬಿಟ್ಟರು ಬಸವರಾಜುರವರೆ. ಅಂದರೆ ಎಲ್ಲಿಂದ ಮೆಟೀರಿಯಲ್ ಹೋಯಿತು ಮತ್ತು ಇಲ್ಲಿಗೆ ಮೆಟೀರಿಯಲ್ ಹೋಗುತ್ತದೆ ಎಂಬ ಬಗ್ಗೆ description ಇಲ್ಲದ ಖಾಲಿ blank form ಗಳು. ಏನಿದರ್ಥ? ಈ ಫಾರ್ಮ್‌ಗಳು Forest Conservation Act ನಲ್ಲಿ ಇರತಕ್ಕಂಥದ್ದು. ಅದನ್ನೇ ಇವತ್ತು ಮಂತ್ರಿಗಳು reiterate ಮಾಡಿದ್ದಾರೆ. Conservation Act ನಲ್ಲಿರುವ provision ಅನ್ನು ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು it is an offence punishable under Forest Conservation Act of 1980. ನೀವು ಇದರಲ್ಲಿ 2002–03 ರಿಂದ ಅಂದರೆ ನಮ್ಮ ಕಾಲದಿಂದ ಹಿಡಿದು 2007 ರವರೆಗೂ Forest offences case ಎಷ್ಟಾಗಿದೆಯೆಂದರೆ, ರಿಪೋರ್ಟ್ ಆಗಿರತಕ್ಕಂಥದ್ದು 2,85,833 ಮೆಟ್ರಿಕ್ ಟನ್ಸ್, ಅದರ ಮೇಲೆ ನೀವು ಫೈನ್ ಹಾಕಿ ನಿಮಗೆ ಬಂದಿರತಕ್ಕಂಥ ವರಮಾನ ಎಷ್ಟೆಂದರೆ ಕೇವಲ 17.89 ಲಕ್ಷ. ಅದರ ಬದಲು ನೀವು ಅದರ ಮೇಲೆ ರೆವಿನ್ಯು ಕಲೆಕ್ಷನ್ ಮಾಡಿದ್ದರೆ 17.25 ಕೋಟಿ ರೂ.ಗಳು ಬರುತ್ತಿತ್ತು. ಇದೊಂದು ಉದಾಹರಣೆಯನ್ನು ನಿಮಗೆ ಹೇಳುತ್ತಿದ್ದೇನಷ್ಟೆ. ಇದೊಂದು test check. ನಿಮಗೆ ಅಧಿಕೃತ ದಾಖಲೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಸಿಗುತ್ತದೆ. ಅದನ್ನು ತನ್ನಿ. ಆದರೆ ನಿಮ್ಮ Form 31 ಅನ್ನೇ misuse ಮಾಡಿ ಇವತ್ತು ಈ ರೀತಿಯಾಗಿರತಕ್ಕಂಥ ದಂಧೆ ಮಾಡುವುದಕ್ಕೆ ಸಾಧ್ಯವಾಗಿದೆ. ಏಕೆಂದರೆ ಇದರಲ್ಲಿ ಐರನ್ ಓರ್ ಎಲ್ಲಿತ್ತು ಮತ್ತು ಎಲ್ಲಿಗೆ ಹೋಗುತ್ತಿದೆ ಎನ್ನತಕ್ಕಂಥ ಯಾವ ಮಾಹಿತಿಯೂ ಇಲ್ಲ. ಅದಕ್ಕಿಂತ ಹೆಚ್ಚಾಗಿ ಹೇಳುವುದೇನೆಂದರೆ ಫಾರ್ಮ್ 31 ಅನ್ನು ಡಿ.ಸಿ.ಎಫ್.ಗಳು, ರೂಲ್ಸ್‌ನ್ನು ಅವರವರ ಅನುಕೂಲಕ್ಕೆ ತಕ್ಕ ಹಾಗೆ change ಮಾಡಿಕೊಂಡು ಬಂದರು.

2002 ರಿಂದಲೂ ಅವರ ಅನುಕೂಲಕ್ಕೆ ತಕ್ಕಂತೆ change ಮಾಡಿಕೊಂಡೇ ಬಂದರು. ಆ Form 31 ಅನ್ನು ಮೈನ್ ಓನರ್ ಕೈಗೇ ಕೊಟ್ಟುಬಿಡುವುದು. ನೀನೇ ಎಂಟ್ರಿ ಮಾಡಿಕೋ ಎಂದು ಅವನ ಕೈಗೇ ಇದನ್ನು ಕೊಟ್ಟುಬಿಡುವುದು. ಅವನು ಎಂಟ್ರಿ ಮಾಡಿದರೆ ಏನಾಗುತ್ತದೆ ಎನ್ನತಕ್ಕಂಥದ್ದನ್ನು ಯೋಚನೆ ಮಾಡಿ. ಇವತ್ತೂ ಕೂಡ ಇದೇ procedure ಇರುವುದು. ಇದೇ custom practice ಇರುವುದು. ಆದರಿಂದಲೇ ಭ್ರಷ್ಟಾಚಾರ ನಡೆಯುತ್ತಿರುವುದು. ಇವತ್ತು ಮುಖ್ಯವಾಗಿ Forest conservation Act ನಲ್ಲಿ leases ಕೊಡುತ್ತೀರಲ್ಲ, ಅದರಲ್ಲಿ section 2ರ ಪ್ರಕಾರ principle clearance and final clearance ಎಂದು ಎರಡು ಇರುತ್ತದೆ. ಆದರೆ principle clearance ತೆಗೆದುಕೊಳ್ಳುವುದು, ಹೊಡೆಯುವುದಕ್ಕೆ ಪ್ರಾರಂಭ ಮಾಡುವುದು. ಇದು ನಡೆಯುತ್ತಿರತಕ್ಕಂಥಾದ್ದು. ಇದನ್ನು ಯಾರೂ describe ಮಾಡಿ ಹೇಳುವುದಕ್ಕೆ ಬಂದಿರಲಿಕ್ಕಿಲ್ಲ. ಬಂದಿದ್ದರೂ ಕೂಡ ನಿಮಗೆ ಕೇಳುವಷ್ಟು time ಇರಲಿಲ್ಲ. ಇವತ್ತು ನಾನು ಹೇಳುತ್ತೇನೆ, in terms of section 2 of the Forest Conservation Act 1980, no forest land can be diverted for non forest purposes without prior approval of Government of India. Further, in terms of section 3A of the act whoever contravenes or abates, contraventions of any of the provisions of section 2 shall be deemed to be guilty of the offences and shall be liable to be proceed against and punished accordingly.

The violations should be reported to the Government of India indicating the names of persons prima facie responsible for the contraventions of the act. The Central Government will authorize any officer not below the rank of the conservator of Forest to file the complaint against the persons found guilty of offences under the act, having jurisdiction in the matter. The test checked records of the forest department. Department ನಿಂದ ತರಿಸಿ ನೋಡಿ, ಅಲ್ಲಿ ಏನು ಅವ್ಯಾಹತವಾಗಿ ದಂಧೆ ನಡೆದಿದೆ ಎಂದು ನಿಮಗೆ ಅರ್ಥವಾಗುತ್ತದೆ. ನನು ಮೊನ್ನೆ ಮಾತನಾಡುವಾಗ ಹೇಳಿದೆ. ಇಲ್ಲಿಯವರೆಗೆ ಎಷ್ಟು ಹೋಗಿರಬಹುದು ಎನ್ನುವುದಕ್ಕೆ ಅಂದಾಜು ಇದೆ. 2006ರಿಂದ 2008ರವರೆಗೆ 5,36,39,000 ಲಕ್ಷ ಟನ್‌ಗಳು ಹೋಗಿದೆ. ಇದು ನಮ್ಮ ಅಧಿಕಾರಿಗಳು ಅಂದಾಜು

ಮಾಡಿರುವುದು. ಇವತ್ತು ಇಷ್ಟು ಹೋಗಿರತಕ್ಕಂಥಾದ್ದು. ಈ information ನಿಮಗೆ ಕೊಡುತ್ತಾರೋ ಇಲ್ಲವೋ? ಕೋರಮಂಗಲದಲ್ಲಿ Forest ಗೆ ಸಂಬಂಧಪಟ್ಟಂಥ office ಇದೆಯಲ್ಲಿ ಅಲ್ಲಿಂದ ಮಾಹಿತಿಯನ್ನು ತರಿಸಿ. Government of India office ಇಲ್ಲಿಯೇ ಇದೆ. ಇದು ಕೇವಲ ಎರಡು ಮೂರು ವರ್ಷಗಳಲ್ಲಿ ಇಷ್ಟೊಂದು ಆಗಿದೆ, 2002ರಿಂದಲೇ ನಡೆದಿದೆ ಎಂದರೆ ಇಲ್ಲಿಯವರೆಗೆ ಎಷ್ಟು ನಡೆದಿದೆ ಎನ್ನುವುದನ್ನು ಯೋಚನೆ ಮಾಡಿ. ಇದರ ಲಾಭ ಯಾರಿಗಾಗಿದೆ? ನಾನು ಲಾಭ ಇಂತಹವರಿಗೆ ಆಗಿದೆ ಎಂದು ಹೇಳುವುದಿಲ್ಲ. Forest ನಿಂದ ಹಿಡಿದುಕೊಂಡು export ವರೆಗೂ ಕೂಡ ಅನೇಕ ಕೈಗಳು ಸೇರಿವೆ. ಅದನ್ನು ಮೈನಿಂಗ್ ಮಾಫಿಯಾ ಎಂದು ಕರೆಯದೇ ಇನ್ನೇನು ಕರೆಯಬೇಕು? ಆ ಮಾಫಿಯಾ ಇವತ್ತು ಈ ದಂಧೆಯಲ್ಲಿ ತೊಡಗಿ ಏನೆಲ್ಲ ಮಾಡಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ನಮಗೆ ಏಕೆ ಅನುಮಾನ ಬಂತು? ನಿಮ್ಮ ಮೇಲೆ ಅನುಮಾನ ಬರುವುದಕ್ಕೆ ಕಾರಣವೇನು? ಇದರ ಜವಾಬ್ದಾರಿಕೆಯನ್ನು ನಾವು ವಿರೋಧ ಪಕ್ಷದವರು ನಿಮ್ಮ ಮೇಲೆ ಫಿಕ್ಸ್ ಮಾಡುತ್ತಿದ್ದೇವೆ. ನಾನು ಆಗಲೇ constitution ಓದಿದೆ. you are the executive head of the state. ನಿಮ್ಮ ಆಡಳಿತವನ್ನು ಚಲಾಯಿಸುವುದಕ್ಕೆ ನಿಮಗೆ ಅಧಿಕಾರವಿದೆ. ನೀವು ಸಂವಿಧಾನವನ್ನು ತಲೆ ಮೇಲೆ ಇಟ್ಟುಕೊಂಡು ಇಲ್ಲಿಗೆ ಬಂದಿದ್ದೀರಿ. ನೀವು ಯಾವ ಕಾರಣಕ್ಕೋಸ್ಕರ ಹೇಳಿದ್ದೀರಿ ಆ ಪ್ರಶ್ನೆ ಬೇರೆ. ನಿಮ್ಮ internal bickering ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದಿರು ಲೂಟಿ ಆಗುತ್ತಿರುವುದನ್ನು ತಡೆಯುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅಧಿಕೃತವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗ ನಾವು ಅದನ್ನು ಯಾವ ಅರ್ಥದಲ್ಲಿ ತಿಳಿದುಕೊಳ್ಳಬೇಕು? Is it not the break down of the constitution machinery? ಒಬ್ಬ ಮುಖ್ಯಮಂತ್ರಿಯಾಗಿರತಕ್ಕಂಥವರು ನನ್ನಿಂದ ತಡೆಯುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಬಹಿರಂಗವಾಗಿ ಹೇಳಿದಾಗ ಇನ್ನೇನು ಉಳಿದಿದೆ? ಆ ಕುರ್ಚಿಯ ಮಹತ್ವ ಏನು? ನೀವು ಮಾತುಮಾತಿಗೆ ನಾನು ಯಾವತ್ತೂ ಕೂಡ ಈ ನಾಡಿನ ನೆಲ, ಜಲ ಅಭಿವೃದ್ಧಿಗೋಸ್ಕರ ಕಂಕಣಬದ್ಧನಾಗಿದ್ದೇನೆ, ನನ್ನ ಪ್ರಾಣವನ್ನು ಕೊಟ್ಟರೂ ಕೊಡುತ್ತೇನೆ ಹೇಳುತ್ತೀರಿ. ಎಲ್ಲಿ ಸ್ವಾಮಿ? ಕೇವಲ ಎರಡು ವರ್ಷಗಳಿಗೆ ಐದೂವರೆ ಕೋಟಿ ರೂಪಾಯಿ ಅದಿರು ಅನಧಿಕೃತವಾಗಿ ಹೋಗಿದೆ. ಹೋದರೆ ಹೋಯಿತು, ಅದರಿಂದ ನಿಮಗೆ ಏನಾದರೂ ಲಾಭವಾಯಿತೇ ಸ್ವಾಮಿ? ನಿಮ್ಮ ರಾಜ್ಯದ ಬೊಕ್ಕಸಕ್ಕೆ ದುಡ್ಡು ಬಂದಿತೆ? ಸಾವಿರ ರೂಪಾಯಿ ಹಾಕುತ್ತೇವೆಂದು ಹೇಳಿದ್ದೀರಿ, ಅದನ್ನಾದರೂ ವಸೂಲು ಮಾಡಿದಿರಾ? ಮಾಡಲಿಲ್ಲ. ನಮ್ಮಲ್ಲಿ ಒಂದೇ ಒಂದು ರಸ್ತೆಗಳು ಸರಿಯಾಗಿಲ್ಲ. ನನ್ನ ಕ್ಷೇತ್ರದಲ್ಲಿ ನೀವು ನೋಡಿಬಿಟ್ಟರೆ ನಾವು ಏಕಪ್ಪ ಎಂಎಲ್ಎ ಆಗಿದ್ದೇವೆಂದು ಅನಿಸುತ್ತದೆ. ಎಲ್ಲಾ ರಸ್ತೆಯಲ್ಲಿ ಮೈನಿಂಗ್ ಲಾರಿಗಳು ಅಂತಹ ಕೆಟ್ಟ ಮಟ್ಟಕ್ಕೆ ಹೋಗಿದೆ ಎಂದರೆ ಯಾವ ಪುರುಷಾರ್ಥಕ್ಕೋಸ್ಕರ

ನಾವು ಇದನ್ನು encourage ಮಾಡಬೇಕು? ರಾಜ್ಯಕ್ಕೆ ಲಾಭವಿಲ್ಲ, ರಾಜ್ಯದ ಜನರಿಗೆ ಲಾಭ ಇಲ್ಲ, ನಮ್ಮಲ್ಲಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತಿಲ್ಲ. ಇವತ್ತು ಯಾರೋ ಕೆಲವೇ ಜನ ಇದರಲ್ಲಿ ಶಾಮೀಲಾಗಿರುವವರು 250 ಅಥವಾ 300 ಕಂಪನಿಗಳಿರಬಹುದು. ಅವರಿಗೆ ಲಾಭ ಮಾಡುವುದಕ್ಕೋಸ್ಕರ ನಾವು ರಾಜ್ಯವನ್ನು ಒತ್ತೇ ಇಟ್ಟುಬಿಟ್ಟೆವಲ್ಲ ಯಡಿಯೂರಪ್ಪನವರೇ. ನೀವು ಅರಣ್ಯ ಪ್ರದೇಶದಿಂದ ಬಂದಿರತಕ್ಕಂಥವರು. ಅರಣ್ಯದ ಮಹತ್ವ ಏನು ಎಂದು ಗೊತ್ತಿರತಕ್ಕಂಥವರು. ಅರಣ್ಯಗಳ ಗತಿ ಏನಾಗಿದೆ? ಮಾನ್ಯ ಅಧ್ಯಕ್ಷರೇ, ಇನ್ನೊಂದು ಹೊಸ ವಿಚಾರವನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಾವೆಲ್ಲ ಕುಳಿತು ಮಾತನಾಡುತ್ತೇವೆ. ಈ ಪರಿಸರಕ್ಕೆ ಆಗಿರುವಂತಹ ಹಾನಿಯಿಂದಾಗಿ ಎಲ್ಲೋ ಒಂದು ಕಡೆಗೆ environmental ನಲ್ಲಿ ಆದಂತಹ loss ಅನ್ನು assessment ಮಾಡುವಂತಹ ರೀತಿಯಲ್ಲಿ ನೀವು ಹೊಸದಾಗಿ ಒಂದು ಇಲಾಖೆಯನ್ನು ಮಾಡಬೇಕು loss to the environment ಎಂದು ಅದೂ ಕೂಡ audit ಆಗಬೇಕಾಗುತ್ತದೆ, ಅದೂ ಕೂಡ scrutiny ಆಗಬೇಕಾಗುತ್ತದೆ, ಅದಕ್ಕೂ ಕೂಡ preventive action ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಿಯವರೆಗೆ ನಾವು environment ಬಗ್ಗೆ ಗಮನಹರಿಸುವುದಿಲ್ಲ ಅಲ್ಲಿಯವರೆಗೂ ಕೂಡ ನಾವು ಕರ್ನಾಟಕಕ್ಕೆ, ಕರ್ನಾಟಕದ ತಾಯಿಗೆ ನಾವು ಏನೂ ಸಹಾಯ ಮಾಡುವುದಕ್ಕೆ ಆಗುವುದಿಲ್ಲ. ನಾವು ಯಾವ ಮಟ್ಟಕ್ಕೆ ಬಂದಿದ್ದೇವೆ? ನಾವು ಎಲ್ಲಿಗೆ ಹೋಗಿದ್ದೇವೆ? ನಾವು ಏಕೆ ಇಂತಹ ಹೊಸ ವಿಚಾರಗಳಿಗೆ ಚಿಂತನೆ ಮಾಡಬಾರದು? ಇವತ್ತು ಅದನ್ನು ಆಡಿಟ್ ಮಾಡಿದರೆ ಇಂತಹ leases ಕೊಡಬೇಕೋ ಬಿಡಬೇಕೋ ಎನ್ನುವುದು ನಮಗೆ ಅರ್ಥವಾಗುತ್ತದೆ. ರಾಜ್ಯದಲ್ಲಿ ನಿಮಗೆ ಗಣಿ ಗುತ್ತಿಗೆಗೋಸ್ಕರ ಬಂದಿರುವಂತಹ ಅರ್ಜಿಗಳು ಎಷ್ಟಿದೆ ಎನ್ನುವ ಮಾಹಿತಿಯನ್ನು ಹೇಳುವುದಾದರೆ 7,893 ಅರ್ಜಿಗಳು ಬಂದಿದೆ. ನಾನು ಇದನ್ನು ಆರ್‌ಟಿ ಆಕ್ಟ್‌ನಲ್ಲಿ ತೆಗೆದುಕೊಂಡಿದ್ದೇನೆ. ನಾನು ಈ ಮಾಹಿತಿಯನ್ನು ತೆಗೆದುಕೊಂಡು ಒಂದು ವರ್ಷವಾಯಿತು. ಅದಾದಮೇಲೆ ಇನ್ನು ಸಾಕಷ್ಟು ಬಂದಿರಬಹುದು. ನವೀಕರಣಕೋಸ್ಕರ ಬಂದಿರುವುದು 150 ಅರ್ಜಿಗಳು. ಇವೆಲ್ಲವನ್ನು ಕೊಡುವಂತಹ ಸಂದರ್ಭ ಬಂದಾಗ ದಯಮಾಡಿ ನಾನು ಹೇಳುತ್ತೇನೆ, ಕರ್ನಾಟಕದ ಸಂಪತ್ತು ಕರ್ನಾಟದಲ್ಲಿ ಉಳಿಯಬೇಕು ಎಂದರೆ ಕೈಗಾರಿಕೆಗಳಿಗೆ ಮಾತ್ರ ಕೊಡಿ, ಇನ್ಯಾರಿಗೂ ಕೊಡಬೇಡಿ. ಆಗ ನೀವು illegal transportation ಅನ್ನು ಇವತ್ತು curb ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾನು ಒಂದು ಮಾತು ಹೇಳುತ್ತೇನೆ, ಬಳ್ಳಾರಿಯಿಂದ ಬೇಲೆಕೇರಿಗೆ ಏಳು ಚೆಕ್‌ಪೋಸ್ಟ್ ಇದೆ. ನಾನು ಸ್ವತ: ಅನುಭವ ಪಟ್ಟಿರತಕ್ಕಂಥಾದ್ದು ಏನೆಂದರೆ ಆ ಏಳು ಚೆಕ್‌ಪೋಸ್ಟ್ ಇದ್ದರೂ ಕೂಡ ಮೊನ್ನೆ seize ಮಾಡಿದ ಐದು ಲಕ್ಷ ಟನ್‌ನಷ್ಟು ಮೆಟಿರೀಯಲ್ ಹೋಯಿತಲ್ಲ ಅದು ಹೇಗೆ ಹೋಯಿತು? ಅದು ಹೇಗೆ ಹೋಯಿತು

ಎನ್ನುವುದು ನಿಮಗೆ ಗೊತ್ತಾಗಬೇಕು. ಬಳ್ಳಾರಿಯಿಂದ ಒಂದು ಸಿಗ್ನಲ್ ಹೋಗುತ್ತದೆ. ಅವರು ಯಾವುದೋ ಒಂದು ನಂಬರ್ quote ಮಾಡುತ್ತಾರೆ. ಆ ನಂಬರ್ quote ಮಾಡಿದರೆ ಏಳು ಚೆಕ್‌ಪೋಸ್ಟ್‌ನಲ್ಲಿ ಯಾವ ಲಾರಿಯನ್ನು ಚೆಕ್ ಮಾಡುವುದಿಲ್ಲ. ಲಾರಿ ನೇರವಾಗಿ ಬೇಲೆಕೇರಿ port ಗೆ ಹೋಗುತ್ತದೆ. Shipment ಆಗುವವರೆಗೂ ಒಬ್ಬರ ಜವಾಬ್ದಾರಿ. Shipment ಆದಮೇಲೆ ಇನ್ನೊಬ್ಬರ ಜವಾಬ್ದಾರಿ. ಇದರಲ್ಲಿ ಇಂತಹವರೇ ಎಂದು ನಿರ್ದಿಷ್ಟವಾಗಿ ಹೇಳವುದಕ್ಕೆ ಆಗುವುದಿಲ್ಲ. ನಾವು ಆಧಾರವಿಲ್ಲದೇ ಸಾಕಷ್ಟು ಜನರ ಮೇಲೆ ಹೇಳಬಹುದು. ನೀವು ಐದು ಲಕ್ಷ ಟನ್ ಅಧಿಕೃತವಾಗಿ ಸೀಜ್ ಮಾಡಿರುವಂತಹ material ಇವರ ಕೈಕೆಳಗೆ ಇರುವಂಥಾದ್ದು ಹೋಗುತ್ತದೆ ಎಂದರೆ ಇದು ಯಾರ ವೈಫಲ್ಯ? Home minister ಯಾರು? Chief Minister ಯಾರು? ನಿಮಗೆ ಇದಕ್ಕಿಂತ ಉದಾಹರಣೆಗಳು ಬೇಕೇ? Is it not a failure of the administrative machinery?

Investigation officer and Assistant Conservator of Forest, Ankola ಅವರು ಒಂದು complaint ಕೊಡುತ್ತಾರೆ. "I am filing a complaint for a criminal breath of trust under section 405 and 406 of IPC and other appropriate laws. Complaint for theft of 379 and other appropriate laws and also filed against Paul and companies represented by authorized persons who have either or indirectly participated in the theft of the seized iron ore. All the companies or firms are being represented by their above named persons in charge who are responsible to the conduct of the day to day business of the above companies or firms who are vicariously liable for the commissions of various offences under the Karnataka Forest Act and rules". ಅಲ್ಲೂ ಕೂಡ Conservation Act ಅನ್ನು mention ಮಾಡಲಿಲ್ಲ. ಅದನ್ನು ಹಾಕಿದ್ದರೆ ಅವರು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. The presumption under law is that mineral wealth or Iron Ore belongs to the Goverment and unless otherwise through I have been quotient evident kindly register the case and deal with all the above accused perosns in accordance with law, a copy of the Lokayukta report would be

filed later. It is filed against seizure of Iron Ore Belekere port by Karnataka Forest Authorities. They have issued a notice to the Mallikarjuna Shipping Company. ಇದು ಬಿಡಿ, ಸಾಕಷ್ಟು ರೀತಿಯಲ್ಲಿ ಅವರು ಎಷ್ಟೆಷ್ಟು export ಮಾಡಿದ್ದಾರೆಂದು ಎಲ್ಲಾ ಇದೆ, ಅದನ್ನೆಲ್ಲಾ ನೀವು ಎಲ್ಲೋ ಒಂದು ಕಡೆಗೆ ಒಪ್ಪಿಕೊಳ್ಳುತ್ತೀರಿ. State admits the illegal Iron Ore exports from Belekere port ಇದರ ಮೇಲೆ High Courtನಲ್ಲಿ cases pending ಇದೆ, ಇದನ್ನು CBIಗೆ ಏಕೆ refer ಮಾಡಬಾರದೆಂದು ಇದೆ. ಹೌದು ತಪ್ಪಾಗಿರುವುದು ಆಗಿರುವಂಥದ್ದು ನಿಜ ನೀವು affidavit file ಎಂದು ಮಾಡುತ್ತೀರಿ ಆದರೆ ಅದನ್ನು ಮಾಡಿರುವವರು ಯಾರು? It was seized under a law according to the court directions. Complaint ಮಾಡಿರುವವರು ಒಬ್ಬ ಅಧಿಕಾರಿ. ಇದನ್ನೆಲ್ಲಾ ಮಾಡಿದಾಗ ನಾವು ಇದನ್ನು ಯಾವ ಭಾಷೆಯಲ್ಲಿ ಕರೆಯಬೇಕು, ತಾವು ಹೇಳಿ. ಪೊಲೀಸ್ ಇಲಾಖೆ ನಮ್ಮ ಕೈಯಲ್ಲಿ ಇದೆಯೇ? ಗೃಹ ಸಚಿವರಾದ ಮಾನ್ಯ ಆಚಾರ್ಯರವರು ಹೇಳಿದ ಹಾಗೆ ಕೇಳುವುದು, ಅದು ಬಿಟ್ಟರೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಕೇಳುವುದು. ಇಲ್ಲವೆಂದರೆ ಸಂಪುಟ ಸಚಿವರು ಹೇಳಿದ ಹಾಗೆ ಕೇಳುವುದು. ಇಲ್ಲಿ cabinet liability ಇರುತ್ತದೆ, collective responsibility ಅದರ ಮೇಲೆ ಮಾಡಿರಬಹುದು. ಇದನ್ನು ಮಾಡಿದವರು ಯಾರು? ಇದಕ್ಕಿಂತ ಇನ್ನು ಬೇರೆ ಏನಾದರೂ ನಿದರ್ಶನ ಬೇಕಾ? ನಾವು ಏನು ಮಾಡಿಲ್ಲವೆಂದು ಹೇಳುತ್ತೀರಿ. ಮಾನ್ಯ ಮುಖ್ಯಮಂತ್ರಿಯವರೆ ತಾವು ನಡೆಯಿರಿ ಹೋಗೋಣ ದೆಹಲಿಗೆ ಎಂದು ಮಾತು ಮಾತಿಗೂ ಹೇಳುತ್ತೀರಿ. ನಾವು ದೆಹಲಿಗೆ ಹೋಗಿ resolution ಮಾಡಿ ಬಿಡೋಣ, export ಅನ್ನು ban ಮಾಡೋಣವೆಂದು ಹೇಳುತ್ತೀರಿ. ತಾವು ಮುಖ್ಯಮಂತ್ರಿಗಳಾಗಿ ಈ ರೀತಿಯಾದಂಥ ವಿಚಾರಗಳನ್ನು ಬಹಿರಂಗ ಮಾಡುವಂಥದ್ದಲ್ಲ. ಎಲ್ಲೋ ಒಂದು ಕಡೆ ಅದು ದಾರಿ ತಪ್ಪಿಸುವಂಥ report ಆಗುತ್ತದೆ. mines ಅನುವಂಥದ್ದು. India is also a secretary for WTO. There are so many international agreements. Yes, we are bound by exports like this. ಆದರೆ value addition ಮಾಡುವುದಕ್ಕೆ ಏನು ತೊಂದರೆ ಇಲ್ಲ. ನಾನು ಹೇಳುತ್ತೇನೆ; ಮುಖ್ಯಮಂತ್ರಿಗಳಾದ ತಾವು ಒಂದೇ ದಿನದಲ್ಲಿ ಕಾಗದ ಬರೆದು, ಸಭೆಯನ್ನು ಕರೆದು ನಿಮ್ಮ intentions ತೋರಿಸಿದಾಕ್ಷಣಕ್ಕೆ Govt. of India ban ಮಾಡುತ್ತದೆ ಎನ್ನುವಂತಹ ನಂಬಿಕೆ ನನಗಂತೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಬಹಳ ಒಳ್ಳೆಯ ಚರ್ಚೆಯನ್ನು ಮಾಡುತ್ತಿದ್ದೀರಿ

ಮತ್ತೆ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ. ಈ ವಿಷಯ ಇನ್ನು ಎರಡು ದಿವಸಗಳು ಚರ್ಚೆಯಾಗಲಿ. ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರು ಮಾತನಾಡಬೇಕಾದರೆ, ಈ ದೇಶದ ಬಹುತೇಕ ಎಲ್ಲಾ ಬಂದರುಗಳಲ್ಲಿ ಅದು State Government control ಇರಲಿ, Central Goverment control ಇರಲಿ, ಇಷ್ಟು ದೊಡ್ಡ ಪ್ರಮಾಣದಲ್ಲಿ illegal ಆಗಿ Iron Ore ಹೊರಗಡೆ ಹೋಗುತ್ತಿದೆಯೆಂಬ ಮಾಹಿತಿಯನ್ನು ಕೊಟ್ಟರು. ನಾನು ಮಾತನಾಡಬೇಕಾದರೆ ಹೇಳಿದ್ದೇನೆ. ಕಳೆದ 8–10 ವರ್ಷಗಳಿಂದ ಇಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆಯೆಂಬುದನ್ನು ಬಹಿರಂಗವಾಗಿ ಅಂಕಿ–ಅಂಶದೊಂದಿಗೆ ಹೇಳಿದ್ದೇನೆ. ಯಾವುದನ್ನೂ ಮುಚ್ಚುಮರೆ ಮಾಡಿಲ್ಲ. ಇದುವರೆಗೂ ಇಷ್ಟು ಬಹಿರಂಗವಾಗಿ ಅಂಕಿ–ಅಂಶದೊಂದಿಗೆ ಹೇಳಿದ್ದೇನೆ. ಯಾವುದನ್ನೂ ಮುಚ್ಚುಮರೆ ಮಾಡಿಲ್ಲ. ಇದುವರೆಗೂ ಇಷ್ಟು ಬಹಿರಂಗವಾಗಿ ಈ ವಿಷಯ ಈ ಮನೆಯಲ್ಲಿ ಚರ್ಚೆಯಾಗಿರಲಿಲ್ಲ. ನಮ್ಮದು ಸರ್ಕಾರ ಪಾರದರ್ಶಕ ಸರ್ಕಾರವೆಂಬ ಕಾರಣಕ್ಕಾಗಿಯೋ, ಅಥವಾ ನಾವು ಕಬ್ಬಿಣದ ಅದಿರಿನ ಬಗ್ಗೆ ತೆಗೆದುಕೊಂಡ ಬಿಗಿ ನಿಲುವಿನ ಕಾರಣಕ್ಕೋ ಎಲ್ಲಾ ಹೊಲಸು ಹೊರಗಡೆ ಬರುತ್ತಿದೆ. ಇದರಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ದೇಶದ ಎಲ್ಲಾ ಭಾಗಗಳಲ್ಲಿ, ಎಲ್ಲಾ portಗಳಲ್ಲಿ illegal transaction ನಡೆಯುತ್ತಿದೆಯೆಂಬುದು ನಮಗೆ ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. Iron Ore ಮಾಫಿಯಾ , ಈ ಲಾಬಿ ಎಷ್ಟು ದೊಡ್ಡದಿದೆಯೆಂಬುದು ಇದರಿಂದ ಬಹಳ ಸ್ಪಷ್ಟವಾಗಿ ಗೊತ್ತಗುತ್ತದೆ. ಮಾನ್ಯ ಜಯಚಂದ್ರರವರೆ, ಇದಕ್ಕೆ ಪರಿಹಾರ ಏನು? ಇದು ನಾಳೆ ಬೆಳಿಗ್ಗೆ, ನಾಡಿದ್ದು ಬೆಳಿಗ್ಗೆ ಆಗುವುದಿಲ್ಲ. ಇದರಲ್ಲಿ ಎಲ್ಲರೂ involve ಆಗಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ದಂಧೆ ನಡೆಯುತ್ತಿರಬೇಕಾದರೆ, ಇದಕ್ಕೆ ಒಂದೇ ಒಂದು ಮಾರ್ಗವೆಂದರೆ ಇಡೀ ದೇಶದಲ್ಲಿ value added ಬಿಟ್ಟು ಒಂದು ಟನ್ ಕಬ್ಬಿಣದ ಅದಿರು ಹೊರದೇಶಕ್ಕೆ ಕಳುಹಿಸುವುದಿಲ್ಲವೆನ್ನುವಂಥ ಒಂದು ನಿರ್ಧಾರ ಡಾ: ಮನಮೋಹನ್ ಸಿಂಗ್‌ರಂಥ ವ್ಯಕ್ತಿ ಪ್ರಧಾನ ಮಂತ್ರಿಯಾಗಿರುವಂಥ ಕಾಲದಲ್ಲಿ ಆಗದೇ ಇದ್ದರೆ ಮುಂದೆ ಎಂದೂ ಆಗುವುದಿಲ್ಲ. ಅದಕ್ಕೋಸ್ಕರ ನಾನು ಹೇಳಿರುವಂಥದ್ದು ಯಾವುದೇ ಕಾನೂನುಗಳನ್ನು ನಾವೇ ಮಾಡಿರುವಂಥದ್ದು ನಮ್ಮ ದೇಶದ, ರಾಜ್ಯದ ನೆಲದ ಈ ಕಾನೂನುಗಳನ್ನು ಮಾಡಿರುವಂಥದ್ದು. ನಮ್ಮ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಬೇಕಾದಂಥ ತಿದ್ದುಪಡಿಯನ್ನು ತಂದು, enough is enough ಎಂದು ಮಾಡಿದರೆ, ಇಲ್ಲಿ ಯಾರು ಮುಖ್ಯಮಂತ್ರಿಯಾಗಿರುತ್ತಾರೆ, ಎಷ್ಟು ದಿವಸ ಇರುತ್ತಾರೆ, ಇದು ಶಾಶ್ವತವೂ ಅಲ್ಲ. ಇದಕ್ಕೆ ಒಂದು ಕೊನೆ ಮಾಡೋಣ. ನಮ್ಮ ಸಂಪತ್ತನ್ನು ಉಳಿಸೋಣ, ಅದರ ಬಗ್ಗೆ ಸುದೀರ್ಘವಾದ ಚರ್ಚೆ, forest act, ಮತ್ತೊಂದು ಏನು ಇದೆ, ಅದೆಲ್ಲವನ್ನು ತಾವು ಹೇಳುತ್ತಿದ್ದೀರಿ. ಈಗ 6 ಗಂಟೆ ಸಮಯವಾಗಿದೆ, ತಾವು

ನಾಳೆ ಬೆಳಿಗೆ ತಮ್ಮ ಭಾಷಣವನ್ನು ಮುಂದುವರೆಸಿ, ಇದು ಅತ್ಯಂತ ಮಹತ್ವವಾದಂಥದ್ದು ಆಗಿದೆ. ಯಾವುದೋ ಸಣ್ಣ ಪುಟ್ಟ ಘಟನೆಗಳು ಅಲ್ಲಿ ಆಗುತ್ತಿದೆ. ಇಲ್ಲಿ ಅಗುತ್ತಿದೆಯೆನ್ನುವಂಥದ್ದನ್ನು ಬಿಟ್ಟು, ಇಂಥ ದೊಡ್ಡ ಮಹತ್ತರವಾದ ಚರ್ಚೆಯನ್ನು ಮಾಡುವುದರಿಂದ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುವುದಾದರೆ ಅದು ಸಾರ್ಥಕವಾಗುತ್ತದೆ. ಇಂಥವರ ಕಾಲದಲ್ಲಿ ಇದನ್ನು ಅಂತಿಮಗೊಳಿಸಿದರು, ಇದರಿಂದ ಇಡೀ ದೇಶಕ್ಕೆ ಹೊಸ ಮಾರ್ಗದರ್ಶನ ಸಿಕ್ಕಿತು, ಮಾನ್ಯ ಪ್ರಧಾನ ಮಂತ್ರಿಯವರು ಇದಕ್ಕೆ ಸ್ಪಂದಿಸಿದರೆನ್ನುವಂಥದ್ದು ಅಗುತ್ತದೆಂಬುದಕೋಸ್ಕರ ನಾನು ಮಾತನಾಡಿದೆ. ಇದರಲ್ಲಿ ದೊಡ್ಡಸ್ತಿಕೆ ಮಾತುಗಳು ಏನೂ ಇಲ್ಲ. ಅದಕ್ಕೆ ನಾನು ಎಲ್ಲರನ್ನು consult ಮಾಡಿ ಮಾನ್ಯ ಪ್ರಧಾನಮಂತ್ರಿಯವರಿಗೆ ಪತ್ರವನ್ನು ಬರೆದಿದ್ದು. ಇದರ ಪರಿಣಾಮಗಳು ಏನೆಂಬ ಅರಿವು ನನಗಿದೆ, ಇಷ್ಟು ಆದರೂ ಸಹ ನಾನು ಈ ಮಾಫಿಯಾವನ್ನು ಕೊನೆ ಮಾಡಬೇಕೆಂಬ ನಿರ್ಧಾರಕ್ಕೆ ಬಂದಿರುವಂಥದ್ದು. ಅದಕ್ಕೆ value added ಎನ್ನುವ ತೀರ್ಮಾನವನ್ನು ತೆಗೆದುಕೊಂಡಿರುವಂಥ ದೇಶದ ಮೊದಲನೇ ಮುಖ್ಯಮಂತ್ರಿ ಯಡಿಯೂರಪ್ಪ ಎನ್ನುವಂಥದ್ದು. ಇದನ್ನು ತಾವು appreciate ಮಾಡಿ, ಅದಕ್ಕೆ ಬೇಕಾದ ಸಹಕಾರವನ್ನು ಕೊಡಿ. ನಾವು ಮುಂದೆ ಹೆಜ್ಜೆಯನ್ನು ಇಡೋಣ. ಈಗ ಮಾನ್ಯ ಅಧ್ಯಕ್ಷರು, ಒಪ್ಪಿಗೆಯನ್ನು ಕೊಡುವುದಾದರೆ ತಾವು ಭಾಷಣವನ್ನು ನಾಳೆ ಮುಂದುವರೆಸಿ. ತಾವು ಆನೇಕ ಪ್ರಮುಖವಾದ ವಿಚಾರಗಳನ್ನು ಬೆಳಕಿಗೆ ತರುತ್ತಿದ್ದೀರಿ. ನೀವು ಕೊಟ್ಟಂಥ ಸಲಹೆಗಳ ಬಗ್ಗೆ ನಾನು ನನ್ನ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡುತ್ತೇನೆ. ಇದಕ್ಕೆ ಪರಿಹಾರ ಹುಡುಕೋಣ, ಅಗತ್ಯವಾದರೆ ಇದನ್ನು ಕೊನೆ ಮಾಡುವುದಕ್ಕೆ ನಿಮ್ಮನ್ನೆಲ್ಲ ಒಳಗೊಂಡ ಒಂದು ಸಭೆಯನ್ನೇ ಕರೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ವಿಚಾರಗಳು ಅಡಕವಾಗಿವೆ. ಮಾನ್ಯ ಮುಖ್ಯಮಂತ್ರಿಗಳು ಹೇಳುವ ವಿಚಾರದಲ್ಲಿ ಒಂದು ಕಡೆಗೆ value addition ಗೆ ಒತ್ತನ್ನು ಕೊಟ್ಟು, export ಆಗತಕ್ಕಂಥದ್ದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬೇಕೆನ್ನುವುದಕ್ಕೆ ನಮ್ಮ ಸಹಕಾರ ಇದೆ. ಇದಕ್ಕೆ ಬೇಕಾದರೆ ನಾವು ಒಂದು resolution move resolution ತಂದು move ಮಾಡಿ, ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡೋಣ. ಆಮೇಲೆ ಅಲ್ಲಿಗೆ ಹೋಗಿ ಚರ್ಚೆ ಮಾಡೋಣ. That is one think. ಅದರೆ ಇಲ್ಲಿ illegal ಆಗಿ ಹೊರಗೆ ಹೋಯಿತಲ್ಲಾ, ಇದರಿಂದ ಸರ್ಕಾರಕ್ಕೆ ಮೋಸವಾಯಿತು. ಅವರಿಗೆ ದುಡ್ಡು ಬರಲಿಲ್ಲವೆಂದಲ್ಲ, ಅವರಿಗೆ ದುಡ್ಡು ಬಂತು. ಇದು ಯಾರ ಕಿಸೆಗೆ ಹೋಯಿತು, ಅದು ಶ್ರೀಯಡಿಯೂರಪ್ಪನವರ ಕಿಸೆಗೆ ಬರಲಿಲ್ಲ. ಈ ಹಣ ಸರ್ಕಾರದ ಬೊಕ್ಕಸಕ್ಕೆ ಬರಲಿಲ್ಲ. ಯಾರೋ ಕೆಲವರ ಕೈಗೆ ಹೋಯಿತಲ್ಲಾ ಎಂಬುದು ನಮ್ಮ ಖೇದವಾಗಿದೆ, ದು:ಖವಾಗಿದೆ. ಈ ಸಂಪತ್ತು ಯಾರಿಗೋಸ್ಕರ? ಅಂಬಾನಿಯವರ

Gas caseಗೆ Supreme Court ನವರು judgment ಕೊಟ್ಟರು. Natural resources are the property of the country, property of the State ಎನ್ನುವಂಥ ಮಾತನ್ನು ಹೇಳಿದರು. ಇದನ್ನು ನಾವು ತೀರ್ಮಾನ ಮಾಡಬೇಕಾಗಿರುವಂಥವರು. ಇದರ ಲಾಭ ಕೆಲವೇ ಜನರಿಗೆ ಆಗುವಂಥದ್ದು. ಅದನ್ನು ನಾವು ತಪ್ಪಿಸುವುದರಲ್ಲಿ ವಿಪಲವಾಯಿತಲ್ಲಾ ಎಂದು. ಮಾನ್ಯ ಯಡಿಯೂರನವರೆ, ನಾವು ಆರೋಪವನ್ನು ಮಾಡಬೇಕೆಂದರೆ ಅಧಿಕಾರಿಗಳ ಮೇಲೆ ಮಾಡುವುದಕ್ಕೆ ಆಗುವುದಿಲ್ಲವೆಂದ ಮೇಲೆ ಯಾರ ಮೇಲೆ ಮಾಡಬೇಕೆಂದರೆ ಮುಖ್ಯಮಂತ್ರಿಯವರ ಮೇಲೆ ಮಾಡಬೇಕು. you are the executive head of the state. You are controlling the whole department. Morally, financially, eyerything you are responsible for all the commissions and omissions. ಆ ಕಾರಣಕ್ಕೋಸ್ಕರ ನಾವು ಇಲ್ಲಿ ನಿಲುವಳಿ ಸೂಚನೆಯನ್ನು ತಂದು ಲೋಕಾಯುಕ್ತರು ರಾಜೀನಾಮೆಯನ್ನು ಕೊಟ್ಟಿರುವಂಥದ್ದು. ನಾನು ಮತ್ತೆ ಹೇಳುವುದನೆಂದರೆ, It is only they have investigated, that is not a final verdict. ಅದರ ಮೇಲೆ ನೀವು ಏಕೆ action ತೆಗೆದುಕೊಳ್ಳಲಿಲ್ಲ? ಇದು ಒಂದಾ, ಹತ್ತಾ, ನೂರಾರು, ಆಗಿದ್ದು, ಇದರ ಮೇಲೆ ನೀವು ಏಕೆ action ತೆಗೆದುಕೊಳ್ಳಲಿಲ್ಲ? ನೀವು action ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಿದ್ದರೆ, ಒಂದು ಒಳ್ಳೆಯ message ಹೋಗುತ್ತಿತ್ತು. ಮಾನ್ಯ ಯಡಿಯೂರಪ್ಪನವರೆ ಇವತ್ತು ಆ message ಹೋಗಿಲ್ಲ. ನಾನು ನನ್ನ ಮತಕ್ಷೇತ್ರದ ಪಕ್ಕದಲ್ಲೆ ಒಂದು ಹೊಸದಾಗಿ ಇರುವಂಥ Forest layer ನಲ್ಲಿ ನಾನು ಇಲ್ಲಿ ಯಾರನ್ನು name ಮಾಡುವುದಕ್ಕೆ ಹೋಗುವುದಿಲ್ಲ. ಆ ಆಸಾಮಿ ನಮಗೆಲ್ಲಾ ಗೊತ್ತಿರುವವನಾಗಿದ್ದಾನೆ. ಇವನು ನೂರು ಎಕರೆಯಲ್ಲಿ ಅದಿರು ತೆಗೆಯುವುದಕ್ಕೆ ಹೊರಟ್ಟಿದ್ದಾನೆ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಅವರು ಯಾರೆಂದು ಬೇಕಾದರೆ ಕಿವಿಯಲ್ಲಿ ಹೇಳುತ್ತೇನೆ. ಇವನು ಒಬ್ಬ ವ್ಯಕ್ತಿ ಸುಮಾರು ನೂರು ಕೋಟಿ ರೂಪಾಯಿಗಳ ಮೇಲೆ ಮಾಡಿರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ತುಮಕೂರು ಜಿಲ್ಲೆಯಲ್ಲಿ ಏನು ನಡೆಯಿತು ಎನ್ನುವುದು ನಿಮಗೆ ಗೊತ್ತಿದೆ. ಕಾನೂನು ಬಾಹಿರವಾಗಿ ಲಾರಿಗಳು ಬರಬೇಕಾದರೆ, ಪ್ರತಿ ಲಾರಿಗೆ ಇಷ್ಟು ಎಂದು ಹಣ ಸಂಗ್ರಹ ಮಾಡಿ, ಅದರಿಂದ ತುಮಕೂರು ಜಿಲ್ಲೆಯ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ ಹಣ ಸಂಗ್ರಹ ಮಾಡಲು ಅಧಿಕಾರಿಗಳಿಗೆ ಅವಕಾಶ ಮಾಡಿಕೊಟ್ಟಂಥವರು ನಾವು. ಹೌದಲ್ಲವೇ? ಇದು open secret ಅಲ್ಲವೇ? ಕಾನೂನು ಬಾಹಿರವಾಗಿ 15 ಟನ್ ತರುವ ಕಡೆ 25–30 ಟನ್ ತಂದರೆ, ಪ್ರತಿ ಲಾರಿಗೆ ಇಷ್ಟು ಎಂದು ವಸೂಲು ಮಾಡಿ, ಅದನ್ನು ಗುಪ್ತ ಹಣ ಎಂದು ತೆಗೆದಿಟ್ಟು, ಆ ಜಿಲ್ಲೆಯ ಅಭಿವೃದ್ಧಿಗೆ

ಉಪಯೋಗ ಮಾಡಿಕೊಳ್ಳುವಂಥ ಹೀನ ಮಟ್ಟಕ್ಕೆ ಹೋದಂಥವರು ನಾವು. ಇದು ನಡೆಯುತ್ತಿರುವುದು ನಿನ್ನೆ ಮೊನ್ನೆಯಿಂದಲ್ಲ. ಟೋಲ್‌ನಲ್ಲಿ ಬರುವ ಲಾರಿಗಳಿಗೆ ಬೇನಾಮಿ ಗುರುತುಗಳನ್ನಿಟ್ಟುಕೊಂಡು ವಸೂಲು ಮಾಡಲು 8–10 ವರ್ಷಗಳಿಂದ ಅವಕಾಶ ಮಾಡಿಕೊಟ್ಟಿದ್ದೇವೆ. ಹಾಗಾಗಿಯೇ, ಪ್ರತಿ ಲಾರಿಗೆ 500 ಅಥವಾ 1,000 ರೂಪಾಯಿಗಳ ದಂಡ ಹಾಕಲು ನಾನು ಏಕೆ ಹೊರಟಿದ್ದೇನೆ ಎಂದರೆ ಅದರ ಅಕೌಂಟ್ ಸಿಗುತ್ತದೆ. ಉತ್ತರ ಕೊಡುವಾಗ ನಾನು ಎಲ್ಲವನ್ನೂ ಹೇಳುತ್ತೇನೆ. ಟೋಲ್ ಬಗ್ಗೆ ನಾನು ಏನು ಮಾಡಿದ್ದೇನೆ, ಲಾರಿಗಳಿಂದ ವಸೂಲು ಮಾಡಲು ನಾನು ಏನು ಸರ್ಕಾರಿ ಆಜ್ಞೆ ಹೊರಡಿಸಿದ್ದೇನೆ ಎಲ್ಲ ಮಾಹಿತಿಯನ್ನು ನಾನು ಕೊಡುತ್ತೇನೆ. ಮಧ್ಯದಲ್ಲಿ ನಾನು ಏಕೆ ಎದ್ದು ಹೇಳಿದೆ ಏಂದರೆ, ತುಮಕೂರು ಜಿಲ್ಲೆ ನಿಮಗೆ ಪರಿಚಯವಿರುವುದರಿಂದ, ಗೊತ್ತಿರುವುದರಿಂದ ಹೇಳಿದೆ. ಇದನ್ನು ನಾನು ಈಗ ಕೊನೆ ಮಾಡಿದ್ದೇನೆ, ಈ ಪಾಪದ ದುಡ್ಡು ಬೇಡ ಎಂದು ಇದನ್ನು ನಿಲ್ಲಿಸಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ: ಲಾರಿಗಳು ಅಕ್ರಮವಾಗಿ ಹೋಗುತ್ತಿದ್ದರೆ, ಅವರನ್ನು ಹಿಡಿದು punish ಮಾಡಬೇಕು. ಅದರಲ್ಲೂ ವಸೂಲು ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿಗಳೇ ಹೇಳಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಯಡಿಯೂರಪ್ಪನ ವಿಶೇಷವೇ ಅದು. ಈ ಮನೆಯಲ್ಲಿ ನಿಂತುಕೊಂಡು ನಾನು ಯಾವುದನ್ನೂ ಮುಚ್ಚುಮರೆ ಮಾಡುವುದಕ್ಕೆ ರೆಡಿ ಇಲ್ಲ. ಈ ದಂಧೆ, ದಲ್ಲಾಳಿಗಳ ವಿಷಯ ಇಲ್ಲಿರುವಂಥ ಎಲ್ಲರಿಗೂ ಗೊತ್ತಿರುವಂಥದೇ ಆಗಿದೆ. ಆಡಳಿತ ಪಕ್ಷದವರಿಗೆ ಗೊತ್ತಿಲ್ಲವೇ? ಅಥವಾ ವಿರೋಧ ಪಕ್ಷದವರಿಗೆ ಗೊತ್ತಿಲ್ಲವೇ? ಇದೆಲ್ಲ ಏನು ಎಂದು ಹಿಂದೆ ಅಧಿಕಾರ ಮಾಡಿದವರಿಗೆ ಗೊತ್ತಿಲ್ಲವೇ? ಇದನ್ನು ಕೊನೆ ಮಾಡಲು ಸಲಹೆ ಕೊಡಿ ಎಂದು ಜಯಚಂದ್ರವರಿಗೆ ಹೇಳಿದ್ದೇನೆ. ಇದಕೋಸ್ಕರ ನಾನು ಗಟ್ಟಿಯಾಗಿ ನಿಂತಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ: ನಿಮಗೆ ಗೊತ್ತಿಲ್ಲ ಎಂದೇನಿಲ್ಲ. ನಿಮಗೆ ಎಲ್ಲವೂ ಗೊತ್ತಿದೆ. ಅಕ್ರಮವಾಗಿ ಹೋಗುವಂಥ ಲಾರಿಗಳಿಂದ ಹಣವನ್ನು ವಸೂಲು ಮಾಡಿ ಅದನ್ನು ಅಭಿವೃದ್ಧಿಗೆ ಹಾಕುತ್ತೇವೆ ಎಂದರೆ.........

ಶ್ರೀ ಬಿ.ಎಸ್. ಯಡಿಯೂರಪ್ಪ: ಇದು ಸುಳ್ಳೇ?

ಡಾ: ಹೆಚ್.ಸಿ. ಮಹದೇವಪ್ಪ: ನಾನು ಅದನ್ನು ಸುಳ್ಳು ಎಂದು ಹೇಳುತ್ತಿಲ್ಲ. ಅದರ ವಿರುದ್ಧವಾಗಿ ಕಠಿಣವಾದ ಕ್ರಮವನ್ನು ನೀವೇ ತೆಗೆದುಕೊಳ್ಳದಿದ್ದರೆ ಇನ್ಯಾರು ತೆಗೆದುಕೊಳ್ಳುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಈಗ ಅದನ್ನು ನಿಲ್ಲಿಸಿದ್ದೇನೆ. ಈ ರಾಜ್ಯ ಸರ್ಕಾರದ ಯಾವುದೇ ಸಚಿವರ ಬಗ್ಗೆ, ಯಾವುದೇ ಇಲಾಖೆ ಬಗ್ಗೆ ನೀವು ಏನೇ ಮಾತನಾಡಿದರೂ ಅದಕ್ಕೆ ನಾನು ಜವಾಬ್ದಾರ. ನನ್ನ ಬಳಿ ಕೇವಲ Forest department ಇದೆ, ಇನ್ನೊಂದು ಇಲಾಖೆ ಇದೆ ಎಂದಲ್ಲ, ಏನೇ ಇದ್ದರೂ ಅದು ನನ್ನ ಜವಾಬ್ದಾರಿ. ಅದೇ ರೀತಿ ಅದು ನನ್ನ ಸಚಿವ ಸಂಪುಟದ ಜವಾಬ್ದಾರಿ. ಅದಕ್ಕಾಗಿಯೇ ನಾನು ಹೇಳುತ್ತಿರುವುದು, ಪ್ರತಿಯೊಂದು ವಿಷಯದಲ್ಲೂ 4–5 ದಿವಸ ಚರ್ಚೆ ಮಾಡೋಣ, ಸಾಧ್ಯವಾದರೆ ಇದನ್ನು ಕೊನೆ ಮಾಡಲು ಏನೇನು ಸಲಹೆಗಳನ್ನು ಕೊಡಬೇಕೋ ಕೊಡಿ, ಅದಕ್ಕೆ ನಾನು ಸಿದ್ಧನಿದ್ದೇನೆ ಎಂದು ಹೇಳುತ್ತಿದ್ದೇನೆ. ತುಮಕೂರಿನ ನಿಮಗೆಲ್ಲ ವಿಷಯ ಗೊತ್ತಿರುವುದರಿಂದ ಅದನ್ನು ಉದಾಹರಣೆಯಾಗಿ ಕೊಟ್ಟೆ ಅಷ್ಟೇ. ಇದರಲ್ಲಿ ಗುಟ್ಟೇನಿಲ್ಲ. ಈ ವಿಷಯದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ, ನಾನು ಬಂದ ಮೇಲೆ ಅದನ್ನು ನಿಲ್ಲಿಸಿದ್ದೇನೆ.

ಅಧ್ಯಕ್ಷರು: ಜಯಚಂದ್ರರವರೇ ನೀವು ನಾಳೆ ಮುಂದುರಿಸಿ.

ಶ್ರೀ ಟಿ.ಬಿ. ಜಯಚಂದ್ರ: ಆಯಿತು.

ಗಮನ ಸೆಳೆಯುವ ಸೂಚನೆಗಳು

ವಿಷಯ: **ಕನಕಪುರ ಟೌನಿನ ಜನರು ಕಲುಷಿತ ಕುಡಿಯುವ ನೀರಿನಿಂದ ತೊಂದರೆಗೊಳಗಾಗಿದ್ದು, ಅವರಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ.**

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ): ಮಾನ್ಯ ಅಧ್ಯಕ್ಷರೆ, ಕನಕಪುರ ಟೌನಿನ ಜನರು ಕಲುಷಿತ ಕುಡಿಯುವ ನೀರಿನಿಂದ ತೊಂದರೆಗೊಳಗಾಗಿದ್ದು, ಅವರಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಕೆ. ಶಿವಕುಮಾರ್‌ರವರು ನಿಯಮ 73ರಡಿಯಲ್ಲಿ ಸರ್ಕಾರದ ಗಮನ ಸೆಳೆದಿರುವ ವಿಷಯಕ್ಕೆ ಈ ರೀತಿ ಉತ್ತರ ಕೊಡುತ್ತಿದ್ದೇನೆ.

ಕನಕಪುರ ಪಟ್ಟಣದಲ್ಲಿ ಪ್ರಸ್ತುತ 60,000 ಜನಸಂಖ್ಯೆ ಇದೆ. ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ತರುವ ವ್ಯವಸ್ಥೆಯು ಕನಕಪುರ ಪಟ್ಟಣದ